ಪ್ರವಾಸೀ ಕೇಂದ್ರಗಳಲ್ಲಿ ಕಿರು ಉದ್ಯಮಗಳ ಅಭಿವೃದ್ಧಿ
ಒಂದು ಅಧ್ಯಯನ

ಕನ್ನಡ ವಿಶ್ವವಿದ್ಯಾನಿಲಯ ಹಂಪಿ ಅಭಿವೃದ್ಧಿ ಅಧ್ಯಯನ ಎಂ. ಫಿಲ್

ಪದವಿಗಾಗಿ

ಸಾದರ ಪಡಿಸಿದ ಸಂಪ್ರಬಂಧ

ಸಂಶೋಧಕರು

ಸವಿತ

ಮಾರ್ಗದರ್ಶಕರು

ಪ್ರೊ ॥ ಡಾ ॥ ಗೋವಿಂದ ಭಟ್

೨೦೧೩

ಟಕ ತಿಯೋಲಾಜಿಕಲ್ ಸಂಶೋಧನಾ ಕೇಂದ್ರ

ಬಲ್ಮಠ, ಮಂಗಳೂರು – ೫೭೫ ೦೦೧

1089

ಪ್ರವಾಸೀ ಕೇಂದ್ರಗಳಲ್ಲಿ ಕಿರು ಉದ್ಯಮಗಳ ಅಭಿವೃದ್ಧಿ
ಒಂದು ಅಧ್ಯಯನ

ಕನ್ನಡ ವಿಶ್ವವಿದ್ಯಾನಿಲಯ ಹಂಪಿ ಅಭಿವೃದ್ಧಿ ಅಧ್ಯಯನ ಎಂ. ಫಿಲ್ ಪದವಿಗಾಗಿ

ಸಾದರ ಪಡಿಸಿದ ಸಂಪ್ರಬಂಧ

ಸಂಶೋಧಕರು

ಸವಿತ

ನೋಂದಾವಣಿ ಸಂಖ್ಯೆ: **KTSMDS - 00622**

ಮಾರ್ಗದರ್ಶಕರು

ಪ್ರೊ ॥ ಡಾ ॥ ಗೋವಿಂದ ಭಟ್

೨೦೧೩

ಕರ್ನಾಟಕ ತಿಯೋಲಾಜಿಕಲ್ ಸಂಶೋಧನಾ ಕೇಂದ್ರ

ಬಲ್ಮಠ, ಮಂಗಳೂರು – ೫೭೫ ೦೦೧

ಯೋಗ್ಯತಾ ಪತ್ರ

ಸವಿತ ಅವರು ನನ್ನ ಸಲಹೆ ಮತ್ತು ಮಾರ್ಗದರ್ಶನದಲ್ಲಿ **"ಪ್ರವಾಸೀ ಕೇಂದ್ರಗಳಲ್ಲಿ ಕಿರು ಉದ್ಯಮಗಳ ಅಭಿವೃದ್ಧಿ ಒಂದು ಅಧ್ಯಯನ"** ಎಂಬ ಶೀರ್ಷಿಕೆಯ ಈ ಸಂಪ್ರಬಂಧವನ್ನು ಎಂ.ಫಿಲ್. ಪದವಿ ಪ್ರಾಪ್ತಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕೆಂದು ಸಿದ್ಧಪಡಿಸಿದ್ದಾರೆ. ಈ ಸಂಪ್ರಬಂಧವು ಸಂಶೋಧಕರ ಸ್ವಂತ ಪರಿಶ್ರಮ, ವಿಶ್ಲೇಷಣೆ, ಅಭಿಪ್ರಾಯ ಸಂಗ್ರಹ ಮತ್ತು ಸಂಶೋಧನೆಯ ಫಲ ಸ್ವರೂಪವಾಗಿದೆ. ಇವರು ಸಂಪ್ರಬಂಧದ ವಿಷಯವನ್ನು ಅಥವಾ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಲಿ ಅಥವಾ ಇನ್ನಿತರ ಉದ್ದೇಶಗಳಿಗಾಗಿಯಾಗಲಿ ಬಳಸಿಕೊಂಡಿಲ್ಲ.

ಡಾ। ಗೋವಿಂದ ಭಟ್

ಸಂಶೋಧನಾ ಮಾರ್ಗದರ್ಶಕರು,

ಕರ್ನಾಟಕ ತಿಯೋಲಾಜಿಕಲ್ ಸಂಶೋಧನ ಕೇಂದ್ರ

ಬಲ್ಮಠ, ಮಂಗಳೂರು.

<u>ಪ್ರಮಾಣ ಪತ್ರ</u>

ಕನ್ನಡ ವಿಶ್ವವಿದ್ಯಾಲಯ ಹಂಪಿಗೆ ಎಂ.ಫಿಲ್ ಪದವಿಗಾಗಿ ಸಾದರ ಪಡಿಸಿದ **"ಪ್ರವಾಸೀ ಕೇಂದ್ರಗಳಲ್ಲಿ ಕಿರು ಉದ್ಯಮಗಳ ಅಭಿವೃದ್ಧಿ ಒಂದು ಅಧ್ಯಯನ"** ಈ ಸಂಪ್ರಬಂಧವು ನನ್ನ ಸ್ವತಂತ್ರ ಕೃತಿಯಾಗಿದ್ದು ವಿಶ್ಲೇಷಣೆ ಮತ್ತು ಅಧ್ಯಯನದ ಫಲೋದಯವಾಗಿದೆ. ಮಂಗಳೂರಿನ ಕರ್ನಾಟಕ ತಿಯೋಲಾಜಿಕಲ್ ಸಂಶೋಧನಾ ಕೇಂದ್ರದಲ್ಲಿ ಡಾ। ಗೋವಿಂದ ಭಟ್ ಅವರ ಮಾರ್ಗದರ್ಶನದಲ್ಲಿ ಸಿದ್ಧ ಪಡಿಸಿದ ಈ ಸಂಪ್ರಬಂಧವನ್ನು ಬೇರಾವುದೇ ಪದವಿ, ಡಿಪ್ಲೋಮಾ ಅಥವಾ ತತ್ಸಮಾನ ಉಪಾಧಿಗಳ ಪ್ರಾಪ್ತಿಗಾಗಿ ಅಥವಾ ಆರ್ಥಿಕ ಲಾಭಕ್ಕಾಗಿ ಇಡಿಯಾಗಿ ಅಥವಾ ಬಿಡಿಯಾಗಿ ಬಳಸಿಕೊಂಡಿಲ್ಲವೆಂದು ನಾನು ಈ ಮೂಲಕ ದೃಢಪಡಿಸುತ್ತೇನೆ.

Savitha

ಸವಿತ

ಸಂಶೋಧಕರು

ಕರ್ನಾಟಕ ತಿಯೋಲಾಜಿಕಲ್ ಸಂಶೋಧನ ಕೇಂದ್ರ

ಬಲ್ಮಠ, ಮಂಗಳೂರು.

ಕೋಷ್ಟಕಗಳ ಪಟ್ಟಿ

ಪ್ರವಾಸೀ ಕೇಂದ್ರಗಳಲ್ಲಿ ಕಿರು ಉದ್ಯಮಗಳ ಅಭಿವೃದ್ಧಿ
ಒಂದು ಅಧ್ಯಯನ

ಅಧ್ಯಯನದ ವಿವರಗಳು

ಅಧ್ಯಾಯ – ೧

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ಮಹತ್ವ

ಅಧ್ಯಾಯ – ೧

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ಮಹತ್ವ

೧.೧ ಪೀಠಿಕೆ

ಆರ್ಥಿಕಾಭಿವೃದ್ಧಿಯ ಪರಿಕಲ್ಪನೆಯು ಇತ್ತೀಚಿನ ವರ್ಷಗಳಲ್ಲಿ ಬದಲಾವಣೆಯನ್ನು ಕಂಡುಕೊಂಡಿದೆ. ಇದಕ್ಕೆ ಮುಖ್ಯ ಕಾರಣವೆಂದರೆ ಅಭಿವೃದ್ದಿಯಲ್ಲಿ ಶಿಕ್ಷಣ ಮತ್ತು ಪರಿಸರದ ಮಹತ್ವ ಅರಿವಾಗಿರುವುದು. ಜೊತೆಗೆ, ವ್ಯವಹಾರ ಲೋಕದ ಚಟುವಟಿಕೆಗಳಲ್ಲಿ ವಸ್ತುಗಳ ವಿನಿಮಯ ಹೆಚ್ಚಾಗಿ ಆರ್ಥಿಕ ಚಟುವಟಿಕೆಗಳು ವಿಸ್ತರಣೆಗೊಂಡಿರುವುದು. ಇದರಿಂದಾಗಿ ಇತ್ತೀಚಿನ ದಿನಗಳಲ್ಲಿ ಆರ್ಥಿಕ ಅಭಿವೃದ್ಧಿಯಲ್ಲಿ ಸೇವಾ ರಂಗದ ಮಹತ್ವವು ಹೆಚ್ಚಿದೆ. ಮೊದಲು ಕೃಷಿ ಕ್ಷೇತ್ರ ಮತ್ತು ಕೈಗಾರಿಕಾ ಕ್ಷೇತ್ರದ ಮಹತವನ್ನು ಹೆಚ್ಚು ಪರಿಗಣಿಸಲಾಗಿದ್ದು, ಇತ್ತೀಚಿನ ದಿನಗಳಲ್ಲಿ ಕೈಗರಿಕಾಭಿವೃದ್ಧಿಯ ಜೊತೆಗೆ ಸೇವಾ ಕ್ಷೇತ್ರದ ವಿಸ್ತರಣೆಯು ಗಮನಾರ್ಹವಾಗಿ ಹೆಚ್ಚುತ್ತಿದೆ.

ಸೇವಾ ಕ್ಷೇತ್ರದಲ್ಲಿ ಮಹತ್ವವನ್ನು ನಡೆದಿರುವ ಚಟುವಟಿಕೆ ಎಂದರೆ ಪ್ರವಾಸೋದ್ಯಮ ಪ್ರವಾಸೋದ್ಯಮದ 'ಪ್ರಾಮುಖ್ಯತೆ ಆರ್ಥಿಕಾಭಿವೃದ್ಧಿಯಲ್ಲಿ ಇತ್ತೀಚಿನ ದಿನಗಳಲ್ಲಿ ಗಮನಾರ್ಹವಾಗಿ ಹೆಚ್ಚಿದೆ. ಪ್ರವಾಸೋದ್ಯಮದ ಕುರಿತಾಗಿ ಅನೇಕ ಅಧ್ಯಯನಗಳು ನಡೆಯುತ್ತಿವೆ. ಈ ಅಧ್ಯಯನಗಳು, ಆರ್ಥಿಕಾಭಿವೃಧಿಯಲ್ಲಿ ಪ್ರವಾಸೋದ್ಯಮದ ಪಾತ್ರ ಉದ್ಯೋಗ, ಕೃಷಿ, ಸಾಮೂಹಿಕ ಪರಿವರ್ತನೆ, ಸಾಂಸ್ಕೃತಿಕ ಪರಿವರ್ತನೆ ಪ್ರವಾಸೋದ್ಯಮದ ನಿರ್ವಹಣೆ ಇತ್ಯಾದಿ ಅಂಶಗಳನ್ನು ವಿಶ್ಲೇಷಣೆ ಮಾಡಿರುವುದನ್ನು ನಾವು ಗಮನಿಸಬಹುದು.

ಪ್ರವಾಸೋದ್ಯಮ ಎಂದರೆ ಪ್ರವಾಸಕ್ಕೆ ಸಂಬಂಧಿಸಿದ ವಿಷಯ. ಮನುಷ್ಯ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ನಿರ್ದಿಷ್ಟ ಉದ್ದೇಶವನ್ನು ಇಟ್ಟುಕೊಂಡು ಪ್ರವಾಸ ಹೋಗುವುದು ಸರ್ವಸಾಮಾನ್ಯ. ಪ್ರವಾಸ ಹೋಗುವ ಉದ್ದೇಶಗಳಲ್ಲಿ ಮುಖ್ಯವಾಗಿ ವ್ಯಾಪಾರ, ಶಿಕ್ಷಣ, ವೈದ್ಯಕೀಯ, ಚಾರಣ ಮತ್ತು ಪುಣ್ಯ ಕ್ಷೇತ್ರಗಳ ಸಂದರ್ಶನ ಆಗಿರುತ್ತದೆ.

ಪ್ರವಾಸೋದ್ಯಮದ ಒಂದು ವ್ಯಾಖ್ಯೆಯು ಪ್ರಕಾರ ಒಬ್ಬ ವ್ಯಕ್ತಿ ತನ್ನ ವಾಸ ಸ್ಥಳದಿಂದ ಕಡಿಮೆ ಪಕ್ಷ ೨೪ ಗಂಟೆಗಳ ಕಾಲ ಬೇರೆ ಪ್ರದೇಶಕ್ಕೆ ವಲಸೆ ಹೋಗಿರಬೇಕು. ಪ್ರವಾಸಗಳು

ಸ್ಥಳೀಯವಾಗಿರಬಹುದು ಅಥವಾ ಅಂತರ್ ರಾಷ್ಟ್ರೀಯ ಮಟ್ಟಗಳಲ್ಲಿ ಇರಬಹುದು. ಪ್ರವಾಸೋದ್ಯಮವನ್ನು ಮುಖ್ಯವಾಗಿ ಮೂರು ಉತ್ಪನ್ನಗಳಿಗೆ ವಿಂಗಡಿಸಲಾಗಿದೆ.

೧. ಪ್ರಾಕೃತಿಕ ಪ್ರವಾಸೀ ಕೇಂದ್ರಗಳು

೨. ಧಾರ್ಮಿಕ ಪ್ರವಾಸೀ ಕೇಂದ್ರಗಳು

೩. ವೈದ್ಯಕೀಯ ಪ್ರವಾಸೀ ಕೇಂದ್ರಗಳು

ಪ್ರಾಕೃತಿಕ ಪ್ರವಾಸೀ ಕೇಂದ್ರಗಳು ಮುಖ್ಯವಾಗಿ ಉದ್ಯಾವನ, ಪಕ್ಷಿದಾಮ, ಪ್ರಾಣಿ ಸಂಗ್ರಹಾಲಯ, ಸಮುದ್ರ ತೀರ, ಜಲಪಾತ, ಗುಡ್ಡಪ್ರದೇಶಗಳು ಹಾಗೂ ವಿಶೇಷ ಪ್ರಾಕೃತಿಕ ಸೌಂದರ್ಯವನ್ನು ಹೊಂದಿರುವ ತಾಣಗಳಾಗಿರುತ್ತವೆ. ಸಾಮಾನ್ಯವಾಗಿ ಈ ಕೇಂದ್ರಗಳು ಪ್ರಾಕೃತಿಕ ವಿಶೇಷಿತ ಪಡೆದಿದ್ದು ಪ್ರವಾಸಿಗಳನ್ನು ಆಕರ್ಷಿಸುತ್ತವೆ. ಇವುಗಳು ಪ್ರಕೃತ್ತಿಯ ಅಪರೂಪದ ವೈಶಿಷ್ಟಗಳನ್ನು ಹೊಂದಿರುತ್ತದೆ.

ಧಾರ್ಮಿಕ ಪ್ರವಾಸೀ ಕೇಂದ್ರಗಳು ಧಾರ್ಮಿಕವಾಗಿ ವೈಶಿಷ್ಟ್ಯತೆಯನ್ನು ಹೊಂದಿದ್ದು ಪ್ರವಾಸಿಗಳನ್ನು ಆಕರ್ಷಿಸುತ್ತವೆ. ಇವುಗಳು ಮುಖ್ಯವಾಗಿ ಭಾರತದಲ್ಲಿ ಹೆಚ್ಚು ಕಂಡು ಬರುತ್ತದೆ ಅದರಲ್ಲೂ ಇತ್ತೀಚಿನ ದಿನಗಳಲ್ಲಿ, ವ್ಯಾಪಾರಕ್ಕೆ, ವ್ಯವಹಾರಕ್ಕೆ ಮತ್ತು ವಲಸೆ ಹೋಗಿರುವ ಜನರು ತಮ್ಮ ಮೂಲಸ್ಥಾನದ ಧಾರ್ಮಿಕ ಕ್ಷೇತ್ರಗಳನ್ನು ವಾರಕ್ಕೊಮ್ಮೆ ಭೇಟಿ ಆಗುವುದು ಸರ್ವಸಾಮಾನ್ಯವಾಗಿದೆ.

ವೈದ್ಯಕೀಯ ಪ್ರವಾಸೀ ಕೇಂದ್ರಗಳು ಮುಖ್ಯವಾಗಿ ಆಧುನಿಕ ವೈದ್ಯಕೀಯ ಸೌಲಭ್ಯಗಳನ್ನು ಹೊಂದಿರುವ ಆಸ್ಪತ್ರೆಯ ಅಭಿವೃದ್ಧಿಯಿಂದ ರೂಪುಗೊಂಡಿದೆ. ಇದರ ಜೊತೆಗೆ ವೈದ್ಯಕೀಯ ಶಿಕ್ಷಣಕ್ಕಾಗಿ ಯುವ ಜನಾಂಗ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಪ್ರವಾಸ ಕೈಗೊಳ್ಳುವುದು ಹೆಚ್ಚಾಗಿದೆ. ಒಟ್ಟಿನಲ್ಲಿ ನಿರ್ಧಿಷ್ಟ ಉದ್ದೇಶಕ್ಕಾಗಿ ತಮ್ಮ ವಾಸಸ್ಥಾನದಿಂದ ಕೆಲವು ಸಮಯಕ್ಕೆ ಒಂದು ನಿರ್ದಿಷ್ಟ ಉದ್ದೇಶಕ್ಕಾಗಿ ಬೇರೆ ಸ್ಥಳಕ್ಕೆ ಹೋಗುವುದನ್ನು ಪ್ರವಾಸ ಎನ್ನಬಹುದು. ಇತ್ತೀಚಿನ ದಿನಗಳಲ್ಲಿ ಪ್ರವಾಸ ಎನ್ನುವುದು ಒಂದು ಬೃಹತ್ ಉದ್ಯಮವಾಗಿ ಬೆಳೆದಿದೆ. ಆದ್ದರಿಂದ ಇದರಲ್ಲಿ ಅನೇಕ ಆರ್ಥಿಕ, ವಾಣಿಜ್ಯ, ಅಂಶಗಳನ್ನು ಗುರುತಿಸಿಕೊಳ್ಳುವುದು ಸಾಧ್ಯವಾಗುತ್ತದೆ.

ಇನ್ನೊಂದು ದೃಷ್ಟಿಕೋನದಲ್ಲಿ ಆರ್ಥಿಕಾಭಿವೃದ್ಧಿಯ ಒಂದು ಹಂತದಲ್ಲಿ ಮಾನವ ಸಂಪನ್ಮೂಲ ತನ್ನನ್ನು ತೊಡಗಿಸಿಕೊಳ್ಳುವ ಅವಸರದಲ್ಲಿ ಕೆಲಸ ಮತ್ತು ವಿಶ್ರಾಂತಿಯನ್ನು ಆಯ್ಕೆ ಮಾಡಿಕೊಳ್ಳುವುದು ಒಂದು ಸವಾಲಾಗಿದೆ. ವಿಶ್ರಾಂತಿಯಿಂದ ಕೆಲಸ ಸಾಧ್ಯ, ದಣಿದಾಗ ವಿಶ್ರಾಂತಿ ಅಗತ್ಯವಾಗಿದೆ. ಈ ರೀತಿ ಚಿಂತನೆಗಳು ಪ್ರವಾಸವನ್ನು ಒಂದು ವಿಶ್ರಾಂತಿ ಚಟುವಟಿಕೆ ಎಂದು ಪರಿಗಣಿಸುತ್ತವೆ.

ಏನೇ ಇದ್ದರೂ ಆಧುನಿಕ ಆರ್ಥಿಕಾಭಿವೃದ್ಧಿಯಲ್ಲಿ ಪ್ರವಾಸೋದ್ಯಮ ಒಂದು ಪ್ರಮುಖ ಚಟುವಟಿಕೆಯಾಗಿ ರೂಪುಗೊಂಡಿದೆ. ಪ್ರವಾಸೋದ್ಯಮವು ಆರ್ಥಿಕಾಭಿವೃದ್ಧಿ ಮೇಲೆ ಅನೇಕ ರೀತಿಯ ಪರಿಣಾಮವನ್ನು ಬೀರುತ್ತದೆ. ಉದ್ಯೋಗ, ಆದಾಯ ಮತ್ತು ಕಿರು ಉದ್ಯಮಗಳನ್ನು ಪ್ರವಾಸೋದ್ಯಮ ಪ್ರೋತ್ಸಾಹಿಸುತ್ತದೆ. ಪರೋಕ್ಷವಾಗಿ ಪ್ರವಾಸೋದ್ಯಮದ ಅವಕಾಶಗಳು ಮಾನವ ಸಂಪನ್ಮೂಲದ ಉತ್ಪಾದಕತೆಯನ್ನು ಹೆಚ್ಚಿಸುತ್ತದೆ.

ಅಂತರ್ ರಾಷ್ಟ್ರೀಯ ಪ್ರವಾಸವಂತು ಆರ್ಥಿಕಾಭಿವೃದ್ಧಿಯ ಮೇಲೆ ನೇರ ಪರಿಣಾಮವನ್ನು ಬೀರುತ್ತದೆ. ಪ್ರವಾಸೋದ್ಯಮದಿಂದ ಸರಕಾರಕ್ಕೆ ಕಂದಾಯ ಸಂದಾಯವಾಗುತ್ತದೆ. ಪ್ರವಾಸೋದ್ಯಮ ಅಭಿವೃದ್ಧಿಯಿಂದ ಮೂಲಭೂತ ಸೌಕರ್ಯಗಳ ಅನುಕೂಲವು ಹೆಚ್ಚುತ್ತದೆ. ಹೀಗೆ ಪ್ರವಾಸೋದ್ಯಮ ವಿವಿಧ ಮಹಲುಗಳಲ್ಲಿ ಆರ್ಥಿಕಾಭಿವೃದ್ದಿಯ ಮೇಲೆ ಪರಿಣಾಮ ಬೀರುತ್ತದೆ. ಪ್ರವಾಸೋದ್ಯಮವು ಮಾನವ ಸಂಪನ್ಮೂಲದ ಬೆಳವಣಿಗೆ ಮತ್ತು ಸಮರ್ಪಕ ಬಳಕೆಗೆ ವಿಪುಲ ಅವಕಾಶವನ್ನೊಡ್ಡಿ ವಿಶ್ವದ ಅನೇಕ ರಾಷ್ಟ್ರಗಳನ್ನು ತನ್ನೆಡೆಗೆ ಆಕರ್ಷಿಸುತ್ತಿದೆ. ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಮತ್ತು ಅಬಿವೃದ್ಧಿ ಹೊಂದಿತ್ತಿರುವ ರಾಷ್ಟ್ರಗಳು ವಿದೇಶೀ ವಿನಿಮಯದ ಗಳಿಕೆಯನ್ನು ಹೆಚ್ಚಿಸಿಕೊಳ್ಳಲು ಪವಾಸೋದ್ಯಮದ ಬೆಳವಣಿಗೆಗೆ ಪ್ರೋತ್ಸಾಹ ನೀಡುತ್ತಿವೆ. ಬಂಡವಾಳ ಕೊರತೆ ಇರುವ ಮತ್ತು ಮಾನವ ಸಂಪನ್ಮೂಲದ ಸಂಮೃದ್ಧತೆಯನ್ನು ಹೊಂದಿದ ರಾಷ್ಟ್ರಗಳು ಶ್ರಮ ಆಧಾರಿತವಾಗಿರುವ ಪ್ರವಾಸೋದ್ಯಮವನ್ನು ಬೆಳೆಸಲು ಶ್ರಮಿಸುತ್ತಿವೆ. ಈ ಉದ್ಯಮದಲ್ಲಿ ಬಂಡವಾಳ ಮತ್ತು ಉತ್ಪನ್ನ ನಡುವಿನ ಅನುಪಾತ ಕಡಿಮೆ ಇದೆ. ಬಂಡವಾಳ ಹೂಡಿಕೆ ಮತ್ತು ಉತ್ಪತ್ತಿ ನಡುವೆ ಕಾಲಾವಧಿ ಕೂಡಾ ಬಹಳ ಕಡಿಮೆ ಇದೆ. ಹೀಗೆ ಮಾನವ ಸಂಪನ್ಮೂಲ ಅಭಿವೃದ್ಧಿಗೆ, ಬಡತನ ನಿರ್ಮೂಲನೆಗೆ, ಉದ್ಯೋಗ ನಿರ್ಮಾಣಕ್ಕೆ, ಪರಿಸರದ ಪುನರ್ ಸೃಷ್ಟಿಗೆ ಪ್ರವಾಸೋಧ್ಯಮವನ್ನು ಪರಿಹಾರತ್ಮಕವಾಗಿ ಕಂಡುಕೊಳ್ಳಲಾಗಿದೆ. ಕೃಷಿ, ಆಹಾರ ಸಂಸ್ಕರಣೆ, ಹೈನುಗಾರಿಕೆ, ಕರಕುಶಲ ಕೈಗಾರಿಕೆ, ಕಟ್ಟಡ ನಿರ್ಮಾಣ, ಸಾರಿಗೆ, ವಿನ್ಯಾಸ ಹಾಗೂ

ಪುಷ್ಪಗಾರಿಕೆಗಳು, ಸೇವಾ ಸೌಲಭ್ಯಗಳು ಇತ್ಯಾದಿಗಳನ್ನು ಒಳಗೊಳ್ಳುವುದರಿಂದ ಇತರ ಯಾವುದೇ ಉದ್ಯಮಕ್ಕಿಂತ ಪ್ರವಾಸೋಧ್ಯಮ ಆರ್ಥಿಕತೆಯ ಮೇಲೆ ವಿಸ್ತೃತವಾದ ಪರಿಣಾಮ ಬೀರುತ್ತದೆ. ಪ್ರವಾಸೋದ್ಯಮ ಇಂತಹದೇ ನಿರ್ದಿಷ್ಟ ಪ್ರದೇಶದಲ್ಲಿ ಆರಂಭಿಸಬೇಕೆಂಬ ಮಿತಿಗಳಿಲ್ಲ, ಪ್ರವಾಸೋದ್ಯಮ ಯಾವ ಸ್ಥಳದಲ್ಲಿ ಬೇಕಾದರೂ ಸ್ಥಾಪಿಸಬಹುದಾಗಿದೆ. ಹಿಂದುಳಿದ ಪ್ರದೇಶಗಳಲ್ಲಿಯೂ ಪ್ರವಾಸೋದ್ಯಮವನ್ನು ಆರಂಭಿಸಬಹುದು, ಇದರಿಂದ ದುರ್ಬಲ ವರ್ಗಗಳ, ಮಹಿಳೆಯರ ಮತ್ತು ಸಾಂಪ್ರದಾಯಿಕ ಕಸುಬುದಾರ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಗಳು ಸುಧಾರಿಸಬಹುದು. ಈ ಕ್ರಮದಲ್ಲಿ ಗ್ರಾಮೀಣ ಪ್ರದೇಶಗಳು ಅಭಿವೃದ್ಧಿ ಹೊಂದಿದಾಗ ಹಳ್ಳಿಗಳ ಜನರು ಉದ್ಯೋಗಳನ್ನರಸಿ ನಗರಗಳತ್ತ ಹೋಗುವುದು ತಪ್ಪುತ್ತದೆ. ಈ ಎಲ್ಲಾ ಕಾರಣಗಳಿಂದ ಪ್ರವಾಸೋದ್ಯಮ ಇಂದು ಬಡರಾಷ್ಟ್ರಗಳಿಗೆ ಒಂದು ವರದಾನವಾಗಿದೆ.

ಪ್ರವಾಸೋದ್ಯಮದ ಪ್ರಾಮುಖ್ಯತೆಯನ್ನು ಮನಗಂಡು ಭಾರತ ಸರಕಾರ ಕೂಡಾ ಇದರ ವಿಕಾಸಕ್ಕೆ ಪೂರಕವಾಗುವ ನೀತಿಗಳನ್ನು ಜಾರಿಗೆ ತಂದಿದೆ. ಪ್ರವಾಸೋದ್ಯಮ ಕ್ಷೇತ್ರವು ಭಾರತದಲ್ಲಿ ರಾಜ್ಯ ಸರ್ಕಾರಗಳ ಹೊಣೆಯಾದರೂ ಕೇಂದ್ರ ಸರ್ಕಾರ ಪ್ರವಾಸೋದ್ಯಮ ಚಟುವಟಿಕೆಗಳಿಗೆ ಸಾಕಷ್ಟು ಪ್ರೋತ್ಸಾಹ ನೀಡುತ್ತಿದೆ. ವಿದೇಶಿ ವಿನಿಮಯ ಗಳಿಕೆಯ ಆಧಾರದ ಮೇಲೆ ಪ್ರವಾಸಿ ಸಂಸ್ಥೆಗಳಿಗೆ ನಿರ್ಯಾತ ಗೃಹಗಳ ಶ್ರೇಣಿಯನ್ನು ನೀಡಿ ಪ್ರೋತ್ಸಾಹಿಸುತ್ತಿದೆ. ಹೋಟೇಲ್‌ಗಳ ಪ್ರವಾಸಿ ಎಜೆಂಟರುಗಳು, ಪ್ರವಾಸಿ ನಿರ್ವಾಹಕ ಮತ್ತು ಸಂಘಟನೆಕಾರರನ್ನೊಳಗೊಂಡ ಘಟಕಗಳಿಗೆ ಅವಕಾಶ ನೀಡಿದೆ.

೧೯೯೧ರ ಮುಕ್ತ ಆರ್ಥಿಕ ನೀತಿ, ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣ ದನ್ವಯ ಪ್ರವಾಸೋದ್ಯಮವನ್ನು ವಿದೇಶೀ ಬಂಡವಾಳ ಹೂಡಿಕೆಗೆ ಆಧ್ಯತಾ ವಲಯವೆಂದು ಗುರುತಿಸಿ ಶೇಕಡಾ ೫೧ರ ವರೆಗೂ ನೇರ ವಿದೇಶೀ ಬಂಡವಾಳ ಹೂಡಿಕೆಗೆ ಪರವಾನಿಗೆ ನೀಡಲಾಗಿದೆ. ಹಾಗೂ ಒಂದು ನಿರ್ದಿಷ್ಟ ಪರಿಮಿತಿಯಲ್ಲಿ ವಿದೇಶೀ ತಂತ್ರಜ್ಞಾನ ಒಡಂಬಡಿಕೆ ಮತ್ತು ಆಡಳಿತಕ್ಕೆ ಅವಕಾಶ ಕಲ್ಪಿಸಲಾಗಿದೆ. ಹೋಟೇಲುಗಳು ಗಳಿಸುವ ವಿದೇಶೀ ವಿನಿಯದ ಲಾಭದಲ್ಲಿ ಶೇ. ೫೦ರಷ್ಟು ತೆರಿಗೆ ರಿಯಾಯ್ತಿ ನೀಡಲಾಗಿದೆ. ೧೯೯೨ ರಲ್ಲಿ ಭಾರತ ಸರ್ಕಾರವು ಪ್ರವಾಸೋದ್ಯಮದ ರಾಷ್ಟ್ರೀಯ ಕ್ರಿಯಾ ಯೋಜನೆಯನ್ನು ಜಾರಿಗೊಳಿಸಿತು. ಇದು ವಸ್ತು ಸ್ಥಿತಿಯ ಸಮರ್ಪಕ ಅಂದಾಜಿನ ಆಧಾರದ ಮೇಲೆ ಪರಿಣಾಮಕಾರಿ ಯೋಜನೆಗಳನ್ನು ರೂಪಿಸುವುದು ಮತ್ತು ಉದ್ದೇಶಗಳನ್ನು ನಿಗದಿ ಮಾಡುವುದು, ಇತ್ಯಾದಿಗಳನ್ನು ಒಳಗೊಂಡಿದೆ,

ಪ್ರವಾಸೋದ್ಯಮದ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರದಿಂದ ಸೀಮಿತ ಹಣಕಾಸಿನ ನೆರವು ರಾಜ್ಯ ಸರ್ಕಾರಗಳಿಗೆ ದೊರಕುತ್ತದೆ. ಸೌಲಭ್ಯಗಳಾದ ಪ್ರವಾಸಿ ಸಂಕೀರ್ಣಗಳು, ರಸ್ತೆ ಬದಿಯ ಸೌಲಭ್ಯಗಳು, ಸಾಹಸ್ ಕ್ರೀಡೆಗಳಿಗೆ ಅಗತ್ಯವಿರುವ ಉಪಕರಣಗಳ ಖರೀದಿ, ಪ್ರವಾಸೋದ್ಯಮ ತಾಣಗಳಲ್ಲಿ ದೀಪಗಳ ವ್ಯವಸ್ಥೆ ಇತ್ಯಾದಿಗಳನ್ನು ರೂಪಿಸಲು ಕೇಂದ್ರ ಸರ್ಕಾರದ ನೆರವು ದೊರಕುತ್ತಿದೆ. ಅದೇ ರೀತಿ ಸಾಂಸ್ಕೃತಿಕ ಸ್ಮಾರಕಗಳ ಕುಶಲ ಕಲೆ ಮತ್ತು ಜಾನಪದ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಉತ್ತೇಜನ ನೀಡಲು ನೆರವು ನೀಡುತ್ತಿದೆ. ಪ್ರವಾಸೋದ್ಯಮ ಅಭಿವೃದ್ಧಿಗೆ ಸಂಬಂಧಿಸಿದಂತೆ ಸ್ಥೂಲವಾದ ಕಾರ್ಯತಂತ್ರಗಳನ್ನು ರೂಪಿಸುವುದು, ಖಾಸಗಿ ವಲಯಕ್ಕೆ ಬೇಕಾಗುವಂತಹ ಆರ್ಥಿಕ ಹಾಗೂ ಹಣಕಾಸಿನ ಉತ್ತೇಜನಗಳನ್ನು ನೀಡುವುದು, ನಿಯಂತ್ರಣ ಮೇಲ್ವಿಚಾರಣೆ ವ್ಯವಸ್ಥೆ ಇತ್ಯಾದಿಗಳನ್ನು ರಾಜ್ಯ ಸರ್ಕಾರಗಳು ಮಾಡುತ್ತಿವೆ. ಖಾಸಗೀಕರಣದ ಲಾಭ ಪಡೆಯುವುದರೊಂದಿಗೆ ಆಯಾ ರಾಜ್ಯ ಸರ್ಕಾರಗಳು ಖಾಸಗೀ ಕ್ಷೇತ್ರದ ಸಹಭಾಗಿತ್ವಕ್ಕೂ ಅವಕಾಶ ಮಾಡಿಕೊಟ್ಟಿದೆ.

ಕರ್ನಾಟಕ ಪ್ರವಾಸೋದ್ಯಮ ಇಲಾಖೆ ೧೯೯೭ ರಲ್ಲಿ ಪ್ರವಾಸೋದ್ಯಮದ ಕರಡು ನೀತಿಯನ್ನು ರೂಪಿಸಿತು. ಇದರ ಪ್ರಕಾರ ವಿದೇಶಿ ಪ್ರವಾಸಿಗರು ಬಹುತೇಕ ಆಯ್ದು ಪ್ರವಾಸಿ ಕೇಂದ್ರ ಮತ್ತು ಸ್ಥಳಗಳಿಗೆ ಭೇಟಿ ನೀಡುವುದರಿಂದ ಆ ಸ್ಥಳಗಳಿಗೆ ನಿರ್ದಿಷ್ಟ ಕಾಲಮಾನದಲ್ಲಿ ಬರುವ ಪ್ರವಾಸಿಗರ ಸಂಖ್ಯೆಯ ಹೆಚ್ಚಳದಿಂದ ಸೌಲಭ್ಯ ಕೊರತೆ ಆಗುವುದರೊಂದಿಗೆ ಪರಿಸರ ಹಾನಿಯಾಗುವ ಸಾಧ್ಯತೆಗಳು ಇವೆ. ಈ ಸಮಸ್ಯೆಗಳ ಪರಿಹಾರಕ್ಕಾಗಿ ಬರುವ ಹೆಚ್ಚಿನ ಪ್ರವಾಸಿಗರ ಬೇಡಿಕೆಗೆ ಅನುಗುಣವಾಗಿ ನೂತನ ಪ್ರವಾಸೀ ತಾಣಗಳನ್ನು ಆಯ್ಕೆ ಮಾಡಿ ಅಭಿವೃದ್ಧಿ ಪಡಿಸುವುದು. ಈ ಕರಡು ನೀತಿಯ ಮುಖ್ಯ ಉದ್ದೇಶ. ಇದರ ಸಮಗ್ರ ಅಭಿವೃದ್ಧಿಗಾಗಿ ಪ್ರವಾಸೋದ್ಯಮದ ಕ್ರಿಯಾ ಯೋಜನೆಯನ್ನು ಜಾರಿಗೆ ತರಲಾಗಿದೆ. ಜತೆಗೆ ಪ್ರವಾಸಿಗಳನ್ನು ಆಕರ್ಷಿಸಲು ಅಗತ್ಯವಿರುವ ಕ್ರಮಗಳ ಅನಿವಾರ್ಯತೆಯನ್ನು ಈ ಕ್ರಿಯಾ ಯೋಜನೆ ತಿಳಿಸುತ್ತದೆ. ಈ ಹೊಸ ಪ್ರವಾಸೋದ್ಯಮ ನೀತಿಯ ಮುಖ್ಯ ಉದ್ದೇಶ ಪ್ರವಾಸೋದ್ಯಮ ಸಂಬಂಧಿತ ಚಟುವಟಿಕೆಗಳನ್ನು ಅಭಿವೃದ್ಧಿ ಪಡಿಸುವುದು. ಜತೆಗೆ ಜನರಿಗೆ ಉದ್ಯೋಗ ಅವಕಾಶಗಳನ್ನು ಉದಗಿಸುವುದು. ಪ್ರವಾಸೋದ್ಯಮದಲ್ಲಿ ತೊಡಗಿಸಿಕೊಳ್ಳುವವರ ಸಂಖ್ಯೆ ಹೆಚ್ಚಾಗಿ ಅಲ್ಲಿನ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳು ಉತ್ತಮಗೊಳ್ಳುತ್ತವೆ ಎನ್ನುವ ಗ್ರಹಿಕೆ ಇದೆ. ಪ್ರವಾಸೋದ್ಯಮದ ಉನ್ನತೀಕರಣಕ್ಕಾಗಿ ಪ್ರವಾಸೋದ್ಯಮವನ್ನು ವಲಯವನ್ನಾಗಿ ವರ್ಗೀಕರಿಸುವುದು, ಪುರಾತನ ಮತ್ತು ಐತಿಹಾಸಿಕ ಸ್ಥಳಗಳನ್ನು ಅಭಿರುಚಿಗೆ ತಕ್ಕಂತೆ ಸಂರಕ್ಷಿಸುವುದು, ವನ್ಯ ಜೀವಿ ಮತ್ತು ಸಸ್ಯ

ಸಂಪತ್ತನ್ನು ಅಭಿವೃದ್ಧಿಪಡಿಸುವುದು, ಆರ್ಥಿಕ ಪ್ರವಾಸೋದ್ಯಮವನ್ನು ಬೆಳೆಸುವುದು ಹಾಗೂ ಮೂಲ ಸೌಲಭ್ಯಗಳ ಅಭಿವೃದ್ಧಿಗಾಗಿ ಖಾಸಗಿ ಸಹಭಾಗಿತ್ವಕ್ಕೆ ಉತ್ತೇಜನ ನೀಡುವುದು, ಈ ಉದ್ದೇಶಗಳ ಸಫಲತೆಗಾಗಿ ಕರ್ನಾಟಕ ಪ್ರವಾಸೋದ್ಯಮ ಇಲಾಖೆ ಪ್ರವಾಸೋದ್ಯಮ ಘಟಕಗಳನ್ನು ಹೊಂದಿದೆ.

ಪ್ರವಾಸೀ ಕೇಂದ್ರಗಳು ಅಭಿವೃದ್ಧಿ ಹೊಂದುವುದರಿಂದ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಜೊತೆಗೆ ಆ ಕೇಂದ್ರಗಳಲ್ಲಿ ಕಿರು ಉದ್ಯಮಗಳ ಅಭಿವೃದ್ಧಿ ಹೊಂದುವ ಸಾದ್ಯತೆಗಳು ಹೆಚ್ಚು ಈ ಕಿರು ಉದ್ಯಮಗಳು ಸ್ಥಳೀಯ ಉದ್ಯೋಗ ಮತ್ತು ಆದಾಯ ಹೆಚ್ಚಳಕ್ಕೆ ಅವಕಾಶ ಮಾಡಿಕೊಡುತ್ತವೆ. ಆದರೆ ಪ್ರವಾಸಿ ಕೇಂದ್ರಗಳಲ್ಲಿ ಅವಕಾಶ ಹೊಂದಿರುವ ಕಿರು ಉದ್ಯಮಗಳ ಲಕ್ಷಣಗಳು ಇತರ ಸಾಮಾನ್ಯ ಕಿರು ಉದ್ಯಮಗಳಿಗಿಂತ ಭಿನ್ನವಾಗಿರುತ್ತವೆ. ಉದಾ: ಪ್ರವಾಸೀ ಕೇಂದ್ರಗಳ ಕಿರು ಉದ್ಯಮಗಳು ಕೆಲವು ಋತುಗಳಲ್ಲಿ ಮಾತ್ರ ಹೆಚ್ಚು ಬೇಡಿಕೆಗಳನ್ನು ಹೊಂದಿದ್ದು ಕೆಲವು ಋತುಗಳಲ್ಲಿ ಬೇಡಿಕೆಗಳು ಕಡಿಮೆ ಆಗುತ್ತವೆ. ಪ್ರವಾಸೀ ಕೇಂದ್ರಗಳಲ್ಲಿ ನಿರ್ದಿಷ್ಟ ನಮೂನೆಯ ಕಿರು ಉದ್ಯಮಗಳಿಗೆ ಅವಕಾಶವಿದ್ದು, ಯಾವುದಾದರೊಂದು ಉದ್ಯಮವನ್ನು ವಹಿಸಲು ಸಾಧ್ಯವಿಲ್ಲ. ಆದರೂ ಪ್ರವಾಸೀ ಕೇಂದ್ರದ ಕಿರು ಉದ್ಯಮಗಳು ಕೌಶಲವನ್ನು ಹೊಂದಿರದ ಸ್ಥಳೀಯರಿಗೆ ಉದ್ಯೋಗವಕಾಶವನ್ನು ಒದಗಿಸುತ್ತದೆ.

೧.೨ ಗ್ರಂಥ ಸಾಹಿತ್ಯಗಳ ಪರಾಮರ್ಶೆ

ಪ್ರವಾಸೀ ಕೇಂದ್ರಗಳಲ್ಲಿ ಕಿರು ಉದ್ಯಮಿಗಳ ಅಭಿವೃದ್ಧಿ ಎಂಬ ವಿಷಯದಲ್ಲಿ ಸಂಶೋಧನಾ ಪ್ರಬಂಧವನ್ನು ಮಂಡಿಸುವ ಸಲುವಾಗಿ ಮತ್ತು ಸಮಗ್ರ ಅಧ್ಯಯನ ನಡೆಸುವ ಸಲುವಾಗಿ ಈ ವಿಷಯದಲ್ಲಿ ಲಭ್ಯವಿರುವ ಸಾಹಿತ್ಯ ಗ್ರಂಥಗಳನ್ನು ಪರಾಮರ್ಶಿಸಲಾಗಿದೆ. ಈ ವಿಷಯದಲ್ಲಿ ಅಲ್ಪ ಸಾಹಿತ್ಯ ಗ್ರಂಥಗಳು ಲಭ್ಯವಾಗಿವೆ. ಪೋರ್ಟ್ ಎಲಿಜಬೆತ್ ಸ್ಮಾಲ್ ಬಿಸಿನೆಸ್ ಯೂನಿಟ್ (೨೦೦೧–೦೨) ವಿಶ್ವವಿದ್ಯಾನಿಲಯವು ಈ ಕಿರು ಉದ್ಯಮಗಳ ವ್ಯವಹಾರದ ವೈಫಲ್ಯವನ್ನು ಸೂಚಿಸಿದೆ. ಇದರ ಸಂಶೋಧನೆಯು ೭೮ ರಿಂದ ೮೦ ಶೇಕಡಾ ರಷ್ಟು ತಪ್ಪುಗಳನ್ನು ಪತ್ತೆ ಹಚ್ಚಿ ಅವುಗಳ ತಪ್ಪಿಸುವಿಕೆ ಮತ್ತು ಸರಿಪಡಿಸುವಿಕೆ ಸೂಚನೆಗಳನ್ನು ನೀಡಲಾಗಿದೆ.

ಲಾಂಗ್‌ಗೆನಿಕರ್ (೧೯೯೬) ಪ್ರಕಾರ ಸಣ್ಣ ಉದ್ಯಮದ ಅಭಿವೃದ್ಧಿಯಲ್ಲಿ ಮಾರಕವಾಗಿರುವ ಆಯಾಮಗಳನ್ನು ಪತ್ತೆ ಹಚ್ಚದಿದ್ದರೆ ಅಥವಾ ಕಿರು ಉದ್ಯಮಗಳ ಅಭಿವೃದ್ಧಿಗೆ ಮಾರಕವಾಗುತ್ತದೆ ಎಂಬುವುದರಲ್ಲೂ ನಿಸ್ಸಂದೇಹ ಎಂದು ಸೂಚಿಸಿದ್ದಾರೆ. ಈ ಮಾರಕವಾದ ಆಯಾಮಗಳು ಅಭಿವೃದ್ಧಿಗೆ ತೊಡಕಾಗಿ ಪರಿಣಮಿಸಿವುದನ್ನು ಇವರ ಸಂಶೋಧನೆಯು ಸೂಚಿಸುತ್ತದೆ.

೨೦೦೩ರಲ್ಲಿ ಮೊಗ್ಗಿಸನ್ ಮತ್ತು ಸ್ಕಾಟ್‌ರವರು ಸಂಶೋಧಿಸಿದ ಪ್ರಕಾರ ಕಿರು ಉದ್ಯಮಗಳು ಆರ್ಥಿಕಾಭಿವೃದ್ಧಿಗೆ ಮಹತ್ತರವಾದ ಕೊಡುಗೆಗಳನ್ನು ನೀಡುತ್ತವೆ. ಈ ಉದ್ಯಮಗಳು ಕೆಲವು ವಿಶೇಷವಾದ ಸಮಸ್ಯೆಗಳನ್ನು ಎದುರಿಸುತ್ತವೆ ಎಂದು ವಿಶ್ಲೇಷಿಸಿದ್ದಾರೆ. ಈ ಸಮಸ್ಯೆಗಳಿಂದ ಉದ್ದಿಮೆದಾರರು ತಮ್ಮ ವ್ಯವಹಾರದಲ್ಲಿ ಅಲ್ಪ ಲಾಭವನ್ನು ಗಳಿಸುತ್ತಾರೆ, ಎಂದು ವಿಶ್ಲೇಷಿಸಿದ್ದಾರೆ. ಈ ಅಲ್ಪ ಲಾಭದ ಮುಖಾಂತರ ಕಿರು ಉದ್ಯಮಗಳು ಅಸಮತೋಲನ ಬೆಳವಣಿಗೆಗೆ ಕಾರಣವಾಗುತ್ತವೆ ಎಂದು ವಿವರಿಸಿದ್ದಾರೆ.

ಬಾಲೋಯಿ ಅವರು ೨೦೦೪ರಲ್ಲಿ ಸಂಶೋಧಿಸಿದ ಪ್ರಕಾರ ಪ್ರವಾಸೀ ವ್ಯವಹಾರ ಕ್ಷೇತ್ರದಲ್ಲಿ ಕಿರು ಉದ್ಯಮಗಳ ವೈಫಲ್ಯದಿಂದಾಗಿ, ಉದ್ಯಮಗಳ ಸಮತೋಲಿತ ಅಭಿವೃದ್ಧಿಗೆ ಮಾರಕವಾಗುತ್ತವೆ ಎಂದು ವಾದಿಸಿದ್ದಾರೆ.

ಡಾ॥ ರಿಚರ್ಡ್ ರತೆಲ್ಸ್ ಅವರು ಸಮುದ್ರ ತೀರ ಉದ್ಯಮಗಳು ಹೆಚ್ಚಾಗಿ ಬ್ರಿಟಿಷ್ ತೀರಗಳಲ್ಲಿ ಆರಂಭವಾದವು ಎಂಬುದನ್ನು ತನ್ನ ಸಂಶೋಧನೆಯಲ್ಲಿ ವಿವರಿಸಿದ್ದಾರೆ. ಈ ಬ್ರಿಟಿಷ್ ವಿರಾಮ ಕೇಂದ್ರಗಳಲ್ಲಿ ವಿವಿಧ ರೀತಿಯ ಮನೋರಂಜನಾ ಕಾರ್ಯಕ್ರಮಗಳು, ದೈಹಿಕ ಮಸಾಜ್‌ಗಳು, ವಾಸ್ತವ್ಯ, ಆಹಾರ ಮುಂತಾದುವುಗಳ ಬಗ್ಗೆ ವಿಶೇಷ ಸೌಲಭ್ಯಗಳಿದ್ದವು ಎಂಬುದನ್ನು ಸಂಶೋಧಿಸಿದ್ದಾರೆ. ಅವರ ಪ್ರಕಾರ ಇಂದಿನ ಪ್ರವಾಸಿಗರ ವಿರಾಮ ಕೇಂದ್ರಗಳು ಬ್ರಿಟಿಷ್ ಮೂಲದಿಂದ ಉಗಮವಾಗಿದೆ ಎಂದರ್ಥ.

ಎಸ್. ಡಿ. ನ್ಯಾಕ್ ಅವರ ಪ್ರಕಾರ ಪ್ರವಾಸೋದ್ಯಮವು ಆರ್ಥಿಕ ಅಭಿವೃದ್ಧಿಯನ್ನು ಹೆಚ್ಚಿಸುವುದರಲ್ಲಿ ಮಹತ್ವ ಪಾತ್ರ ವಹಿಸುತ್ತದೆ ಎಂದು ಹೇಳಿದ್ದಾರೆ. ಪ್ರವಾಸೋದ್ಯಮವು ಆರ್ಥಿಕತೆಯ ಬೆನ್ನೆಲುಬು ಎಂದೂ ತಿಳಿಸಿದ್ದಾರೆ.

ಈ ವಿಷಯದಲ್ಲಿ ಸಂಶೋಧನಾ ಪ್ರಬಂಧವು ಅಪರೂಪವಾಗಿದೆ. ಅದುದರಿಂದ ದಕ್ಷಿಣ ಕನ್ನಡದಲ್ಲಿ ಪ್ರವಾಸೋದ್ಯಮದಿಂದಾದ ಕಿರು ಉದ್ಯಮಗಳ ಅಭಿವೃದ್ಧಿಯನ್ನು ಅಧ್ಯಯನ ಮಾಡುವ ನಿಟ್ಟಿನಲ್ಲಿ ಈ ವಿಷಯವನ್ನು ಆರಿಸಿಕೊಳ್ಳಲಾಗಿದೆ.

೧.೩ ಅಧ್ಯಯನದ ಸಮಸ್ಯೀಕರಣ

ಪ್ರವಾಸೋದ್ಯಮ ಮತ್ತು ಆರ್ಥಿಕಾಭಿವೃದ್ಧಿಯ ಸಂಬಂಧ ಅನೇಕ ಸಂಶೋಧನೆಗಳು ಉದ್ಯೋಗಾವಕಾಶ ಹೆಚ್ಚಳ, ಸರಕಾರಕ್ಕೆ ಸಿಗುವ ಕಂದಾಯ, ವಿದೇಶಿ ವಿನಿಮಯ ಇತ್ಯಾದಿ ಬಗ್ಗೆ ವಿಶ್ಲೇಷಣೆ ಮಾಡಿರುತ್ತದೆ. ಆದರೆ ಪ್ರಮುಖವಾದ ಕಿರು ಉದ್ಯಮಗಳ ಮೇಲೆ ಪ್ರವಾಸೋದ್ಯಮದ ಅಭಿವೃದ್ಧಿ ಬೀರುವ ಪರಿಣಾಮವನ್ನು ವಿಶ್ಲೇಷಣೆ ಮಾಡಿರುವುದು ಕಡಿಮೆ ಆದ್ದರಿಂದ ಈ ಅಧ್ಯಯನದಲ್ಲಿ ದ.ಕನ್ನಡ ಜಿಲ್ಲೆಯ ಪ್ರವಾಸೀ ಕೇಂದ್ರಗಳಲ್ಲಿರುವ ಕಿರು ಉದ್ಯಮಗಳ ವಿಶ್ಲೇಷಣೆ ಮಾಡಲಾಗುತ್ತದೆ:

ಕಿರು ಉದ್ಯಮಗಳಿಗೆ ಸಂಬಂಧಿಸಿರುವಂತೆ ನಾವು ಕಂಡುಕೊಳ್ಳಬಹುದಾದ ಮುಖ್ಯ ಸಂಶೋಧನಾ ಪ್ರಶ್ನೆಗಳೆಂದರೆ

೧) ವಿವಿಧ ಪ್ರವಾಸೀ ಕೇಂದ್ರಗಳಲ್ಲಿರುವ ಕಿರುಉದ್ಯಮಗಳ ಸ್ವರೂಪ ಮತ್ತು ಸ್ಥಾನಮಾನಗಳೇನು?

೨) ವಿವಿಧ ಪ್ರವಾಸೀ ಕೇಂದ್ರಗಳನ್ನು ಕಿರು ಉದ್ಯಮಗಳ ಅಭಿವೃದ್ಧಿ ಸಿಗುವ ಅವಕಾಶಗಳೇನು?

೩) ವಿವಿಧ ಪ್ರವಾಸೀ ಕೇಂದ್ರಗಳಲ್ಲಿ ಕಿರು ಉದ್ಯಮಗಳ ಅಭಿವೃದ್ಧಿಗೆ ಬೇಕಾದ ಮೂಲಭೂತ ಸೌಕರ್ಯಗಳೇನು?

೪) ವಿವಿಧ ಪ್ರವಾಸೀ ಕೇಂದ್ರಗಳಲ್ಲಿ ಕಿರು ಉದ್ಯಮ ಸಹಿಸುತ್ತಿರುವವರ ಸಾಮೂಹಿಕ, ಆರ್ಥಿಕ ಹಿನ್ನಲೆ ಏನು?

ಈ ಎಲ್ಲಾ ಮೇಲಿನ ಪ್ರಶ್ನೆಗಳನ್ನು ಗಮನದಲ್ಲಿ ಇಟ್ಟುಕೊಂಡು ದ.ಕ. ಜಿಲ್ಲಾ ಪ್ರವಾಸೀ ಕೇಂದ್ರಗಳಲ್ಲಿ ಕಿರು ಉದ್ಯಮ ನಡೆಸಿರುತ್ತಿರುವ ಉದ್ಯಮಿಗಳ ಮಾಹಿತಿಯನ್ನು ಪಡೆದು ಈ ಅಧ್ಯಯನದಲ್ಲಿ ವಿಶ್ಲೇಷಣೆ ಮಾಡಲಾಗಿದೆ.

೧.೪ ಅಧ್ಯಯನ ಉದ್ದೇಶಗಳು

ಪ್ರವಾಸೀ ಕೇಂದ್ರಗಳಲ್ಲಿ ಕಿರು ಉದ್ಯಮಗಳ ಅಭಿವೃದ್ಧಿಯಿಂದಾಗಿ ಅವು ಆರ್ಥಿಕ ಅಭಿವೃದ್ಧಿಯ ಮೇಲೆ ಹೇಗೆ ಪರಿಣಾಮ ಬೀರುತ್ತವೆ, ಎಂಬುದರ ಬಗ್ಗೆ ವಿಶ್ಲೇಷಿಸುವುದು ಈ ಅಧ್ಯಯನದ ಮೂಲ ಉದ್ದೇಶವಾಗಿದೆ. ಈ ಅಧ್ಯಯನದಲ್ಲಿ ಆರ್ಥಿಕತೆಯ ಮೇಲೆ ಪ್ರವಾಸೋದ್ಯಮದಿಂದ ಮೂಲಭೂತ ಸೌಕರ್ಯಗಳ ಮೇಲೆ, ಪ್ರವಾಸೀ ಕೇಂದ್ರಗಳ ಹೂಡಿಕೆಯ ಮೇಲೆ, ಪ್ರವಾಸೀ ಚಟುವಟಿಕೆಗಳ ಮೇಲೆ, ಉದ್ಯೋಗ ಸೃಷ್ಟಿಯ ಮೇಲೆ ಆಗುವ ಪರಿಣಾಮಗಳನ್ನು ಅಧ್ಯಯನವನ್ನು ಮಾಡಲಾಗುತ್ತದೆ. ಈ ಅಧ್ಯಯನವನ್ನು ಆರಿಸಿದ ಪ್ರವಾಸೀ ಉತ್ಪನ್ನಗಳಾದ ಸಮುದ್ರ ತೀರಗಳು, ಉದ್ಯಾವನಗಳು, ಧಾರ್ಮಿಕ ಪ್ರವಾಸೀ ಕೇಂದ್ರಗಳು ಮತ್ತು ವೈದ್ಯಕೀಯ ಪ್ರವಾಸೀ ಕೇಂದ್ರಗಳಲ್ಲಿ ನಡೆಸಲಾಗುವುದು. ಈ ಅಧ್ಯಯನದ ಪ್ರಮುಖ ಉದ್ದೇಶಗಳೆಂದರೆ:

೧) ಪ್ರವಾಸೋದ್ಯಮದ ಆರ್ಥಿಕ ಪ್ರಾಮುಖ್ಯತೆಯನ್ನು ಆದಾಯ ಹಾಗೂ ಉದ್ಯೋಗ ಸಂಸ್ಥೆಯ ಅಂಶಗಳನ್ನು ಪರೀಕ್ಷಿಸುವುದು.

೨) ಕರಾವಳಿ ಕರ್ನಾಟಕದ ಪ್ರವಾಸೀ ಕೇಂದ್ರಗಳಲ್ಲಿ ಕಿರುಉದ್ಯಮಗಳ ಸ್ವರೂಪ ಮತ್ತು ಸ್ಥಿತಿಗತಿಗಳನ್ನು ವಿಶ್ಲೇಷಿಸುವುದು.

೩) ಕಿರು ಉದ್ಯಮಿಗಳನ್ನು ಅಭಿವೃದ್ಧಿಗೆ ಬೇಕಾದ ಮೂಲ ಸ್ವರೂಪಗಳನ್ನು ಪರೀಕ್ಷಿಸುವುದು.

೪) ಸಣ್ಣ ಉದ್ದಿಮೆದಾರರ ಸಾಮೂಹಿಕ ಮತ್ತು ಆರ್ಥಿಕ ಹಿನ್ನೆಲೆಗಳನ್ನು ಕಂಡುಕೊಳ್ಳುವುದು.

೫) ಪ್ರವಾಸೀ ಕ್ಷೇತ್ರದಲ್ಲಿ ಯೋಜನೆ ರೂಪಿಸುವವರು ಪ್ರವಾಸೋದ್ಯಮದ ಮುಖಾಂತರ ಸಣ್ಣ ಉದ್ಯಮಗಳನ್ನು ಹೇಗೆ ಅಭಿವೃದ್ಧಿಪಡಿಸಬಹುದು ಎಂಬ ವಿಷಯದಲ್ಲಿ ಸಲಹೆಗಳು ನೀಡುವುದು.

೧.೫ ಅಧ್ಯಯನದ ವ್ಯಾಪ್ತಿ

ಈ ಅಧ್ಯಯನವನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಯ್ದ ಪ್ರವಾಸೀ ಕೇಂದ್ರಗಳಲ್ಲಿ ಕೈಗೊಳ್ಳಲಾಗಿದೆ. ಈ ಪ್ರವಾಸೀ ಕೇಂದ್ರಗಳಲ್ಲಿ ಆಯ್ದು ಪ್ರಾಕೃತಿಕ ಪ್ರವಾಸೀ ಕೇಂದ್ರಗಳು, ವೈದ್ಯಕೀಯ ಪ್ರವಾಸಿಕೇಂದ್ರಗಳು ಮತ್ತು ಧಾರ್ಮಿಕ ಕೇಂದ್ರಗಳು ಸೇರಿವೆ. ಪ್ರವಾಸೋದ್ಯಮದ ವ್ಯಾಪ್ತಿಯ ಅತ್ಯಂತ ವಿಶಾಲವಾಗಿರುವುದರಿಂದ ದಕ್ಷಿಣ ಕನ್ನಡದಲ್ಲಿ ಪ್ರವಾಸೀ ಕೇಂದ್ರಗಳನ್ನು ಆಯ್ಕೆ ಮಾಡಿಕೊಳ್ಳುವ ಮೂಲಕ ವ್ಯಾಪ್ತಿಯನ್ನು ಕಿರಿದುಗೊಳಿಸಲಾಗಿದೆ.

೧.೬ ಅಧ್ಯಯನದ ವಿಧಾನಗಳು

ಆರ್ಥಿಕಾಭಿವೃದ್ಧಿಯು ಅನೇಕ ಅಂಶಗಳನ್ನು ಹೊಂದಿರುವುದರಿಂದ ಪ್ರವಾಸೋಧ್ಯಮದಿಂದ ಆರ್ಥಿಕಾಭಿವೃದ್ಧಿಯ ಪರಿಣಾಮವನ್ನು ಕಲೆ ಹಾಕುವುದು ಕ್ಲಿಷ್ಟಕರವಾಗಿದೆ. ಆರ್ಥಿಕಾಭಿವೃದ್ಧಿಯು ಬೇರೆ ಬೇರೆ ಅಂಶಗಳ ಮೇಲೆ ಹೊಂದಿಕೊಂಡಿದೆ. ಆದ್ದರಿಂದ ಪ್ರವಾಸೋದ್ಯಮದ ನಿರ್ಧಿಷ್ಟ ಪರಿಣಾಮವನ್ನು ಗುರುತಿಸಲು ಅಸಾಧ್ಯವಾಗಿದೆ. ಹಾಗಿದ್ದರೂ ಈ ಅಧ್ಯಯನದಲ್ಲಿ ಪ್ರಮುಖ ಪ್ರವಾಸೀ ಉತ್ಪನ್ನಗಳನ್ನು ಆಯ್ಕೆಮಾಡಿ ನಿರ್ಧರಿಸಿದ ಅಧ್ಯಯನ ಕ್ಷೇತ್ರದಲ್ಲಿ ಅವುಗಳಿಂದಾಗುವ ಆರ್ಥಿಕ ಪರಿಣಾಮಗಳನ್ನು ಅಧ್ಯಯನದ ಮಾಡಲಾಗುತ್ತಿದೆ. ಇಲ್ಲಿ ಅಧ್ಯಯನಕ್ಕೆ ತೆಗೆದುಕೊಂಡ ಮೂರು ಪ್ರವಾಸೀ ಉತ್ಪನ್ನಗಳು

೧. ಸಮುದ್ರ ತೀರಗಳು, ಉದ್ಯಾನವನಗಳು (ಪ್ರಾಕೃತಿಕ ಪ್ರವಾಸೋದ್ಯಮ)

೨. ಆಸ್ಪತ್ರೆಗಳು (ವೈದ್ಯಕೀಯ ಪ್ರವಾಸೋದ್ಯಮ)

೩. ಧಾರ್ಮಿಕ ಪ್ರವಾಸೀ ಕೇಂದ್ರಗಳು (ಧಾರ್ಮಿಕ ಪ್ರವಾಸೋದ್ಯಮ)

ಪ್ರವಾಸ, ಹೋಟೇಲ್‌ಗಳು ಅದಕ್ಕೆ ಸಂಬಂಧ ಪಟ್ಟ ಮೂಲಭೂತ ಸೌಕರ್ಯಗಳ ಅಧ್ಯಯನವನ್ನು ಸೇರಿಸಿಕೊಳ್ಳಲಾಗಿದೆ.

ಆರ್ಥಿಕ ಚಲಕಗಳಾದ ಅನುಪಾತಗಳು, ಸರಾಸರಿಗಳನ್ನು ಅಳವಡಿಸಿಕೊಂಡು ಊಹೆಗಳನ್ನು ವಿಶ್ಲೇಷಿಸಲಾಗಿದೆ.

ಪ್ರವಾಸೋದ್ಯಮದದಿಂದ ಆರ್ಥಿಕಾಭಿವೃದ್ಧಿಯ ಮೇಲಿನ ಪರಿಣಾಮ ಮತ್ತು ಕಿರುಉದ್ಯಮಗಳ ಅಭಿವೃದ್ಧಿಯನ್ನು ವಿಶ್ಲೇಷಿಸಲು ಗುಣಾತ್ಮಕ ಅಂಕಿಅಂಶಗಳು, ಪ್ರಾಥಮಿಕ ಅನುವಂಶಿಕ ಅಂಕಿ ಅಂಶಗಳು, ಸರ್ವೆವಿಧಾನ, ಪ್ರಶ್ನಾವಳಿ ವಿಧಾನದಿಂದ ಸಂದರ್ಶನ, ಚರ್ಚೆಗಳು, ಕೋಷ್ಟಕಗಳು, ಸರ್ವೇ ಅಂಕಿಅಂಶಗಳ ವಿಧಾನವನ್ನು ಬಳಸಲಾಗಿದೆ.

೧. ಅಧ್ಯಯನವು ಪ್ರಾಥಮಿಕ ಹಾಗೂ ಅನುಷಂಗಿಕ ಮೂಲಗಳೆರಡನ್ನೂ ಒಳಗೊಂಡಿದೆ.

೨. ನೇರ ಸಂದರ್ಶನ ಪ್ರಶ್ನಾವಳಿ ಮೂಲಕ ಮಾಹಿತಿ ಸಂಗ್ರಹಿಸಲಾಗುವುದು.

೩. ಅಧ್ಯಯನಕ್ಕೆ ಸೈದ್ಧಾಂತಿಕ ನೆಲೆಯನ್ನು ಒದಗಿಸಲು ವಿವಿಧ ಗ್ರಂಥಗಳ, ಸಂಶೋಧನಾ ಲೇಖನಗಳ ಹಾಗೂ ಸರಕಾರಿ ಮೂಲಗಳ ದಾಖಲೆಗಳನ್ನು ಪರಾಮರ್ಶಿಸಲಾಗುವುದು.

೪. ಪ್ರವಾಸೀ ಕೇಂದ್ರಗಳಲ್ಲಿ ಮಹಿಳೆಯರು ಮತ್ತು ಪುರುಷರನ್ನು ವೈಯಕ್ತಿಕವಾಗಿ ಪ್ರಶ್ನಾವಳಿ ಉಪಯೋಗಿಸಿಕೊಂಡು ದತ್ತಾಂಶಗಳನ್ನು ಸಂಗ್ರಹಿಸಲಾಗುವುದು.

ಹೇಗೆ ಸಂಗ್ರಹಿಸಿದ ಮಾಹಿತಿಗಳನ್ನು ಸೂಕ್ತ ಕೋಷ್ಟಕಗಳನ್ನಾಗಿ ವಿಂಗಡಿಸಿ ಸರಳ ಅಂಕಿ ಅಂಶ ತಂತ್ರಗಳಾದ ಅನುಪಾತ, ಸರಾಸರಿ ಪ್ರಮಾಣ, ಶೇಕಡಾವಾರು ಮೂಲಕ ವಿಶ್ಲೇಷಿಸಿ ಅಥೈಸಲಾಗುವುದು. ಕಿರು ಉದ್ಯಮಗಳ ಸಮಸ್ಯೆಗಳ ವಿಶ್ಲೇಷಣೆಗೆ ಲಿಕೆಟ್ಸ್‌ರವರ ಐದು ಶ್ರೇಣಿಯ ಅಂಕೀಕರಣ ವಿಧಾನವನ್ನು ಬಳಸಲಾಗುವುದು.

೧.೭ ಅಧ್ಯಯನದ ಊಹೆಗಳು

೧) ಪ್ರವಾಸೋದ್ಯಮ ಮತ್ತು ಆರ್ಥಿಕಾಭಿವೃಧಿಯ ಉದ್ಯೋಗ ಸೃಷ್ಟಿ ಮತ್ತು ಆದಾಯದಲ್ಲಿ ಪರಸ್ಪರ ಸಂಬಂಧಿಯಾಗಿವೆ.

೨) ಪ್ರವಾಸೋದ್ಯಮವು ಕಿರು ಉದ್ಯಮಗಳು ಅಭಿವೃದ್ಧಿಗೆ ಪೂರಕವಾಗಿದೆ.

೩) ಪ್ರವಾಸೀ ಸುಧಾರಿತ ಮೂಲಭೂತ ಅನುಕೂಲತೆಗಳು ಕಿರು ಉದ್ಯಮಗಳ ಅಭಿವೃದ್ಧಿಗೆ ಪೂರಕವಾಗಿವೆ.

೧.೮ ಅಧ್ಯಯನ ಇತಿಮಿತಿಗಳು

೧. ಈ ಅಧ್ಯಯನವನ್ನು ದಕ್ಷಿಣ ಕನ್ನಡದ ಪ್ರವಾಸೀ ಕೇಂದ್ರಗಳಗೆ ಮಾತ್ರ ಸೀಮಿತ ಗೊಳಿಸಲಾಗಿದೆ.

೨. ಪ್ರವಾಸೀ ಕೇಂದ್ರಗಳಲ್ಲಿ ಬೇರೆ ಬೇರೆ ಸ್ಥಳಗಳಲ್ಲಿ ಬೇರೆ ಬೇರೆ ಉದ್ಯಮಗಳು ಬೇರೆ ಬೇರೆ ಪ್ರವಾಸೀ ಉತ್ಪನ್ನಗಳ ರೂಪದಲ್ಲಿ ಆರ್ಥಿಕಾಭಿವೃದ್ಧಿಗೆ ಸಹಾಯವಾಗಿವೆ. ಆದರೆ ಈ ಅಧ್ಯಯನ ಪ್ರದೇಶದಲ್ಲಿ ಪ್ರಮುಖ ಪ್ರವಾಸೀ ಉತ್ಪನ್ನಗಳಾದ ಧಾರ್ಮಿಕ ವೈದ್ಯಕೀಯ, ಸಮುದ್ರತೀರಗಳು ಮತ್ತು ಪಾರ್ಕ್‌ಗಳಲ್ಲಿ ಅವಕಾಶವಿರುವ ಕಿರು ಉದ್ಯಮಗಳನ್ನು ಗಮನದಲ್ಲಿಟ್ಟುಕೊಂಡು ಅಧ್ಯಯನ ಮಾಡಲಾಗುತ್ತದೆ.

೩. ಪ್ರವಾಸೀ ಕೇಂದ್ರಗಳಲ್ಲಿರುವ ಕಿರು ಉದ್ಯಮಗಳ ಒಂದು ಸಮಗ್ರ ಅಧ್ಯಯನವಾಗಬೇಕಿದ್ದರೆ ಕಿರು ಉದ್ಯಮಗಳಿಂದ ಅನುಕೂಲ ಪಡೆಯುವ ಪ್ರವಾಸಿಗರಿಂದ ಮಾಹಿತಿ ಪಡೆದು ಅಧ್ಯಯನ ಮಾಡಬೇಕು ಆದರೆ ಈ ಅಧ್ಯದಲ್ಲಿ ಕಿರು ಉದ್ಯಮಗಳಿಂದ ಮಾತ್ರ ಸಂಪೂರ್ಣ ಮಾಹಿತಿಯನ್ನು ಸಂಗ್ರಹಿಸಿ ವಿಶ್ಲೇಷಣೆ ಮಾಡಲಾಗಿದೆ.

ಯಾವುದೇ ಉಧ್ಯಮದ ಅಧ್ಯಯನ ಮಾಡುವಾಗ ಸಾಮಾನ್ಯವಾಗಿ ಬಂಡವಾಳ, ಉತ್ಪಾದನೆ, ಮಾರುಕಟ್ಟೆ ಹಣಕಾಸು ವ್ಯವಸ್ಥೆ ಮತ್ತು ಗ್ರಾಹಕರ ಬೇಡಿಕೆಗಳನ್ನು ವಿಶ್ಲೇಷಣೆ ಮಾಡಲಾಗುತ್ತದೆ. ಆದರೆ ಈ ಅಧ್ಯಯನದಲ್ಲಿ ಈ ಎಲ್ಲಾ ಅಂಶಗಳನ್ನು ಪರೀಕ್ಷಿಸಲಾಗಿಲ್ಲ.

ಅದೇನಿದ್ದರೂ, ಈ ದ.ಕ. ಜಿಲ್ಲೆಯ ಪ್ರವಾಸೀ ಕೇಂದ್ರಗಳಲ್ಲಿ ಇರುವ ಕಿರುಉದ್ಯಮಗಳ ಒಂದು ಪರಿಚಯ ಮಾಡಿಕೊಳ್ಳುವ ದೃಷ್ಠಿಯಿಂದ ಮತ್ತು ಅವುಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ವಿಶ್ಲೇಷಣೆ ಮಾಡುವ ದೃಷ್ಠಿಯಿಂದ ಈ ಅಧ್ಯಯನವನ್ನು ಮಾಡಲಾಗಿದೆ.

೧.೯ ಅಧ್ಯಾಯಗಳ ಪರಿಚಯ

ಈ ಸಂಶೋಧನಾ ಅಧ್ಯಯನವನ್ನು ಐದು ಮುಖ್ಯ ಅಧ್ಯಾಯಗಳಾಗಿ ವಿಂಗಡಿಸಲಾಗಿದೆ.

ಮೊದಲನೆಯ ಅಧ್ಯಾಯದಲ್ಲಿ, ಪೀಠಿಕೆ, ಉದ್ದೇಶಗಳು, ಅಧ್ಯಯದ ಊಹೆಗಳು, ವಿಧಾನಗಳು, ಸಮಸ್ಯೆ, ಇತಿಮಿತಿಗಳನ್ನು ಬಗ್ಗೆ ವಿವರಣೆ ನೀಡಲಾಗಿದೆ.

ಎರಡನೇ ಅಧ್ಯಾಯದಲ್ಲಿ ಅಧ್ಯಯನ ಕ್ಷೇತ್ರವಾಗಿ ಆರಿಸಿದ ದಕ್ಷಿಣಕನ್ನಡ 'ಜಿಲ್ಲೆಯ ಸಮಗ್ರ ಪರಿಚಯವನ್ನು ನೀಡಲಾಗಿದೆ.

ಮೂರನೇ ಅಧ್ಯಾಯದಲ್ಲಿ ಆರ್ಥಿಕ ಅಭಿವೃದ್ಧಿಯಲ್ಲಿ ಪ್ರವಾಸೋಧ್ಯಮ ಮತ್ತು ಕಿರು ಉದ್ಯಮಗಳ ಪ್ರಾತವನ್ನು ಸವಿವರವಾಗಿ ವಿವರಿಸಲಾಗಿದೆ.

ನಾಲ್ಕನೇ ಅಧ್ಯಾಯದಲ್ಲಿ, ಅಧ್ಯಯನ ಕೈಗೊಂಡ ಪ್ರದೇಶದಲ್ಲಿ ಸಂಗ್ರಹಿಸಿದ ಪ್ರಾಥಮಿಕ ದತ್ತಾಂಶದ ವಿಶ್ಲೇಷಣೆ, ಮಾಹಿತಿ ಸಂಗ್ರಹಣೆಯ ವಿಧಾನ ಬಗ್ಗೆ ವಿವರಿಸಲಾಗಿದೆ.

ಐದನೇ ಅಧ್ಯಾಯದಲ್ಲಿ ಅಧ್ಯಯನದ ಫಲಿತಗಳು, ಸಾರಾಂಶ, ಮುಂದಿನ ಅಧ್ಯಯನದ ದಿಕ್ಸೂಚಿ ಮತ್ತು ಸಲಹೆ ಸೂಚನೆಗಳನ್ನು ಕೊಡಲಾಗಿದೆ.

ಅಧ್ಯಾಯ – ೨

ಅಧ್ಯಯನ ಕ್ಷೇತ್ರದ ಒಂದು ಪರಿಚಯ

ಅಧ್ಯಾಯ – ೨

ಅಧ್ಯಯನ ಕ್ಷೇತ್ರದ ಒಂದು ಪರಿಚಯ

೨.೧ ಪೀಠಿಕೆ

ದಕ್ಷಿಣ ಕನ್ನಡ ಜಿಲ್ಲೆಯ ಕರ್ನಾಟಕ ರಾಜ್ಯದ ಒಂದು ಭಾಗವಾಗಿದ್ದು ಪರಶುರಾಮ ಸೃಷ್ಟಿಸಿದ ನಾಡೆಂದು ಹೆಸರುವಾಸಿಯಾಗಿದೆ. ಈ ನಾಡು ಉಗಮದ ಬಗ್ಗೆ ತನ್ನದೇ ಆದ ವಿಸ್ತಾರವಾದ ಚರಿತ್ರೆಯನ್ನು ಹೊಂದಿದೆ. ೧೬ನೇ ಶತಮಾನದಲ್ಲಿ ಈ ನಾಡು ವಿಜಯನಗರ ಅರಸರ ಒಂದು ಭಾಗವಾಗಿತ್ತು. ೧೯೬೩ರಲ್ಲಿ ಇದು ಹೈದರಾಲಿಯ ಸಾಮ್ರಾಜ್ಯದ ಭಾಗವಾಗಿತ್ತು. ನಂತರ ಹೈದರಾಲಿಯ ಮಗನಾದ ಟಿಪ್ಪುವಿನ ಆಡಳಿತಕ್ಕೆ ಒಳಪಟ್ಟ ೧೮೯೯ರ ಮೈಸೂರು ಕದನದ ವರೆಗೆ ಈ ನಾಡು ಟಿಪ್ಪುವಿನ ಆಡಳಿತಕ್ಕೆ ಒಳಪಟ್ಟಿತ್ತು. ತದನಂತರ ಬ್ರಿಟಿಷ್ ಆಡಳಿತದಿಂದ ಈ ಜಿಲ್ಲೆಯು ಮದ್ರಾಸ್ ಪ್ರೆಸಿಡೆನ್ಸಿಯ ಆಡಳಿತಕ್ಕೆ ಸೇರಿಕೊಂಡಿತು. ೧೯೫೬ರಲ್ಲಿ ರಾಜ್ಯಗಳ ಪುನರ್‌ವಿಂಗಡನೆಯಾದಾಗ ದಕ್ಷಿಣ ಕನ್ನಡ ಜಿಲ್ಲೆಯ ಕರ್ನಾಟಕ ರಾಜ್ಯದ ಭಾಗವಾಯಿತು.

೨.೨ ಕರ್ನಾಟಕ

ಕರ್ನಾಟಕ ಭಾರತದ ದಕ್ಷಿಣದ ರಾಜ್ಯಗಳಲ್ಲಿ ಒಂದಾಗಿದೆ. ನವೆಂಬರ್ ೧.೧೯೫೬ರಂದು ಈಗಿನ ಕರ್ನಾಟಕ ರಾಜ್ಯವನ್ನು 'ಮೈಸೂರು ರಾಜ್ಯ' ಎಂದು ಕರೆಯಲಾಗುತ್ತಿತ್ತು. ಕರ್ನಾಟಕ ಎಂಬ ಪದದ ಬಳಿಕ ಮೊದಲು ಮಹಾಭಾರತದಲ್ಲಿ ಕಂಡು ಬರುತ್ತದೆ. ಕರ್ನಾಟಕ ಎಂಬ ಹೆಸರಿಗೆ ಅನೇಕ ಉತ್ಪತ್ತಿಗಳು ಪ್ರತಿಪಾದಿಸಲ್ಪಟ್ಟಿದೆ. ಎರಡಕ್ಕಿಂತ ಹೆಚ್ಚಾಗಿ ಒಪ್ಪಲ್ಪಟ್ಟಿರುವ ವ್ಯುತ್ಪತ್ತಿ ಎಂದರೆ ಕರ್ನಾಟಕ ಎಂಬುದು ಕರು + ನಾಡು ಎಂಬುದರಿಂದ ವುತ್ಪತ್ತಿಯನ್ನು ಪಡೆದಿದೆ. ಕರುನಾಡು ಎಂದರೆ 'ಎತ್ತರದ ಪ್ರದೇಶ' ವೆಂದು ಅರ್ಥಕೊಡುತ್ತದೆ. 'ಕರ್ನಾಟಕಂ' ಪದದ ಬಳಕೆಯನ್ನು ಮಹಾಭಾರತದಲ್ಲಿ ಕಾಣುತ್ತಿವೆ. ಅದೇ ರೀತಿಯಲ್ಲಿ ಕರ್ನಾಡು, ಕನ್ನಾಟ, ಕರುನಾಡರ್, ಹೀಗೆ ಪದ ಬಳಕೆ ಮಾಡಿರುವುದನ್ನು ಕಾಣುತ್ತೇವೆ. ಕರ್+ ನಾಟ್+ ಅಗಂ= ಕರ್ನಾಟಕಂ ಅಂದರೆ 'ಕಪ್ಪು ಮಣ್ಣಿನನಾಡು ಎಂದು ಸಂಸ್ಕೃತದಲ್ಲಿ ಅರ್ಥೈಸಲಾಗಿದೆ. ಸುಮಾರು ೨೦೦೦ವರ್ಷಗಳ ಹಿಂದಿನಿಂದಲೂ ಕರ್ನಾಟಕ ಎಂಬ ಪದ ಬಳಕೆಯಲ್ಲಿರುವುದು ತಿಳಿದುಬರುತ್ತದೆ.

ಕರ್ನಾಟಕವು ಪಶ್ಚಿಮದಲ್ಲಿ ಅರಬ್ಬೀ ಸಮುದ್ರದಿಂದ ವಾಯುವ್ಯದಲ್ಲಿ ಗೋವಾದಿಂದ ಉತ್ತರದಲ್ಲಿ ಮಹಾರಾಷ್ಟ್ರದಿಂದ ಪೂರ್ವದಲ್ಲಿ ಆಂಧ್ರಪ್ರದೇಶದಿಂದ, ಆಗ್ನೇಯದಲ್ಲಿ ತಮಿಳುನಾಡಿನಿಂದ, ನೈಋತ್ಯದಲ್ಲಿ ಕೇರಳದಿಂದ ಸುತ್ತುವರಿಯಲ್ಪಟ್ಟಿದೆ. ಕರ್ನಾಟಕವು ೩೦ಜಿಲ್ಲೆಗಳನ್ನು, ೧೭೫ ತಾಲೂಕುಗಳನ್ನು, ೨೭೮ ಪಟ್ಟಣಗಳನ್ನು, ೨೫,೮೮೦ಕ್ಕೂ ಹೆಚ್ಚು ಹಳ್ಳಿಗಳನ್ನು ಗ್ರಾಮೀಣ ಮಹಿಳಾ ಕಾರ್ಮಿಕರ ಸಮಸ್ಯೆಗಳು- ಬಂಟ್ವಾಳ ತಾಲೂಕಿನಲ್ಲಿ ಒಂದು ಪ್ರಕರಣ ಅಧ್ಯಯನ ಒಳಗೊಂಡಿದೆ. ಇದು ಭಾರತದ ಪರ್ಯಾಯ ದ್ವೀಪದ ಪಶ್ಚಿಮದ ಮಧ್ಯಭಾಗದಲ್ಲಿದೆ. ಉತ್ತರದಕ್ಷಿಣವಾಗಿ ೭೦೦ಕಿ.ಮೀ.ಗಳಷ್ಟು ಉದ್ದವಾಗಿಯೂ, ಪೂರ್ವಪಶ್ಚಿಮವಾಗಿ ೪೦೦ಕಿ.ಮೀ ಅಗಲವಾಗಿದೆ. ೧,೯೧,೮೯೧ಚ.ಕಿ.ಮೀ ಭೂ ವಿಸ್ತೀರ್ಣವನ್ನು ಹೊಂದಿದ್ದು ದೇಶದಲ್ಲಿ ೮ನೇ ಸ್ಥಾನವನ್ನು ಪಡೆದಿದೆ. ಕರ್ನಾಟಕವೂ ಸುಮಾರು ೨೫೦ರಿಂದ ೩೦೦ಕಿ.ಮೀ. ಉದ್ದದ ಸಮುದ್ರ ತೀರವನ್ನು ಹೊಂದಿದೆ. ಸಮುದ್ರ ಮಟ್ಟಕ್ಕಿಂತ ೨೦೦೦ಅಡಿಗಳಿಗೂ ಹೆಚ್ಚು ಎತ್ತರವಿದ್ದು, ಬೇರಾವ ರಾಜ್ಯವೂ ಸಮುದ್ರ ಮಟ್ಟದಿಂದ ಇಷ್ಟೊಂದು ಎತ್ತರದಲ್ಲಿಲ್ಲವೆಂಬುದು ವಿಶೇಷವಾಗಿದೆ.

ಕನ್ನಡ ಭಾಷೆಯನ್ನು ಮಾತನಾಡುವ ಪ್ರದೇಶವನ್ನು ಒಟ್ಟು ಗೂಡಿಸಿ ಕರ್ನಾಟಕ ರಾಜ್ಯವನ್ನಾಗಿ ಗುರುತಿಸಲಾಗುತ್ತದೆ. ಭಾರತದ ದಕ್ಷಿಣ ಕನ್ನಡ ಪ್ರಸ್ಥಭೂಮಿ ಎನಿಸಿರುವ ಕರ್ನಾಟಕ ಅನೇಕ ಶತಮಾನಗಳ ಇತಿಹಾಸವನ್ನು ಹೊಂದಿದೆ. ಕರ್ನಾಟಕವು ತನ್ನದೇ ಆದ ವಿಶಿಷ್ಟ ಸನ್ನಿವೇಶ, ಭೂ ಸ್ವರೂಪ, ವಿವಿಧ ಪ್ರಾಣಿ ಸಂಕುಲ, ಉತ್ಕೃಷ್ಟವಾದ ಮಣ್ಣು, ಜಲಸಂಪನ್ಮೂಲ, ಖನಿಜ ಸಂಪತ್ತು ಸಾರಿಗೆ ಸಂಪರ್ಕ, ಮಾಧ್ಯಮಗಳು, ರಾಜಕೀಯ, ಸಾಮಾಜಿಕ, ಆರ್ಥಿಕ, ಕೈಗಾರಿಕೆ ಮತ್ತು ಸಾಂಸ್ಕೃತಿಕ ಬೆಳವಣಿಗೆ ಹಾಗೂ ವೃತ್ತಿಪರ ವಿಷಯಗಳ ಮೇಲೆ ಬೆಳಕು ಚೆಲ್ಲುತ್ತದೆ.

ಕರ್ನಾಟಕದ ವ್ಯವಸಾಯವು ಆರ್ಥಿಕತೆಯ ಪ್ರಮುಖ ಬೆನ್ನಲುಬಾಗಿದ್ದು, ರಾಜ್ಯದ ಆದಾಯಕ್ಕೆ ಅಮೋಘ ಕೊಡುಗೆಯನ್ನು ನೀಡುತ್ತಿದೆ. ರಾಜ್ಯದ ಒಟ್ಟು ಜನಸಂಖ್ಯೆಯ ಶೇಕಡಾ ೬೦ಕ್ಕಿಂತಲೂ ಅಧಿಕ ಜನರು ಕೃಷಿಯನ್ನೇ ಅವಲಂಬಿಸಿದ್ದಾರೆ. ಕರ್ನಾಟಕದಲ್ಲಿ ಭತ್ತ, ಜೋಳ, ಗೋಧಿ, ರಾಗಿ, ಕಡಲೆ. ತೊಗರಿ, ಕಬ್ಬು, ತೆಂಗು, ಅಡಿಕೆ, ಹತ್ತಿ, ಕಾಫಿ, ಚಹ ಮುಂತಾದ ಬೆಳೆಗಳನ್ನು ಬೆಳೆಯಲಾಗುತ್ತದೆ. ಕರ್ನಾಟಕ ರಾಜ್ಯದಲ್ಲಿ ಸುಮಾರು ೨ ಕೋಟಿ ಕಾರ್ಮಿಕರಿದ್ದು ಇವರೆಲ್ಲ ರಾಜ್ಯದ ಹಾಗೂ ರಾಷ್ಟ್ರದ ಏಳಿಗೆಗಾಗಿ ಅನವರತ ದುಡಿಯುತ್ತಿದ್ದಾರೆ. ಕರ್ನಾಟಕದಲ್ಲಿ ಸಂಘಟಿತ ಹಾಗೂ ಅಸಂಘಟಿತ ಕ್ಷೇತ್ರದಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ದುಡಿಯುತ್ತಿದ್ದಾರೆ.

ದೇಶದಲ್ಲಿಯೇ ಕರ್ನಾಟಕವು ಜನಸಂಖ್ಯೆಯಲ್ಲಿ ೯ನೇ ಸ್ಥಾನದಲ್ಲಿದ್ದು ೨೦೧೧ನೇ ಜನಗಣತಿಯ ಪ್ರಕಾರ ೬,೧೧,೩೦,೭೦೪ ಜನಸಂಖ್ಯೆಯನ್ನು ಹೊಂದಿದೆ. ಜನಸಾಂದ್ರತೆಯು ಪ್ರತಿ ಚದರ ಕಿ.ಮೀಗೆ ೩೧೯ ಜನರನ್ನು ಒಳಗೊಂಡಿದೆ. ೨೦೧೧ರ ಜನಗಣತಿ ಪ್ರಕಾರ ಕರ್ನಾಟಕದ ಲಿಂಗಾನುಪಾತ ಪ್ರತಿ ಸಾವಿರ ಪುರುಷರಿಗೆ ೯೬೮ ಸ್ತ್ರೀಯರಿದ್ದಾರೆ. ಕರ್ನಾಟಕದ ಸಾಕ್ಷರತೆಯ ಪ್ರಮಾಣವು ಪ್ರಗತಿಯ ವರ್ಷದಲ್ಲಿದ್ದು ೨೦೧೧ನೇ ಜನಗಣತಿಯ ಪ್ರಕಾರ ಕರ್ನಾಟಕದ ಸಾಕ್ಷರತಾ ಪ್ರಮಾಣವು ಶೇಕಡಾ ೭೫.೬೦ಆಗಿದ್ದು, ಇದರಲ್ಲಿ ಶೇಕಡಾ ೮೨.೮೫ರಷ್ಟು ಪುರುಷರು ಹಾಗೂ ಶೇಕಡಾ ೬೮.೧೩ರಷ್ಟು ಮಹಿಳೆಯರು ಆಗಿದ್ದಾರೆ.

೨.೩ ದಕ್ಷಿಣ ಕನ್ನಡ ಜಿಲ್ಲೆ

೧೮೬೦ರ ಹಿಂದೆ ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳನ್ನು ಒಟ್ಟಾಗಿ ಕೆನರಾ ಎಂದು ಕರೆಯಲಾಗುತ್ತಿತ್ತು. ೧೮೬೦ರಲ್ಲಿ ಬ್ರಿಟಿಷರು ಈ ಭಾಗವನ್ನು ಉತ್ತರ ಕೆನರ ಮತ್ತು ದಕ್ಷಿಣ ಕೆನರಾ ಎಂದು ವಿಂಗಡಿಸಿದರು. ೧೮೬೨ರಲ್ಲಿ ಉತ್ತರ ಕೆನರವನ್ನು ಬೋಂಬೆ ಪ್ರೆಸಿಡೆನ್ಸಿ ಹಾಗೂ ದಕ್ಷಿಣ ಕೆನರವನ್ನು ಮದ್ರಾಸ್ ಪ್ರೆಸಿಡೆನ್ಸಿಗೆ ಸೇರಿಸಲಾಯಿತು. ಕುಂದಾಪುರ ತಾಲೂಕು ಮೊದಲು ಉತ್ತರ ಕೆನರದಲ್ಲಿದ್ದರೂ ನಂತರ ದಕ್ಷಿಣ ಕೆನರಕ್ಕೆ ಸೇರಿಸಲಾಯಿತು. ಕರ್ನಾಟಕ ಸರಕಾರವು ಆಗಸ್ಟ್ ೧೯೯೭ ರಲ್ಲಿ ಆಡಳಿತ ದೃಷ್ಟಿಯಿಂದ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯನ್ನು ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯಾಗಿ ವಿಂಗಡಿಸಿತು. ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯು ಪಶ್ಚಿಮ ಘಟ್ಟದಿಂದ ಕರಾವಳಿವರೆಗಿನ 'ಪರಶುರಾಮ ಸೃಷ್ಟಿಯ' ಭಾಗವಾಗಿದೆ.

ಪ್ರಾಚೀನ ಕಾಲದಲ್ಲಿ ಭಾರತದ ಪಶ್ಚಿಮ ಕರಾವಳಿಯು ಯುರೋಪಿನ ಮೆಡಿಟರೇನಿಯನ್ ದೇಶಗಳೊಂದಿಗೆ ವ್ಯಾಪಾರ ಹಾಗೂ ವಾಣಿಜ್ಯ ಸಂಪರ್ಕಗಳನ್ನು ಹೊಂದಿತ್ತೆಂದು ಗ್ರೀಕ್ ಮತ್ತು ರೋಮಿನ ದಾಖಲೆಗಳು ಉಲ್ಲೇಖಿಸುತ್ತದೆ. ಸಾಗರೋತ್ತರ ವ್ಯಾಪಾರದಲ್ಲಿ ದ.ಕ ಜಿಲ್ಲೆಯು ಗುರುತರವಾದ ಪಾತ್ರ ವಹಿಸಿದನ್ನು ದಾಖಲೆಗಳು ಖಚಿತಪಡಿಸುತ್ತದೆ. ಭಾರತದ ಕರಾವಳಿಯಿಂದ ಸಾಂಬಾರ್ ಪದಾರ್ಥಗಳು, ಬೆಲೆ ಬಾಳುವ ಹರಳುಗಳು, ಮಸ್ಲಿನ್ ಬಟ್ಟೆ ಗಳನ್ನು ಮುಖ್ಯವಾಗಿ ಆಮದು ಮಾಡಿಕೊಳ್ಳುತ್ತಿದ್ದವು. ದಕ್ಷಿಣ ಕನ್ನಡದಲ್ಲಿ ಲಭಿಸಿರುವ ಇತಿಹಾಸ ಪೂರ್ವದ ಅವಶೇಷಗಳು ಹಲವು ಕುತೂಹಲಕಾರಿಯಾದ ವಿಷಯಗಳನ್ನು ಬೆಳಕಿಗೆ ತಂದಿವೆ. ಕರಾವಳಿಯ ಮೂರು ಜಿಲ್ಲೆಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯು ಅತ್ಯಂತ ಮುಂದುವರಿದ ಜಿಲ್ಲೆಯಾಗಿದೆ.

ಖನಿಜ ಸಂಪತ್ತು ಸಾರಿಗೆ ಮತ್ತು ಸಂಪರ್ಕ ಕೈಗಾರಿಕೆಗಳು ಮತ್ತು ಅರಣ್ಯ ಸಂಪತ್ತು

ಜಿಲ್ಲೆಯಲ್ಲಿ ಬಾಕ್ಸೈಟ್, ಲೈಮ್ ಸೆಲ್, ಸಿಲಿಕಾ ಕ್ಯಾಂಡ್, ಚಿನ್ನ, ಕಬ್ಬಿಣದ ಅದಿರು ಕ್ಯಾನೈಟ್. ಕೋರಂಡಂ, ಗಾರ್‌ನೆಟ್, ಬಿಲ್ಡಿಂಗ್ ಸ್ಟೋನ್, ಲಾಟರೈಟ್, ಆರ್ಡಿನರಿ ಕ್ಲೇ, ಸ್ಯಾಂಡ್ ಮುಂತಾದ ಖನಿಜ ಸಂಪನ್ಮೂಲಗಳು ಲಭ್ಯವಿದ್ದು ಜಿಲ್ಲೆಯ ಆರ್ಥಿಕಾಭಿವೃದ್ಧಿಗೆ ಪೂರಕವಾಗಿದೆ. ಚಿನ್ನವು ಮುದ್‌ಮೂರನಲ್ಲಿ ಸಿಗುತ್ತದೆ. ಇದು ಮದಲು ಹೊಳೆಯ ಪ್ರವಾಹದೊಂದಿಗೆ ಹರಿದು ಬಂದ ರೇವು ಮಣ್ಣಿನಲ್ಲಿ ಸಿಗುತ್ತದೆ.

ಕಬ್ಬಿಣದ ಅದಿರು, ಪುತ್ತೂರು ತಾಲೂಕಿನ ಅರಬಡ ಗುಡ್ಡ, ಬೋರೆ ಗುಡ್ಡ, ಬೂತಾರ್ ಗುಡ್ಡ, ಓಡತ್ ಮುಟ್, ಬಂಟ್ವಾಳ ತಾಲೂಕಿನ ಕನ್ನಡ, ಬೆಳ್ತಂಗಡಿ ತಾಲೂಕಿನ ನಿಡೆಲೆಗಳಲ್ಲಿ ಲಭ್ಯವಿದೆ. ಕಬ್ಬಿಣ ಅದಿರು ಸುಳ್ಯ ತಾಲೂಕಿನ ಸುಬ್ರಮಣ್ಯ ಬೆಟ್ಟಗಳ ಸಾಲಿನಲ್ಲಿ ಸಂಗ್ರಹಗೊಂಡಿದೆ. ಕ್ಯಾನೈಟ್: ಸುಳ್ಯ ತಾಲೂಕಿನ ಕೊಲ್ಲಗುಡ್ಡ ಹಾಗೂ ದೇವ ಚಾರ್ಲ ಪ್ರದೇಶಗಳಲ್ಲಿ ಕ್ಯಾನೈಟ್ ಸಿಗುತ್ತಿದೆ. ಇದು ತಿಳಿ ನೀಲಿ ಬಣ್ಣದಿಂದ ಕೂಡಿದೆ. ಅಲ್ಲದೆ ಕೋರಂಡಂ, ಗಾರ್‌ನೆಟ್, ಬಾಕ್ಸೈಟ್, ಕ್ರೇ, ಲೈಮ್ ಹಿಲ್ ಮುಂತಾದ ಖನಿಜ ಸಂಪನ್ಮೂಲಗಳು ಜಿಲ್ಲೆಯಲ್ಲಿ ಲಭ್ಯವಿದೆ.

ಸಾರಿಗೆ ಸಾರ್ವಜನಿಕ ಉಪಯುಕ್ತ ಸೇವೆಯಾಗಿದ್ದು ಇದ್ ಸರಕು ಮತ್ತು ಸೇವೆಗಳಿಗೆ ಸ್ಥಳ ಮತ್ತು ಕಾಲ ತುಷ್ಟ ಗುಣವನ್ನು ನೀಡುತ್ತದೆ. ಈಲ್ಲೆಯು ೧೭೪೨೦ ಕಿ.ಮೀ ಉದ್ದದ ರಾಷ್ಟ್ರೀಯ ಹೆದ್ದಾರಿಯನ್ನು ಹೊಂದಿದೆ. ಜಿಲ್ಲೆಯಲ್ಲಿ ೨೦೧೧-೧೨ ರಲ್ಲಿ ೧೧೮.೬೨ ಕಿ.ಮೀ ಉದ್ದದ ಬ್ರಾಡ್‌ಗೇಜ್ ರೈಲ್ವೇ ಮಾರ್ಗವು ಕಾರ್ಯವಹಿಸುತ್ತಿದೆ. ಜಿಲ್ಲಾ ಕೇಂದ್ರವಾದ ಮಂಗಳೂರಿನಿಂದ ಚೈನ್ನೈ, ಮುಂಬಯಿ, ತಿರುವನಂತಪುರ ಮತ್ತು ಬೆಂಗಳೂರು ಪಟ್ಟಣಗಳೊಂದಿಗೆ ರೈಲ್ವೆ ಸಂಪರ್ಕ ಕಲ್ಪಿಸಲಾಗಿದೆ. ಜಿಲ್ಲೆಯಲ್ಲಿ ಒಟ್ಟು ೧೯ ರೈಲ್ವೆ ನಿಲ್ದಾಣಗಳಿವೆ. ದಕ್ಷಿಣ ಕನ್ನಡ ಜಿಲ್ಲೆಯು ಒಂದು ಅಂತರ್ ರಾಷ್ಟ್ರೀಯ ವಿಮಾನ ನಿಲ್ದಾಣವನ್ನೂ ಹೊಂದಿದೆ.

ಆರ್ಥಿಕತೆಯ ಎಲ್ಲಾ ವಲಯಗಳನ್ನು ಮೂರು ಭಾಗಗಳಾಗಿ ವರ್ಗೀಕರಿಸಿದಾಗ ಕೈಗಾರಿಕೆಯು ದ್ವಿತೀಯ ವಲಯ ಎನಿಸಿಕೊಳ್ಳುತ್ತದೆ. ಕೈಗಾರಿಕೆಗಳ ಅಭಿವೃದ್ದಿಗೆ ಬೇಕಾದ ಖನಿಜ ಸಂಪನ್ಮೂಲಗಳಾದ ಚಿನ್ನ, ಬಾಕ್ಸೈಟ್, ಲೈಮ್ ಸೆಲ್, ಸಿಲಿಕಾ ಕ್ಯಾಂಡ್, ಬಿಲ್ಡಿಂಗ್ ಸ್ಟೋನ್, ಲಾಟರೈಟ್ ಮುಂತಾದವು ವಿದ್ಯುಚ್ಛಕ್ತಿ, ಸಾರಿಗೆ ಸಂಪರ್ಕ ವ್ಯವಸ್ಥೆ, ನುರಿತ ಕಾರ್ಮಿಕರ ಸಂಖ್ಯೆ ಮುಂತಾದ ಅಂಶಗಳು ಜಿಲ್ಲೆಯಲ್ಲಿ ಲಭ್ಯವಿದ್ದು ಕೈಗಾರಿಕೆ ಬೆಳವಣಿಗೆಗೆ ಪೂರಕವಾಗಿವೆ.

ಮಂಗಳೂರು ರಿಫೈನರಿ ಅಂಡ್ ಪೆಟ್ರೋ ಕೆಮಿಕಲ್ಸ್ ಲಿಮಿಟೆಡ್, ಮಂಗಳೂರು ಕೆಮಿಕಲ್ಸ್ ಅಂಡ್ ಫರ್ಟಿಲೈಸರ್ಸ್, ಬಿ.ಎ.ಎಸ್.ಎಫ್ ಇಂಡಿಯಾ ಲಿಮಿಟೆಡ್, ಕುದುರೆ ಮುಖ ಐರನ್ ಓರ್ ಕಂಪನಿ, ಭಾರತ ಪೆಟ್ರೋಲಿಯಂ, ಹಿಂದೂಸ್ಥಾನ್ ಲಿವರ್ ಲಿಮಿಟೆಡ್, ಲ್ಯಾಮಿನಾ ಸಸ್‌ಪೆನ್ಶನ್ ಪ್ರೊಡಕ್ಟ್ಸ್, ರುಚಿ ಸೋಯ ಇಂಡಸ್ಟ್ರೀಸ್, ಕ್ಯಾಂಪ್ಕೋ ಮುಂತಾದ ೧೯ ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು, ನವ ಮಂಗಳೂರು ಬಂದರು, ಮೀನುಗಾರಿಕೆಗೆ ಹಾಗೂ ಅದಕ್ಕೆ ಸಂಬಂಧಿಸಿದ ಉದ್ಯಮಗಳು, ಸಾಫ್ಟ್‌ವೇರ್ ಕಂಪೆನಿಗಳು ಜಿಲ್ಲೆಯ ಪರಿಪೂರ್ಣ ಬೆಳವಣಿಗೆಗೆ ಸಹಾಯಕಾರಿಯಾಗಿವೆ. ಜಿಲ್ಲೆಯಲ್ಲಿ ಬೃಹತ್ ಪ್ರಮಾಣದ ಕೈಗಾರಿಕೆಗಳಿದ್ದು, ೩೪,೧೨೯ ಲಕ್ಷ ರೂ. ಬಂಡವಾಳ ತೊಡಗಿದ್ದು, ೧.೧೬೦೯ ಮಂದಿಗೆ ಉದ್ಯೋಗ ಒದಗಿಸಿದೆ.

ಜಿಲ್ಲೆಯಲ್ಲಿ ಒಟ್ಟು ಭೌಗೋಳಿಕ ವಿಸ್ತೀರ್ಣದಲ್ಲಿ ಶೇ. ೨೬.೯೩ ರಷ್ಟು ಅರಣ್ಯ ಪ್ರದೇಶ ಹೊಂದಿ ರಾಜ್ಯದಲ್ಲಿ ಏಳನೆಯ ಸ್ಥಾನ ಪಡೆದುಕೊಂಡಿದೆ. ಬೀಟೆ, ಸಾಗುವಾನಿ, ಹೆಬ್ಬಲಸು, ಹಲಸು, ತಿರುವೆ, ಕಲ್ಬಾಶೆ, ನಾಗ ಸಂಪಿಗೆ, ಬೇರಿಗ, ನಂದಿ, ಕರಿಮರ, ಸಿರಿ ಹೊನ್ನೆ, ಮರುವ, ಕಿರಾಲ್ ಬೋಗಿ, ಒಣ್ಣು, ಅಣವು ಉತ್ತಮ ಮೌಲ್ಯವುಳ್ಳ ಮರಗಳು ಲಭ್ಯವಿದ್ದು, ಅರಣ್ಯಾಧಾರಿತ ಕೈಗಾರಿಕೆಗಳ ಸ್ಥಾಪನೆಗೆ ಅವಕಾಶವಿದೆ. ದ.ಕ. ಜಿಲ್ಲೆಯು ವಿದೇಶಗಳಿಗೆ ಮರಗಳನ್ನು ರಫ್ತು ಮಾಡಿ ವಿದೇಶೀ ವಿನಿಮಯವನ್ನು ಗಳಿಸುತ್ತಿದೆ. ತನ್ಮೂಲಕ ಜಿಲ್ಲೆಯ ಆರ್ಥಿಕಾಭಿವೃದ್ಧಿಗೆ ಸಹಾಯಕಾರಿಯಾಗಿದೆ. ಜಿಲ್ಲೆಗೆ ಅರಣ್ಯ ಸಂಪತ್ತಿನಿಂದ ಬರುವ ಆದಾಯ ೨೧೩.೧೨ ಲಕ್ಷಗಳಾಗಿರುತ್ತದೆ.

ಬೆಳೆಗಳು, ಭೂ ಹಿಡುವಳಿ ಮತ್ತು ನೀರಾವರಿ

ಜಿಲ್ಲೆಯ ಒಟ್ಟು ಬಿತ್ತನೆ ಪ್ರದೇಶದಲ್ಲಿ ಶೇ.೩೮ರಷ್ಟು ಪ್ರದೇಶದಲ್ಲಿ ಆಹಾರ ಪದಾರ್ಥಗಳನ್ನು ಉಳಿದ ಶೇ ೬೨ ರಷ್ಟು ಪ್ರದೇಶದಲ್ಲಿ ತೋಟಗಾರಿಕೆ ಬೆಳೆಗಳು, ತರಕಾರಿಗಳು, ಎಣ್ಣೆ ಬೀಜಗಳು, ಕಬ್ಬು ಮುಂತಾದವುಗಳನ್ನು ಬೆಳೆಯಲಾಗುತ್ತದೆ. ಜಿಲ್ಲೆಯು ೨೦೧೦-೧೧ ರಲ್ಲಿ ೫೯,೫೬೫ ಹೆಕ್ಟೇರ್ ಪ್ರದೇಶದಲ್ಲಿ ಭತ್ತವನ್ನು ಹಾಗೂ ೩,೨೬೦ ಹೆ. ಪ್ರದೇಶದಲ್ಲಿ ದ್ವಿದಳ ಧಾನ್ಯಗಳನ್ನು ಬೆಳೆಯಲಾಗಿತ್ತು. ೬೫೧೫ ಹೆಕ್ಟೇರ್ ಪ್ರದೇಶದಲ್ಲಿ ಹಣ್ಣಿನ ಬೆಳೆಗಳು, ೪೨೦೧ ಹೆಕ್ಟೇರ್ ಪ್ರದೇಶದಲ್ಲಿ ತರಕಾರಿಗಳು, ೩೨೧೩ ಹೆಕ್ಟೇರ್ ಪ್ರದೇಶದಲ್ಲಿ ಸಾಂಬಾರು ಬೆಳೆಗಳು, ೮೩೪೬೭

ಶೇ. ೩೪.೫೫, ಶೇ ೩೪.೯೪ ಶೇ ೪೪.೬೯ ಹಾಗೂ ಶೇ ೪೫.೯೮ ರಷ್ಟಿರುವುದನ್ನು ಅಂಕಿ ಅಂಶಗಳು ಸ್ಪಷ್ಟಪಡಿಸುತ್ತದೆ.

ಭೂ ಹಿಡುವಳಿ ಗಣನೆಯನ್ನು ಪ್ರತಿ ೫ ವರ್ಷಗಳಿಗೊಂದಾವರ್ತಿ ನಡೆಸಲಾಗುತ್ತಿದ್ದು, ಜನಸಂಖ್ಯಾ ಹೆಚ್ಚಳದಿಂದಾಗಿ ದೊಡ್ಡ ಹಿಡುವಳಿದಾರ ಸಂಖ್ಯೆ ಕುಂಠಿತಗೊಂಡು ಚಿಕ್ಕ ಹಿಡುವಳಿದಾರರ ಸಂಖ್ಯೆ ಹೆಚ್ಚಳಗೊಂಡಿರುವುದು ಅಂಕಿ ಅಂಶಗಳಿಂದ ತಿಳಿದು ಬಂದಿರುತ್ತದೆ.

ರಾಜ್ಯದ ೩ ಕರಾವಳಿ ಜಿಲ್ಲೆಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯು ಒಂದಾಗಿದೆ. ಈಲ್ಲೆಯಲ್ಲಿ ನೇತ್ರಾವತಿ, ಶಾಂಭವಿ, ಗುರುಪುರ ಹಾಗೂ ಕುಮಾರಧಾರ ಎಂಬ ೪ ನದಿಗಳು ಹುಟ್ಟಿ ಹರಿದರೂ ಜಿಲ್ಲೆಯಲ್ಲಿ ದೊಡ್ಡ ಪ್ರಮಾಣದ ಕಾಲುವೆ ನೀರಾವರಿ ಪದ್ಧತಿಯಾಗಲಿ ಅಥವಾ ದೊಡ್ಡ ಪ್ರಮಾಣದ ನೀರಾವರಿ ಯೋಜನೆಗಳಾವುದೂ ಇಲ್ಲ.

ಜಿಲ್ಲಾ ಆದಾಯ, ನಗರೀಕರಣ ಉದ್ಯೋಗ

ತಲಾವಾರು ನಿವ್ವಳ ಆಂತರಿಕ ಉತ್ಪನ್ನವು ಜಿಲ್ಲೆಯ ಆರ್ಥಿಕ ಬೆಳವಣಿಗೆಯನ್ನು ಗುರುತಿಸುವ ಮಾಪನವಾಗಿದ್ದು ಪ್ರಾಯೋಗಿಕ ಅಸಮತೋಲವನ್ನು ಅಳೆಯಲೂ ಸಹಕರಿಸುತ್ತದೆ. ದಕ್ಷಿಣ ಕನ್ನಡದ ತಲಾ ಆದಾಯವು ಕೇವಲ ೩೫೬ ರೂ. ಗಳಿದ್ದು ಈಗ ೩೩,೧೯೧ ರೂಗಳಿಗೆ ಹೆಚ್ಚಳಗೊಂಡಿರುವುದು ಜಿಲ್ಲೆಯ ಅಭಿವೃದ್ಧಿ ಹಾಗೂ ಜನರ ಜೀವನ ಮಟ್ಟದ ಸುಧಾರಣೆಯನ್ನು ಸೂಚಿಸುತ್ತದೆ.

ಜನರ ಜೀವನ ಮಟ್ಟವನ್ನು ಸುಧಾರಿಸಲು ಸಮಾಜ ಕಲ್ಯಾಣ ಕಾರಕ್ರಮಗಳದ ಬಡತನ ನಿವಾರಣೆ, ಕ್ಷಾಮ ಪರಿಹಾರ ಯೋಜನೆ, ಕನಿಷ್ಠ ಅಗತ್ಯ ಕಾರ್ಯಕ್ರಮ, ಸ್ವರ್ಣ ಜಯಂತಿ, ಸ್ವರೋಜ್‌ಗಾರ್ ಯೋಜನೆ, ಜವಾಹರ್ ಗ್ರಾಮ ಸಮೃದ್ಧಿ ಯೋಜನೆ, ಅಕ್ಷರ ದಾಸೋಹ ಯೋಜನೆ, ಸ್ತ್ರೀ ಶಕ್ತಿ ಯೋಜನೆ, ಆಶ್ರಯ ಯೋಜನೆ, ಜೀವ ವಿಮೆ, ಭಾಗ್ಯ ಜ್ಯೋತಿ ಮುಂತಾದ ಹತ್ತು ಹಲವು ಕಾರ್ಯಕ್ರಮಗಳನ್ನು ಹಮ್ಮಿ ಕೊಂಡಿದೆ.

ರಾಜ್ಯದ ಜನಸಂಖ್ಯೆಯಲ್ಲಿ ಶೇಕಡ ೩೪ರಷ್ಟು ಜನರು ಪಟ್ಟಣ/ನಗರ ಪ್ರದೇಶಗಳಲ್ಲಿ ವಾಸಿಸುತ್ತಿರುವುದು ಕಂಡುಬರುತ್ತಿದೆ ಸಾರಿಗೆ ಸಂಪರ್ಕಗಳು, ವಿದ್ಯುಚ್ಛಕ್ತಿ, ನೀರು ಪೂರೈಕೆ, ವಸತಿ,

ಆರೋಗ್ಯ ರಕ್ಷಣೆ, ಶಿಕ್ಷಣ ಮತ್ತು ಆಸ್ಪತ್ರೆಗಳ ಸೌಲಭ್ಯಗಳಿಂದ ಸಮರ್ಪಕ ನಗರ ಮೂಲ ಸೌಕರ್ಯಗಳು ಇರುವುದರಿಂದ ಬಂಡವಾಳ ಹೂಡಿಕೆಗಳು, ಪ್ರತಿಭೆಗಳನ್ನು ಆಕರ್ಷಿಸುವುದಲ್ಲದೆ ಸಾಮಾಜಿಕ–ಆರ್ಥಿಕ ಕಾರ್ಯಚಟುವಟಿಕೆಗಳ ಬೆಳವಣಿಗೆಯನ್ನು ನಿರಂತವಾಗಿಸಿರಿವೆ ದಕ್ಷಿಣ ಕನ್ನಡ ಜಿಲ್ಲೆಯ ನಗರೀಕರಣದ ಬೆಳವಣಿಗೆಯಲ್ಲಿ ರಾಜ್ಯದಲ್ಲಿ ಎರಡನೇ ಸ್ಥಾನವನ್ನು ಪಡೆದಿದೆ.

ಜಿಲ್ಲೆಯೂ ವ್ಯವಸಾಯ ಪ್ರಧಾನವಾಗಿದ್ದು, ವ್ಯವಸಾಯ ಹಾಗೂ ಪ್ರವಾಸೋದ್ಯಮ ಕ್ಷೇತ್ರಗಳು ಇಲ್ಲಿನ ಉದ್ಯೋಗದ ಪ್ರಮುಖ ಮೂಲಗಳಾಗಿವೆ. ಆದರೆ ಅರೆ ಉದ್ಯೋಗದ ರೂಪದಲ್ಲಿ ನಿರುದ್ಯೋಗವು ಈ ಕ್ಷೇತ್ರದಲ್ಲಿ ಪ್ರಚ್ಛನ್ನವಾಗಿದೆ. ಈ ಅರೆ ಉದ್ಯೋಗದಲ್ಲಿ ಎರಡು ಬಗೆಗಳಿದೆ. ದೃಶ್ಯ ಮತ್ತು ಅದೃಶ್ಯ. ದೃಶ್ಯ ಅಥವಾ ಕಾಣುವಂತಹ ಅರೆ ಉದ್ಯೋಗವನ್ನು ಕಡಿಮೆ ಅವಧಿಯ ಕೆಲಸದ ರೂಪದಲ್ಲಿ ಗುರುರಿಸುವುದು. ಆದರೆ ಅದೃಶ್ಯ ಅಥವಾ ಕಾಣದೆ ಇರುವ ಅರೆ ಉದ್ಯೋಗವು ಕಡಿಮೆ ಆದಾಯ, ಕೌಶಲ್ಯದ ಅಪೂರ್ಣ ಉಪಯೋಗದ ಅಥವಾ ಕಡಿಮೆ ಉತ್ಪಾದನಾ ಶಕ್ತಿ ಇರುವ ಘಟಕಗಳಲ್ಲಿಯೂ ಉದ್ಯೋಗಗಳಲ್ಲಿ ಕಾಣಬಹುದು.

ಜನಸಂಖ್ಯೆ

ಕರ್ನಾಟಕದ ಕರಾವಳಿ ಜಿಲ್ಲೆಗಳಲ್ಲಿ ಒಂದಾದ ದಕ್ಷಿಣ ಕನ್ನಡ ಜಿಲ್ಲೆಯ ವಿಶಿಷ್ಟವಾದ ಪ್ರಾಕೃತಿಕ ಲಕ್ಷಣ ಹಾಗೂ ಹವಾಗುಣವನ್ನು ಒಳಗೊಂಡಿದ್ದಾಗಿದೆ. ಕ್ರಿಸ್ತಶಕದಿಂದಲೂ ಈ ಪ್ರದೇಶಕ್ಕೆ ಗ್ರೀಕರು ಬಳಿಕ ಅರಬರು, ಪೋರ್ಚುಗೀಸರು, ಡಚ್ಚರು, ಆಂಗ್ಲರು ಮೊದಲಾದ ವಿದೇಶಿಯರ ಸಂಪರ್ಕವಾದ್ದರಿಂದ ಇಲ್ಲಿನವರ ಸಾಮಾಜಿಕ, ಆರ್ಥಿಕ ಹಾಗೂ ಧಾರ್ಮಿಕ ಬದುಕು ರಾಜ್ಯದ ಇತರ ಭಾಗಕ್ಕಿಂತ ಸಾಕಷ್ಟು ಭಿನ್ನವಾಗಿ ರೂಪುಗೊಳ್ಳಲು ಕಾರಣವಾಗಿದೆ. ಇಷ್ಟಲ್ಲದೆ ರಾಜಕೀಯವಾಗಿಯೂ ಈ ಪ್ರಾಂತ್ಯದ ಬೇರೆ ಬೇರೆ ರಾಜರು, ಸ್ಥಳೀಯ ಸಾಮಂತರು ಮೊದಲಾದವರ ಆಡಳಿತಕ್ಕೆ ಒಳಗಾದ ಪರಿಣಾಮವಾಗಿ, ಆಯಾ ಸಂದರ್ಭಗಳಲ್ಲಿ ಇತರ ಭಾಗಗಳಿಂದ ವಿವಿಧ ಜಾತಿ ಸಮುದಾಯಗಳು ಇಲ್ಲಿಗೆ ವಲಸೆ ಬಂದು ನೆಲೆ ನಿಂತದ್ದರಿಂದಲೂ, ಆ ಮೊದಲು ಸ್ಥಳೀಯವಾಗಿಯೇ ಇಲ್ಲಿ ಇದ್ದವರ ಜೀವನ ಕ್ರಮಗಳಿಂದಾಗಿಯೂ ಒಟ್ಟಾರೆ ಇಲ್ಲಿನ ಜನಜೀವನವು ವಿಶಿಷ್ಟವಾಗಿ ರೂಪುಗೊಂಡಿರುವುದು ನಮ್ಮ ಗಮನಕ್ಕೆ ಬರುತ್ತದೆ.

ದ್ರಾವಿಡ ಭಾಷೆಗಳಲ್ಲಿ ಒಂದಾದ ತುಳುವು ಇಲ್ಲಿನ ಮೂಲನಿವಾಸಿಗಳ ಭಾಷೆ ಆದುದರಿಂದ ಪ್ರಸ್ತುತ ಆಡಳಿತಾತ್ಮಕವಾಗಿ ಈ ಪ್ರದೇಶವನ್ನು ದಕ್ಷಿಣ ಕನ್ನಡ ಜಿಲ್ಲೆ ಎಂದು

ಹೆಸರಿಸಿದರೂ, ಸಾಂಸ್ಕೃತಿಕವಾಗಿ ಅದನ್ನು ತುಳುನಾಡು ಎಂದೇ ಹಿಂದಿನಿಂದಲೂ ಗುರುತಿಸಲಾಗುತ್ತಿದೆ. ಪಶ್ಚಿಮಘಟ್ಟ ಶ್ರೇಣಿಯು ಈ ಭಾಗವನ್ನು ರಾಜ್ಯದ ಇತರ ಪ್ರಧಾನ ಭಾಗದಿಂದ ಪ್ರತ್ಯೇಕೀಕರಿಸಿದೆ ಅಂತೆಯೇ, ವ್ಯಾವಹಾರಿಕವಾಗಿ ಇಲ್ಲಿನ ಜನರು ತಮ್ಮನ್ನು ಘಟ್ಟದ ಕೆಳಗಿನವರೆಂದೂ ಅದರ ಆಚೆಯವರನ್ನು ಘಟ್ಟದ ಮೇಲಿನವರೆಂದೂ ಗುರುತಿಸಿಕೊಳ್ಳುವ ರೂಢಿಯಿದೆ. ಆಡಳಿತ ಕಾರಣಕ್ಕಾಗಿ ಉಡುಪಿ ಪರಿಸರವನ್ನು ಮಂಗಳೂರು ಪರಿಸರದಿಂದ ವಿಭಾಗಿಸಿದ್ದರೂ, ಆಂತರಿಕವಾಗಿ ಈ ಪ್ರಾಂತ್ಯವು ಒಂದೇ ಬಗೆಯ ಸಾಮಾಜಿಕ, ಸಾಂಸ್ಕೃತಿಕ ಗುಣವಿಶೇಷಗಳನ್ನು ಒಳಗೊಂಡಿದೆ ಎಂಬುದನ್ನೂ ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಕೆಲವೊಂದು ಜಾತಿ ಸಮುದಾಯಗಳು ಎರಡೂ ಜಿಲ್ಲೆಗಳಲ್ಲಿ ಸಮಾನವಾಗಿವೆ. ಅವರ ಆಚಾರ-ಸಂಪ್ರದಾಯಗಳು, ದೈವ-ಆರಾಧನೆಗಳು ಬಹು ಮಟ್ಟಿಗೆ ಒಂದೇ ಬಗೆಯಾಗಿವೆ. ಆದಾಗ್ಯೂ ಈ ಜಿಲ್ಲಾ ಗ್ಯಾಸೆಟಿಯರ್ ಉದ್ದೇಶಕ್ಕನುಗುಣವಾಗಿ ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿದಂತೆ ಮಾತ್ರ ಇಲ್ಲಿನ ಜನತೆಯ ಸಾಮಾಜಿಕ ಹೂಗೂ ಧಾರ್ಮಿಕ ಬದುಕಿನ ವಿವಿಧ ಮುಖಗಳ ಸ್ಥೂಲ ಪರಿಚಯವನ್ನು ಮಾಡಿಕೊಡುವ ಪ್ರಯತ್ನವನ್ನು ಈ ಮುಂದೆ ಮಾಡಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಜನಸಂಖ್ಯೆಯು ೨೦೧೧ರ ಜನಗಣತಿಯಂತೆ ಒಟ್ಟು ೧೮,೯೭,೭೩೦ ಆಗಿದ್ದು, ಇದರಲ್ಲಿ ಗ್ರಾಮೀಣ ಜನಸಂಖ್ಯೆಯು ೧೧,೬೮,೪೭೮ ಆಗಿದ್ದರೆ. ನಗರ ಜನಸಂಖ್ಯೆಯು ೭,೨೯,೩೦೭ ಆಗಿದೆ. ಅಂದರೆ, ನಗರ ಜನಸಂಖ್ಯೆಗಿಂತ (ಶೇ. ೩೮.೪) ಗ್ರಾಮೀಣ ಜನಸಂಖ್ಯೆಯು (ಶೇ. ೬೧.೬) ೪,೩೯,೧೭೬ ರಷ್ಟು ಹೆಚ್ಚಾಗಿದ್ದುದು ಕಂಡು ಬರುತ್ತದೆ. ಈಜಿಲ್ಲೆಯಲ್ಲಿ ಒಟ್ಟು ೩೫೪ ಜನವಸತಿ ಇರುವ ಗ್ರಾಮಗಳಿದ್ದು ಅವು ಐದು ತಾಲೂಕುಗಳಲ್ಲಿ ಹಂಚಿಕೆಯಾಗಿವೆ. ಆನವಸತಿ ಇರದ ಗ್ರಾಮಗಳು ಜಿಲ್ಲೆಯಲ್ಲಿ ಇಲ್ಲದ್ದು ಉಲ್ಲೇಖನೀಯವಾಗಿವೆ. ತಾಲೂಕುವಾರು ಹೋಲಿಸಿದಾಗ ಮಂಗಳೂರು ತಾಲೂಕಿನಲ್ಲಿ ಅತಿ ಹೆಚ್ಚು ಅಂದರೆ ೮೮ ಗ್ರಾಮಗಳಿದ್ದರೆ, ಸುಳ್ಯ ತಾಲೂಕಿನಲ್ಲಿ ಅತಿ ಕಡಿಮೆ ಅಂದರೆ ೪೦ ಗ್ರಾಮಗಳಿವೆ. ಹಾಗೆಯೇ, ತಾಲೂಕುವಾರು ಜನಸಂಖ್ಯೆಯನ್ನು ತುಲನಾತ್ಮಕವಾಗಿ ನೋಡಿದಾಗ ಮಂಗಳೂರು ತಾಲೂಕು ಅತೀ ಹೆಚ್ಚು ಜನಸಂಖ್ಯೆ (೮,೮೭,೮೫೬) ಹೊಂದಿ ಮೊದಲ ಸ್ಥಾನದಲ್ಲಿದ್ದರೆ ೩,೬೧,೫೫೪ ಜನಸಂಖ್ಯೆಯ ಬಂಟ್ವಾಳ ತಾಲೂಕು ಎರಡನೆಯ ಸ್ಥಾನದಲ್ಲಿರುವುದು, ಸುಳ್ಯ ತಾಲೂಕು ಕೊನೆಯ ಸ್ಥಾನದಲ್ಲಿರುವುದು, ಸುಳ್ಯ ತಾಲೂಕು ಕೊನೆಯ ಸ್ಥಾನದಲ್ಲಿರುವುದೂ (೧,೪೦,೭೫೪) ವೇದ್ಯವಾಗುತ್ತದೆ. ಆದರೆ, ಗ್ರಾಮೀಣ ಜನಸಂಖ್ಯೆಯ ದೃಷ್ಟಿಯಿಂದ ನೋಡಿದಾಗ ಬಂಟ್ವಾಳ ತಾಲೂಕು ಮೊದಲ ಸ್ಥಾನದಲ್ಲಿದ್ದರೆ (೩,೦೬,೭೩೪) ಮಂಗಳೂರು ತಾಲೂಕು ಎರಡನೆಯ

ಸ್ಥಾನಕ್ಕೆ (೨,೮೧,೭೭೭) ಇಳಿದಿರುವುದು ಕಂಡುಬರುತ್ತದೆ. ಇನ್ನು, ನಗರ ಪ್ರದೇಶದ ಜನಸಂಖ್ಯೆಯನ್ನು ಪರಿಶೀಲಿಸಿದರೆ ಮಂಗಳೂರು ತಾಲೂಕು ಸಹಜವಾಗಿಯೇ ಅತಿ ಹೆಚ್ಚು (೬,೦೧,೦೭೯) ಜನಸಂಖ್ಯೆ ಹೊಂದಿ ಮೊದಲ ಸ್ಥಾನದಲ್ಲಿದ್ದರೆ, ಬಂಟ್ವಾಳ ತಾಲೂಕು ಎರಡನೇ ಸ್ಥಾನ (೫೪,೮೨೦)ದಲ್ಲಿರುವುದು. ಬೆಳ್ತಂಗಡಿ ತಾಲೂಕು ತೀರಾ ಕೊನೆಯ ಸ್ಥಾನ (೭೨೦೫)ದಲ್ಲಿರುವುದು ಕಂಡುಬರುತ್ತದೆ.

೨೦೧೧ರ ಜನಗಣತಿಯಂತೆ ಜಿಲ್ಲೆಯಲ್ಲಿ ಒಟ್ಟು ೯೩೮೪೩೪ ಜನ ಪುರುಷರೂ, ೯೫೯೨೯೬ ಜನ ಸ್ತ್ರೀಯರು ಇದ್ದರು. ತಾಲೂಕುವಾರು ಸಂಖ್ಯೆಯನ್ನು ಹೋಲಿಸಿದರೆ ಪುರುಷರ ಸಂಖ್ಯೆಯು ಮಂಗಳೂರು ತಾಲೂಕಿನಲ್ಲಿ ಅತಿ ಹೆಚ್ಚಾಗಿಯೂ (೪೩೪೭೦೨) ಸುಳ್ಯ ತಾಲೂಕಿನಲ್ಲಿ ಅತಿ ಕಡಿಮೆಯಾಗಿಯೂ (೭೦೯೪) ಇದ್ದಿತು. ಸ್ತ್ರೀಯರ ಸಂಖ್ಯೆ ದೃಷ್ಟಿಯಿಂದ ಮಂಗಳೂರು (೪೪೮೧೫೪) ಹಾಗೂ ಸುಳ್ಯ (೬೯೭೬೦) ತಾಲೂಕುಗಳು ಕ್ರಮವಾಗಿ ಮೊದಲ ಹಾಗೂ ಕೊನೆಯ ಸ್ಥಾನಗಳನ್ನು ಪಡೆದಿದ್ದವು. ವಿಶೇಷವೆಂದರೆ ಇಡೀ ಜಿಲ್ಲೆಯಲ್ಲಿಯೇ ಪುರುಷರಿಗಿಂತ ಸ್ತ್ರೀಯರ ಸಂಖ್ಯೆ ಹೆಚ್ಚಾಗಿದೆ. (ಸುಳ್ಯ ಹೊರತುಪಡಿಸಿ ಇತರ ಎಲ್ಲಾ ತಾಲೂಕುಗಳಲ್ಲಿಯೂ ಇದೇ ಪ್ರವೃತ್ತಿ ಕಂಡುಬಂದಿದೆ.

ಜಿಲ್ಲೆಯ ವಿವಿಧ ತಾಲೂಕುಗಳಿಗೆ ಹೋಲಿಸಿದರೆ ಮಂಗಳೂರು ತಾಲೂಕಿಗಿಂತಲೂ (೧೬೨) ಬೆಳ್ತಂಗಡಿ ತಾಲೂಕಿನಲ್ಲಿ (೧೬೬) ದಶವಾರ್ಷಿಕ ಜನಸಂಖ್ಯಾ ಬೆಳವಣಿಗೆಯು ಹೆಚ್ಚಾಗಿದ್ದುದು ಗಮನಸೆಳೆಯುತ್ತದೆ. ಬಂಟ್ವಾಳ ತಾಲೂಕಿನಲ್ಲಿ ಅತಿ ಕಡಿಮೆ (೧೧.೯) ಪ್ರವೃತ್ತಿ ಕಂಡುಬಂದಿದೆ.

ಜನಸಾಂದ್ರತೆ

೨೦೧೧ರ ಜನಗಣತಿಯಂತೆ ದಕ್ಷಿಣ ಕನ್ನಡ ಜಿಲ್ಲೆಯ ಜನಸಾಂದ್ರತೆಯು (೪೧೬) ರಾಜ್ಯದ ಜನಸಾಂದ್ರತೆಗಿಂತ (೨೭೬) ಹೆಚ್ಚಾಗಿದ್ದಿತು. ಜಿಲ್ಲೆಯ ತಾಲೂಕುಗಳಲ್ಲಿ ಮಂಗಳೂರು ತಾಲೂಕು ಅತಿ ಹೆಚ್ಚಿನ ಜನಸಾಂದ್ರತೆಯನ್ನು (೧೦೪೮), ಸುಳ್ಯ ತಾಲೂಕು ಅತಿ ಕಡಿಮೆ (೧೭೦) ಜನಸಾಂದ್ರತೆಯನ್ನು ಹೊಂದಿದೆ. ವಿಸ್ತೀರ್ಣದ ದೃಷ್ಟಿಯಿಂದ ಜಿಲ್ಲೆಯಲ್ಲಿಯೇ ಅತಿ ದೊಡ್ಡದಾದ (೧೩೭೫.೫೨ಚ.ಕಿ.ಮೀ) ಬೆಳ್ತಂಗಡಿ ತಾಲೂಕಿನಲ್ಲಿಯೂ ಬಹುಪಾಲುಇದೇ ಪ್ರಮಾಣ (೧೮೯) ಇದ್ದಿತು. ಉಳಿದಂತೆ ಬಂಟ್ವಾಳ ಹಾಗೂ ಪುತ್ತೂರು ತಾಲೂಕುಗಳ

ಜನಸಾಂದ್ರತೆಯು ಕ್ರಮವಾಗಿ (೪೯೨) ಹಾಗೂ ೨೬೭ ಆಗಿದೆ. ಜಿಲ್ಲಾ ಕೇಂದ್ರವಾದ ಮಂಗಳೂರು ನಗರದಿಂದಾಗಿಯೇ ಮಂಗಳೂರು ತಾಲೂಕಿನ ಜನಸಾಂದ್ರತೆಯು ಹೆಚ್ಚಾಗಿದೆ. ಎಂದೂ, ಕಾಯ್ದಿಟ್ಟ ಅರಣ್ಯ ಪ್ರದೇಶ ಹೆಚ್ಚಿರುವುದರಿಂದ ಸುಳ್ಯ ಹಾಗೂ ಬೆಳ್ತಂಗಡಿ ತಾಲೂಕುಗಳಲ್ಲಿ ಜನಸಾಂದ್ರತೆ ಕಡಿಮೆ ಇದೆ ಎಂದೂ ಭಾವಿಸಬಹುದಾಗಿದೆ.

ಲಿಂಗಾನುಪಾತ

ದಕ್ಷಿಣ ಕನ್ನಡ ಜಿಲ್ಲೆಯ ಸ್ತ್ರೀ ಪುರುಷರ ಅನುಪಾತವು ೧೦೨೨:೧೦೦೦ ಆಗಿದ್ದು, ಇದು ರಾಜ್ಯದ ಪ್ರಮಾಣಕ್ಕಿಂತಲೂ (೯೬೫) ಹೆಚ್ಚಾಗಿದ್ದುದು ಉಲ್ಲೇಖನೀಯವಾಗಿದೆ. ತಾಲೂಕುವಾರು ಅಂಕಿ ಅಂಶಗಳನ್ನು ತೌಲನಿಕವಾಗಿ ನೋಡಿದಾಗ ಬೆಳ್ತಂಗಡಿ ಮೊದಲ ಸ್ಥಾನದಲ್ಲಿ (೧೦೩೨), ಮಂಗಳೂರು ಎರಡನೇ ಸ್ಥಾನದಲ್ಲಿ (೧೦೩೧), ಬಂಟ್ವಾಳವು ಮೂರನೇ ಸ್ಥಾನದಲ್ಲಿ (೧೦೨೪) ಇರುವುದು ಕಂಡುಬಂದಿದೆ. ಪುತ್ತೂರಿನಲ್ಲಿ ಬಹುಮಟ್ಟಿಗೆ ಸಮ ಪ್ರಮಾಣವಿದೆ (೧೦೦೪). ಇಡೀ ಜಿಲ್ಲೆಗೆ ಹೋಲಿಸಿದರೆ ಸುಳ್ಯ ತಾಲೂಕಿನಲ್ಲಿ (೯೮೩) ಮಾತ್ರ ಸ್ತ್ರೀಯರ ಪ್ರಮಾಣ ಪುರುಷರಿಗಿಂತ ಕಡಿಮೆ ಇರುವುದು ಗಮನಾರ್ಹವಾಗಿದೆ.

ಜಿಲ್ಲೆಯ ವಿವಿಧ ತಾಲೂಕುಗಳಲ್ಲಿನ ಅಂಕಿ ಅಂಶಗಳನ್ನು ಗಮನಿಸಿದರೆ ಮಂಗಳೂರು ತಾಲೂಕಿನಲ್ಲಿ (೪೧೩೭೮) ಅತಿ ಹೆಚ್ಚು ಹಾಗೂ ಬಂಟ್ವಾಳ ತಾಲೂಕಿನಲ್ಲಿ (೧೯೬೪) ಅತಿ ಕಡಿಮೆ ಸಂಖ್ಯೆಯಲ್ಲಿ ಪರಿಶಿಷ್ಟ ಜಾತಿಯವರು ಇದ್ದಾರೆ. ಪುತ್ತೂರು (೩೧೦೦೯) ಎರಡನೆಯ ಸ್ಥಾನದಲ್ಲಿದೆ. ಆದರೆ, ವಿವಿಧ ತಾಲೂಕುಗಳ ಒಟ್ಟು ಸಂಖ್ಯೆಯನ್ನು ಶೇಕಡಾವಾರು ಪ್ರಮಾಣದ ರೀತ್ಯಾ ಅವಲೋಕಿಸಿದರೆ ಶೇ. ೧೩.೯ ಪ್ರಮಾಣ ಹೊಂದಿದ ಸುಳ್ಯ ತಾಲೂಕು ಮೊದಲ ಸ್ಥಾನದಲ್ಲಿದ್ದರೆ, ಪುತ್ತೂರು ಎರಡನೇ ಸ್ಥಾನ (೧೧.೭)ದಲ್ಲಿರುವುದು, ಮಂಗಳೂರು ಹಾಗೂ ಬಂಟ್ವಾಳ ತಾಲೂಕುಗಳಲ್ಲಿ ಅತಿ ಕಡಿಮೆ (೪.೭) ಆದರೆ ಸರಿಸಮ ಪ್ರಮಾಣದಲ್ಲಿ ಪರಿಶಿಷ್ಟ ಜಾತಿ ಇರುವುದು ಕಂಡುಬಂದಿದೆ.

ಸಾಕ್ಷರತೆ, ಶಿಕ್ಷಣ ಮತ್ತು ಕ್ರೀಡೆ

ದಕ್ಷಿಣ ಕನ್ನಡ ಜಿಲ್ಲೆಯ ಸಾಕ್ಷರತೆಯು ಶೇ.೮೨.೪೭ರಷ್ಟು ಇದ್ದು, ಅದರಲ್ಲಿ ಪುರುಷರ ಹಾಗೂ ಸ್ತ್ರೀಯರ ಸಾಕ್ಷರತಾ ಪ್ರಮಾಣವು ಕ್ರಮವಾಗಿ ಶೇ.೮೯.೭೪ ಮತ್ತು ಶೇ.೭.೭೩೯

ಆಗಿರುತ್ತದೆ. ಇದು ರಾಜ್ಯದ ಪ್ರಮಾಣಕ್ಕಿಂತ (ಶೇ.೭೬.೨೯) ಮತ್ತು ಶೇ.೫೭೪೫) ಹೆಚ್ಚಾಗಿಯೇ ಇದೆ.

ಸಾಕ್ಷರತಾ ಪ್ರಮಾಣವನ್ನು ಧರ್ಮವಾರು ಪರಿಶೀಲಿಸಿದಾಗ ಜಿಲ್ಲೆಯಲ್ಲಿ ಜೈನಧರ್ಮಿಯ ಪ್ರಥಮ ಸ್ಥಾನದಲ್ಲಿ (ಶೇ.೯೬೮೯) ಹಾಗೂ ಕ್ರಿಶ್ಚಿಯನ್ನರು ದ್ವಿತೀಯ ಸ್ಥಾನದಲ್ಲಿ (ಶೇ.೯೨.೭೮) ಇದ್ದುದು ತಿಳಿದುಬರುತ್ತದೆ. ಹಿಂದೂ ಮತ್ತು ಮುಸ್ಲಿಂಮರ ಸಾಕ್ಷರತಾ ಪ್ರಮಾಣ ಬಹುಪಾಲು ಒಂದೇ ಆಗಿದೆ. (ಕ್ರಮವಾಗಿ ಶೇ.೮೨.೩೬ ಮತ್ತು ಶೇ.೮೨.೩೨). ಆದರೆ, ಮುಸ್ಲಿಂ ಮಹಿಳೆಯರ ಸಾಕ್ಷರತಾ ಪ್ರಮಾಣ (ಶೇ. ೭೩.೩೪) ಇತರ ಧರ್ಮಿಯ ಮಹಿಳೆಯರಿಗಿಂತ ಕಡಿಮೆ ಇರುವುದೂ ಇಲ್ಲಿ ದಾಖಲಾಗಿದೆ.

ಶಿಕ್ಷಣ ಮತ್ತು ಕ್ರೀಡೆ

೧೮೬೦ರಲ್ಲಿ ಬಾಸಲ್ ಮಿಷನ್ನಿನವರು ಮಂಗಳೂರಿನಲ್ಲಿ ಪೌಢಶಾಲೆಯೊಂದನ್ನು ಪ್ರಾರಂಭಿಸಿ ಸರಕಾರದ ಮಂಜೂರಾತಿ ಪಡೆದರು. ಮೊದಲ ಮಹಾಯುದ್ಧದಿಂದಾಗಿ ಶೈಕ್ಷಣಿಕ ಕ್ಷೇತ್ರಕ್ಕೆ ಆರ್ಥಿಕ ನೆರವು ಅಲಭ್ಯವಾಗಿ, ಹಲವಾರು ಉತ್ತಮ ಯೋಜನೆಗಳು ಜಾರಿಯಾಗದೆ, ಪ್ರಗತಿ ಕುಂಠಿತವಾಯಿತು. ಮಿಷನರಿಗಳಿಂದ ಉತ್ತೇಜಿತರಾದ ಇತರ ಖಾಸಗಿ ಸಂಸ್ಥೆಗಳವರೂ ವಿದ್ಯಾ ಸಂಸ್ಥೆಗೆ ಮುಂದಾದರು. ಅದೇ ಸಂದರ್ಭದಲ್ಲಿ ಗಣಪತಿ ಪ್ರಾಥಮಿಕ ಶಾಲೆ ೧೮೭೦ರಲ್ಲಿ ಪ್ರೌಢ ಶಾಲೆಯಾಯಿತು. ಐತನ್ಮಧ್ಯೆ ೧೮೯೧ರಲ್ಲಿ ಕೆನರಾ ಹೈಸ್ಕೂಲು ಸ್ಥಾಪಿತವಾಯಿತು. ಈ ಎಲ್ಲಾ ಸಂಸ್ಥೆಗಳೂ ಉನ್ನತೀಕರಣಗೊಂಡು ಇಂದಿಗೂ ಆಧುನಿಕ ಶಿಕ್ಷಣ ನೀಡುತ್ತಿವೆ.

೧೮೮೧-೧೮೯೧ರ ದಶಕದ ಸಮೀಕ್ಷೆಯಂತೆ ಜಿಲ್ಲೆಯಲ್ಲಿ ೧೫ವರ್ಷಗಳ ಮೇಲ್ಪಟ್ಟ ಜನಸಂಖ್ಯೆಯ ಶೇಕಡಾ ೮೨.೨ರಷ್ಟು ಗಂಡಸರು ಮತ್ತು ೯೯.೦೨ರಷ್ಟು ಹೆಂಗಸರು ಅನಕ್ಷರಸ್ಥರಾಗಿದ್ದರು. ಉಪ್ಪಿನಂಗಡಿ ನಂತರ ಕುಂದಾಪುರಗಳಲ್ಲಿ ಕ್ರಮವಾಗಿ ಶೇಕಡಾ ೯೦.೮೦ರಷ್ಟು ಹಾಗೂ ೮೬೯೫ರಷ್ಟು ಅನಕ್ಷರಸ್ಥರಿದ್ದರು. ೧೯೨೧ರ ವೇಳೆಗೆ ಶೇಕಡಾ ೧೬೨ರಷ್ಟು ಗಂಡಸರು ಹಾಗೂ ೩.೮ರಷ್ಟು ಹೆಂಗಸರು ಓದು ಬರಹ ಬಲ್ಲವರಾಗಿದ್ದರು.

೧೯೭೦ರ ವರೆವಿಗೆ ಅಸ್ತಿತ್ವದಲ್ಲಿದ್ದ ಸೆಕೆಂಡರಿ ಶಾಲೆಗಳ ಹನ್ನೊಂದು ಹಾಗೂ ಹನ್ನೆರಡನೇ ತರಗತಿಗಳು ಹಾಗೂ ಹಲವು ಪ್ರಥಮ ದರ್ಜೆ ಕಾಲೇಜುಗಳಲ್ಲಿ ನಡೆಯುತ್ತಿದ್ದ ಒಂದು ವರ್ಷದ

ಪಿಯುಸಿ ತರಗತಿಗಳು ೧೯೭೧ರಲ್ಲಿ ಅಂತ್ಯಗೊಂಡು, ಎರಡು ವರ್ಷದ ಪಿಯುಸಿ ಶಿಕ್ಷಣ ಕ್ರಮ ರಾಜ್ಯದಲ್ಲಿ ಜಾರಿಯಾದಾಗ, ಜಿಲ್ಲೆಯ ಹಲವಾರು ಜಿಲ್ಲಾ ಹಾಗೂ ತಾಲೂಕು ಬೋರ್ಡ್ ಹೈಸ್ಕೂಲುಗಳು ಸರಕಾರದ ಆಡಳಿತಕ್ಕೊಳಪಟ್ಟಿದ್ದವು. ಇಂತಹ ಹಲವು ಶಾಲೆಗಳ ವಿಸ್ತರಣಗಳಾದ ಪಿಯುಸಿ ತರಗತಿಗಳೂ (೧೧ ಹಾಗೂ ೧೨ನೇ ತರಗತಿಗಳು) ಆಗಷ್ಟೇ ಅಸ್ತಿತ್ವಕ್ಕೆ ಬಂದ "ಪ್ರೀಯೂನಿರ್ವಸಿಟಿ ಶಿಕ್ಷಣ ಮಂಡಳಿ"ಯ ಆಡಳಿತಕ್ಕೊಳಪಟ್ಟವು.

೨೦೦೫-೦೬ನೇ ಸಾಲಿಗೆ ದಕ್ಷಿಣ ಕನ್ನಡ ಜಿಲ್ಲೆಯ ಒಟ್ಟು ಒಂಬತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ವಾಣಿಜ್ಯ, ಸಿದ್ಧ ಉಡುಪು ತಯಾರಿಕೆ, ಕಂಪ್ಯೂಟರ್ ಟೆಕ್ನಿಕ್, ಮೈಕ್ಯಾನಿಕಲ್ ಸರ್ವಿಸಿಂಗ್, ಆಟೋ ಮೊಬೈಲ್ ಸರ್ವಿಸಿಂಗ್ ಮುಂತಾದ ವಿಷಯಗಳಲ್ಲಿ ಈ ಶಿಕ್ಷಣ ನೀಡಲ್ಪಡುತ್ತಿದೆ.

ಉನ್ನತ ಶಿಕ್ಷಣ

ಇಪ್ಪತ್ತನೇ ಶತಮಾನದ ಮೊದಲಾರ್ಧದಲ್ಲಿ ಜಿಲ್ಲೆಯಲ್ಲಿ ಉನ್ನತ ಶಿಕ್ಷಣಕ್ಕಾಗಿ ಮಂಗಳೂರಿನ ಸರಕಾರಿ ಕಲಾ ಕಾಲೇಜು (ಇಂಟರ್ ಮೀಡಿಯೇಟ್‌ವರೆಗೆ ಮಾತ್ರ) ಹಾಗೂ ಪದವಿ ತರಗತಿ ಹೊಂದಿದ ಖಾಸಗಿ ಕಾಲೇಜುಗಳಾದ ಸೇಂಟ್ ಅಲೋಷಿಯಸ್ ಕಾಲೇಜು ಮತ್ತು ಸೇಂಟ್ ಅಗ್ನೆಸ್ ಕಾಲೇಜು ಮಾತ್ರ ಕಾರ್ಯ ನಿರ್ವಹಿಸುತ್ತಿದ್ದವು. ಮಂಗಳೂರಿನ ಸರಕಾರಿ ಕಾಲೇಜನ್ನು ೧೯೪೮ ರಲ್ಲಿ ಪ್ರಥಮ ದರ್ಜೆ ಕಾಲೇಜಾಗಿ ಮೇಲ್ದರ್ಜೆಗೇರಿಸಲಾಯಿತು. ಮಣಿಪಾಲದ ಅಕಾಡೆಮಿ ಆಫ್ ಜನರಲ್ ಎಜುಕೇಷನ್ ವತಿಯಿಂದ ೧೯೪೯ರಲ್ಲಿ ಉಡುಪಿಯಲ್ಲಿ ಸ್ಥಾಪನೆಗೊಂಡ ಮಹಾತ್ಮ ಗಾಂಧಿ ಮೆಮೋರಿಯಲ್ ಕಾಲೇಜು ಶೈಕ್ಷಣಿಕ ರಂಗದ ಮೈಲುಗಲ್ಲಾಯಿತು. ೧೯೫೦ ರಿಂದ ೧೯೬೦ರ ದಶಕದಲ್ಲಿ ಹಲವಾರು ಪ್ರಥಮ ದರ್ಜೆ ಕಾಲೇಜುಗಳು ಸ್ಥಾಪನೆಯಾದವು. ರಾಜ್ಯ ಪುನಾರಚನೆಯ ಪೂರ್ವದಲ್ಲಿ ಮದರಾಸು ಪ್ರಾಂತಕ್ಕೆ ಜಿಲ್ಲೆಯು ಸೇರಿದ್ದರಿಂದ, ಇಲ್ಲಿನ ಕಾಲೇಜುಗಳು ಮದರಾಸು ವಿಶ್ವವಿದ್ಯಾಲಯದ ಆಡಳಿತಕ್ಕೆ ಸೇರಿದ್ದವಾದರೂ, ಕಸ್ತೂರ್ ಬಾ ವೈದ್ಯಕೀಯ ಕಾಲೇಜು ಮಾತ್ರ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಅಧೀನದಲ್ಲಿದ್ದಿತು. ರಾಜ್ಯ ಪುನಾರಚನೆಯ ನಂತರ ಎಲ್ಲಾ ಕಾಲೇಜುಗಳೂ ಮೊದಲಿಗೆ ಕರ್ನಾಟಕ ವಿಶ್ವವಿದ್ಯಾಲಯ ಅಧೀನಕ್ಕೊಳಪಟ್ಟು ಕಾಲಕ್ರಮದಲ್ಲಿ ಮೈಸೂರು ವಿಶ್ವವಿದ್ಯಾಲಯಕ್ಕೆ ಸೇರ್ಪಡೆಗೊಂಡವು. ೧೯೬೦ರ ವೇಳೆಗೆ ಜಿಲ್ಲೆಯಲ್ಲಿ ಒಟ್ಟು ಏಳು ಪ್ರಥಮ ದರ್ಜೆ ಕಾಲೇಜುಗಳು ಕಾರ್ಯನಿರ್ವಹಿಸುತ್ತಿದ್ದು, ಇವುಗಳಲ್ಲಿ ಮೂರು ಮಂಗಳೂರಿನಲ್ಲಿಯೂ, ಎರಡು ಉಡುಪಿಯಲ್ಲಿಯೂ, ತಲಾ ಒಂದೊಂದು ಪುತ್ತೂರು, ಕಾರ್ಕಳಗಳಲ್ಲಿಯೂ ಇದ್ದವು. ಈ

ಎಲ್ಲಾ ಸಂಸ್ಥೆಗಳಲ್ಲಿ ಒಟ್ಟು ೨,೫೦೧ ಮಂದಿ (೧,೮೮೨ ಗಂ, ೬೧೯ ಹೆ) ಪಿಯುಸಿ ತರಗತಿಗಳಲ್ಲಿಯೂ, ೨,೪೭೭ ಮಂದಿ (೧,೮೪೪ ಗಂ, ೬೩೩ ಹೆ) ಪದವಿ ತರಗತಿಗಳಲ್ಲಿಯೂ ವ್ಯಾಸಂಗ ಮಾಡುತ್ತಿದ್ದರು.

ವಾಯುಗುಣ

ದಕ್ಷಿಣ ಕನ್ನಡ ಜಿಲ್ಲೆಯು ಕರಾವಳಿ ಜಿಲ್ಲೆಯಾಗಿದ್ದು, ವಿಶಿಷ್ಟವಾದ ವಾಯುಗುಣ ಲಕ್ಷಣಗಳನ್ನು ಹೊಂದಿದೆ. ಈ ಪ್ರದೇಶದಲ್ಲಿ ತೇವಾಂಶ ಹೆಚ್ಚಾಗಿದ್ದು, ಮಳೆಗಾಲ, ಚಳಿಗಾಲ ಮತ್ತು ಬೇಸಿಗೆಕಾಲಗಳನ್ನು ಸ್ಪಷ್ಟವಾಗಿ ಗುರುತಿಸಬಹುದು. ಮಳೆಗಾಲದ ಪ್ರಾರಂಭಕ್ಕೆ ಮೊದಲು (ಜೂನ್–ಅಕ್ಟೋಬರ್) ಗಾಳಿಯಲ್ಲಿ ಒತ್ತಡವು ಹೆಚ್ಚಾಗಿರುತ್ತದೆ. ನವೆಂಬರ್– ಫೆಬ್ರವರಿ ಅವಧಿಯಲ್ಲಿ ಚಳಿಯಿದ್ದು ತಂಪಾದ, ಹಿತವಾದ ವಾತಾವರಣವಿರುತ್ತದೆ. ಮಾರ್ಚ್ ಬಳಿಕ ಉಷ್ಣತೆ ಹೆಚ್ಚಾಗುತ್ತಾ, ಏಪ್ರಿಲ್–ಮೇ ತಿಂಗಳಲ್ಲಿ ಅತ್ಯಂತ ಹೆಚ್ಚು ಉಷ್ಣತೆಯಿರುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯ ವಾರ್ಷಿಕ ಸಾಮಾನ್ಯ ಮಳೆಯು ಸರಾಸರಿ ೩೯೭೫.೨ ಮಿ.ಮಿ. ಆಗಿರುತ್ತದೆ. ಇಲ್ಲಿನ ಪರಿಸರ, ಸ್ಥಳೀಯ ಗಿಡ ಮರಗಳು, ಜನರ ಆಹಾರ ಅಭ್ಯಾಸಗಳು ಆರೋಗ್ಯ ಮತ್ತು ವೈದ್ಯಕೀಯ ಪದ್ಧತಿಯ ಮೇಲೆ ಪ್ರಭಾವವನ್ನು ಬೀರುತ್ತವೆ. ಗುಡ್ಡ ಪ್ರದೇಶಗಳನ್ನು ಒಳಗೊಂಡಿರುವ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ಗುಡ್ಡಗಳ ನಡುವೆ ಇರುವ ತಗ್ಗು ಪ್ರದೇಶದ ಮಲೆನಾಡಿನ ಹಳ್ಳಿಗಳಲ್ಲಿ ಅನಾರೋಗ್ಯವು ಹೆಚ್ಚು ಕಾಣಿಸಿಕೊಳ್ಳುತ್ತದೆ. ಈ ಎಲ್ಲಾ ಪ್ರಾಕೃತಿಕ ಲಕ್ಷಣದಿಂದ ಕರಾವಳಿ ಜಿಲ್ಲೆಯಲ್ಲಿ ಬೆವರುವುದು ಹೆಚ್ಚು. ದೈಹಿಕ ಶ್ರಮ ವಹಿಸಿ ದುಡಿಯುವವರು ಹೆಚ್ಚು ಆರೋಗ್ಯವಂತರಾಗಿರುವುದನ್ನು ಜಿಲ್ಲೆಯಲ್ಲಿ ಕಾಣಬಹುದು.

ಜಿಲ್ಲಾ ಆರೋಗ್ಯ ಇಲಾಖೆ

ಆರೋಗ್ಯ ಇಲಾಖೆಯು ಆಡಳಿತಾತ್ಮಕವಾಗಿ ಮಾರ್ಪಾಡು ಹೊಂದಿವೆ. ಎಂಬತ್ತರ ದಶಕದ ಕೊನೆಯಲ್ಲಿ ಜಿಲ್ಲಾ ಪಂಚಾಯತ್ ವ್ಯಾಪ್ತಿಗೆ ಒಳಪಟ್ಟಿತು. ಇದು ಆರೋಗ್ಯ ಮತ್ತು ವೈದ್ಯಕೀಯ ಚಟುವಟಿಕೆಗಳ ಜವಾಬ್ದಾರಿಯನ್ನು ಹೊಂದಿದ್ದು. ಈ ಇಲಾಖೆಯು ಕುಟುಂಬ ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನವೂ ಸೇರಿದಂತೆ, ಆರೋಗ್ಯ ಶಿಕ್ಷಣವನ್ನು ನೀಡುತ್ತದೆ. ಕಾರ್ಕಳ, ಪುತ್ತೂರು ಮತ್ತು ಕುಂದಾಪುರಗಳಲ್ಲಿ ತಾಲೂಕು ಮಟ್ಟದ ಆಸ್ಪತ್ರೆಗಳಿದ್ದು, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕುಟುಂಬ ಕಲ್ಯಾಣ ಕೇಂದ್ರವನ್ನು ಮೊತ್ತಮೊದಲು ೧೯೫೫ರಲ್ಲಿ ಲೇಡಿ ಗೋಷನ್ ಆಸ್ಪತ್ರೆಯಲ್ಲಿ ತೆರೆಯಲಾಯಿತು.

೨.೪ ದಕ್ಷಿಣ ಕನ್ನಡದಲ್ಲಿ ಪ್ರವಾಸೋದ್ಯಮ

ದಕ್ಷಿಣ ಕನ್ನಡ ಜಿಲ್ಲೆಯು ಚರಿತ್ರೆಯಲ್ಲಿ ವಿಶೇಷವಾದ ಸ್ಥಾನವನ್ನು ಹೊಂದಿರುವ ಜಿಲ್ಲೆಯಾಗಿದೆ. ಇಲ್ಲಿಯ ವಿದ್ಯಾಸಂಸ್ಥೆಗಳು, ಪ್ರವಾಸೀ ತಾಣಗಳು, ವಿವಿಧ ಸಂಸ್ಕೃತಿಗಳು, ಪುಣ್ಯಸ್ಥಳಗಳು, ಉದ್ಯಮಗಳು ಪ್ರವಾಸೋದ್ಯಮಕ್ಕೆ ವಿಶಿಷ್ಟವಾದ ಕೊಡುಗೆಯನ್ನು ನೀಡಿವೆ. ಸಮುದ್ರ ತೀರದ ರಮಣೀಯ ನೋಟ, ಹೆಸರುವಾಸಿಯಾದ ಸ್ಮಾರಕಗಳು ದಕ್ಷಿಣ ಕನ್ನಡ ಜಿಲ್ಲೆಯನ್ನು ಅತ್ಯಂತ ಹೆಸರುವಾಸಿಯಾದ ಪ್ರವಾಸಿ ತಾಣವನ್ನಾಗಿಸಿದೆ.

ಪಿಲಿಕುಲ ನಿಸರ್ಗಧಾಮವು ದಕ್ಷಿಣಕನ್ನಡದ ಮನಮೋಹಕ ಪ್ರವಾಸೀ ತಾಣವಾಗಿದೆ. ದ.ಕನ್ನಡದ ೧೪೯ಕಿ.ಮೀ. ಉದ್ದದ ಸಮುದ್ರ ತೀರವು ಕಡಲ ತೀರದ ಸೌಂದರ್ಯವನ್ನು ಪ್ರವಾಸಿಗರಿಗೆ ಉಣಬಡಿಸುತ್ತದೆ. ಪ್ರವಾಸೋದ್ಯಮವನ್ನು ಬೆಳೆಸಲು ಹಲವಾರು ಕಾರಣಗಳಿವೆ. ಅವುಗಳಲ್ಲಿ ಪ್ರಮುಖವಾದುದವೆಂದರೆ ಪ್ರವಾಸೋದ್ಯಮದಿಂದ ವಿದೇಶೀ ವಿನಿಮಯ ಮತ್ತು ಆದಾಯ ಹೆಚ್ಚುತ್ತದೆ. ಅಭಿವೃದ್ಧಿ ಹೊಂದಿದ ದೇಶಗಳು ಪ್ರವಾಸೋದ್ಯಮದ ಆದಾಯದಿಂದ ಇಂದು ಸಮೃದ್ಧ ರಾಷ್ಟ್ರಗಳಾಗಿ ರೂಪುಗೊಂಡಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಪಶ್ಚಿಮ ಘಟ್ಟಗಳು ಪ್ರವಾಸಿಗರ ಆಕರ್ಷಣೆಯ ಕೇಂದ್ರ ಬಿಂದುವಾಗಿದೆ. ಈ ಪಶ್ಚಿಮ ಘಟ್ಟಗಳು ಮಹಾರಾಷ್ಟ್ರದಿಂದ ಕೇರಳದವರೆಗೆ ಸಾವಿರ ಕಿ.ಮೀ. ಗಳಷ್ಟು ಹಬ್ಬಿಕೊಂಡಿವೆ. ಪಶ್ಚಿಮ ಘಟ್ಟಗಳ ಸದಾ ಹಸಿರಾಗಿ ಅನೇಕ ವಿಧವಾದ ಗಿಡಮರಗಳು, ಹೂವುಗಳು, ಅಪರೂಪದ ಸಸ್ಯ, ಪ್ರಾಣಿ ಸಂಕುಲಗಳ ಬೀಡಾಗಿದೆ. ಇಲ್ಲಿರುವ ಅಪರೂಪದ ಪ್ರಭೇದಗಳ ಸಸ್ಯ ಸಂಕುಲಗಳು ಪ್ರಪಂಚದಲ್ಲಿಯೇ ಅಪರೂಪವೆನಿಸಿವೆ. ಪ್ರಾಕೃತಿಕ ವಿಶೇಷಗಳಿಗೆ ಪಶ್ಚಿಮ ಘಟ್ಟಗಳು ಹೆಸರಾಗಿವೆ. ಈ ಕಾರಣಗಳಿಂದ ಈ ಘಟ್ಟಗಳು ಅಂತರ್ ರಾಷ್ಟ್ರೀಯವಾಗಿ ಜೀವ ವೈವಿಧ್ಯಕ್ಕಾಗಿ ಗುರುತಿಸಲ್ಪಟ್ಟಿವೆ. ಜಗತ್ತಿನಲ್ಲಿರುವ ವಿವಿಧ ೧೮ ಜೀವ ವೈವಿದ್ಯ ಸ್ಥಳಗಳು ಪಶ್ಚಿಮ ಘಟ್ಟಗಳು ಒಂದು ಸ್ಥಾನವನು ಪಡೆದಿವೆ. ಎಲ್ಲಾ ರೀತಿಯ ಪರಿಸರ ವೈವಿದ್ಯತೆಯಿಂದ ಅವಿಭಜಿತ ದ.ಕನ್ನಡವು ಇಂದು ಅತೀ ಪ್ರಸಿದ್ಧ ಪ್ರವಾಸೀ ತಾಣಾವಾಗಿ ಮಾರ್ಪಟ್ಟಿದೆ.

ದಕ್ಷಿಣ ಕನ್ನಡ ಜಿಲ್ಲೆಯು ತಮಿಳುನಾಡಿನಂತೆ ದೇವಸ್ಥಾನಗಳ ನಾಡು ಎಂದು ಹೆಸರುವಾಸಿಯಾಗಿರದಿದ್ದರೂ ದೇವಸ್ಥಾನಗಳಿಗೆ ಎಂದು ಕಡಿಮೆಯಾಗಿಲ್ಲ. ಜಿಲ್ಲೆಯಲ್ಲಿ ವಿವಿಧ ಧರ್ಮಗಳಿಗೆ ಸೇರಿರುವಂಥಹ ಧಾರ್ಮಿಕ ಕೇಂದ್ರಗಳು ಹೇರಳವಾಗಿವೆ. ಅವುಗಳಲ್ಲಿ ಹಿಂದೂ,

ಮುಸ್ಲಿಂ, ಜೈನ್, ಕ್ರಿಶ್ಚಿಯನ್ ಸಮುದಾಯಕ್ಕೆ ಸೇರಿರುವಂಥಹ ಧಾರ್ಮಿಕ ಕೇಂದ್ರಗಳಿವೆ. ಹಿಂದೂ ದೇವಸ್ಥಾನಗಳು ಅತ್ಯಂತ ಪ್ರಾಚೀನ ಧಾರ್ಮಿಕ ಕೇಂದ್ರಗಳಾಗಿದ್ದು, ಚರ್ಚಗಳು ಕ್ರೈಸ್ತ ಮಿಶನರಿಗಳಿಂದ ಬ್ರಿಟಿಷ್ ಆಡಳಿತದ ಸಮಯದಲ್ಲಿ ಸ್ಥಾಪನೆಯಾದವುಗಳಾಗಿದ್ದು, ಇತಿಹಾಸ ಪ್ರಸಿದ್ಧ ಉಳ್ಳಾಲದ ದರ್ಗಾವು ಮುಸ್ಲಿಂಮರ ಪ್ರಮುಖ ಧಾರ್ಮಿಕವಾಗಿ ಅತ್ಯಂತ ಪುರಾತನ ಕಾಲದಲ್ಲಿ ನಿರ್ಮಿಸಲ್ಪಟ್ಟಿದೆ. ಈ ದರ್ಗಾವು ಅಜ್ಮೀರ್ ದರ್ಗಾದಷ್ಟೇ ಹೆಸರುವಾಸಿಯಾಗಿದೆ. ಅದೇ ರೀತಿ ಜೈನ ಬಸದಿಗಳು ಗೋಮಟೇಶ್ವರ, ಬಾಹುಬಲಿ ವಿಗ್ರಹಗಳು ಜೈನಚರಿತ್ರೆಯನ್ನು ಬಿಂಬಿಸುತ್ತಿದೆ.

ದಕ್ಷಿಣ ಕನ್ನಡದ ಪ್ರಮುಖ ಪ್ರವಾಸೀ ಕೇಂದ್ರಗಳು

ದಕ್ಷಿಣ ಕನ್ನಡದ ಪ್ರಮುಖ ಪ್ರವಾಸೀ ಕೇಂದ್ರಗಳಲ್ಲಿ ಧಾರ್ಮಿಕ ಸ್ಥಳಗಳು, ಭೌಗೋಳಿಕ ಸ್ಥಳಗಳು, ವೈದ್ಯಕೀಯ ಮತ್ತು ಶೈಕ್ಷಣಿಕ ಸ್ಥಳಗಳು ಸೇರಿವೆ.

ಕಟೀಲು ದುರ್ಗಾಪರಮೇಶ್ವರಿ ದೇವಸ್ಥಾನ

ಕಟೀಲು ಕ್ಷೇತ್ರವು ದಕ್ಷಿಣ ಕನ್ನಡ ಜಿಲ್ಲೆಯ ಒಂದು ಪ್ರಸಿದ್ಧ ಪುಣ್ಯಕ್ಷೇತ್ರವಾಗಿದ್ದು ಅಸಂಖ್ಯಾತ ಭಕ್ತರು ಕ್ಷೇತ್ರವನ್ನು ಸಂದರ್ಶಿಸುತ್ತಾರೆ. ಮಂಗಳೂರಿಗೆ ೨೮ಕಿ.ಮೀ. ಪೂರ್ವದಲ್ಲಿದೆ. ಈ ಕ್ಷೇತ್ರವು ನಂದಿನ ನದಿಯ ತೀರದಲ್ಲಿದೆ. ಇದರ ಪ್ರಧಾನ ದೇವತೆ ಶ್ರೀದೇವಿ ಅಮ್ಮನವರು. ಈ ದೇವಸ್ಥಾನವು ಕಾರಣೀಕ ಕ್ಷೇತ್ರವಾಗಿದ್ದು ಅತ್ಯಂತ ಸುಂದರವಾದ ಶಿಲ್ಪಕಲೆಗೆ ಸಾಕ್ಷಿಯಾಗಿದೆ.

ಸೈಂಟ್ ಎಲೋಶಿಯಸ್ ಚರ್ಚ್ ಮತ್ತು ವಸ್ತು ಸಂಗ್ರಹಾಲಯ

ಮಂಗಳೂರು ನಗರದ ಹೃದಯ ಭಾಗದಲ್ಲಿರುವ ಸೈಂಟ್ ಎಲೋಶಿಯಸ್ ಚರ್ಚ್ ಅಪೂರ್ವಕಲೆಗೆ ಹೆಸರಾಗಿರುವಂತಹ ಒಂದು ಕ್ರೈಸ್ತರ ಧಾರ್ಮಿಕ ಕೇಂದ್ರವಾಗಿದೆ. ಇದು ೧೮೮೦ರಲ್ಲಿ ಕಟ್ಟಲ್ಪಟ್ಟಿತು. ಈ ಚರ್ಚಿನ ಪ್ರತೀ ಇಂಚು ಕೂಡಾ ಪ್ರಸಿದ್ಧ ಇಟಾಲಿಯನ್ ಚಿತ್ರಕಾರ ಆಂಟೂನಿ ಮೊರೈನಿನಿಂದ ಬರೆಸಲ್ಪಟ್ಟಿದೆ. ಗೋಡೆಗಳಲ್ಲಿ ಮತ್ತು ಛಾವಣಿಯ ಮೇಲೆ ಮೊರೈನಿಯ ಸುಂದರ ಚಿತ್ರಕಲೆಯನ್ನು ನೋಡಬಹುದು. ಈ ಚಿತ್ರಗಳು ಅಪೂರ್ವ ಸಂಗ್ರಹಗಳಾಗಿವೆ. ಚರ್ಚ್‌ನ ಗೋಡೆಗಳಲ್ಲಿ ಸಂತ ಥೋಮಸ್ ರಿಂದ ಸಂತ ಜಾನ್ ದಿ. ಬ್ರಿಟೋರ ವರೊನ ಅವರ ಜೀವನ ಚರಿತ್ರೆಯನ್ನು ಚಿತ್ರಿತಲಾಗಿದೆ.

ಸೈಂಟ್ ರೊಸಾರಿಯೋ ಕೆಥೆಡ್ರಲ್

ಮಂಗಳೂರಿನ ಹೃದಯಭಾಗದಲ್ಲಿರುವ ಮತ್ತೊಂದು ಅತ್ಯಂತ ಪುರಾತನವಾದ ಚರ್ಚ್‌ಗಳಲ್ಲಿ ರೊಸಾರಿಯೋ ಕೆಥೆಡ್ರಲ್ ಒಂದಾಗಿದೆ. ಈ ಚರ್ಚ್ ೧೫೬೮ರಲ್ಲಿ ಪೋರ್ಚುಗೀಸರಿಂದ ಕಟ್ಟಲ್ಪಟ್ಟಿತು. ಈ ಚರ್ಚಿನ ಕಟ್ಟಡವು ರೋಮ್‌ನ ಸೇಂಟ್ ಪೀಟರ್ಸ್ ಬೆಸಿಲಿಕಾದ ಕಟ್ಟಡವನ್ನು ಹೋಲುತ್ತದೆ. ಈ ಚರ್ಚ್ ಸರಳವಾದ ಗಾಜಿನ ಕಿಟಕಿಗಳನ್ನು ಹೊಂದಿದ್ದು ಇಲ್ಲಿ ಏಸುಕ್ರಿಸ್ತ ಮತ್ತು ಮರಿಯಮ್ಮನವರ ಅಪೂರ್ವ ಮೂರ್ತಿಗಳನ್ನು ಕಾಣಬಹುದು.

ಸೈಂಟ್ ಮಿಲಾಗ್ರಿಸ್ ಚರ್ಚ್

ಮಿಲಾಗ್ರಿಸ್ ಚರ್ಚ್‌ನ್ನು ಕ್ರಿ.ಶ. ೧೬೮೦ರಲ್ಲಿ ಗೋವಾದ ಸಾಲ್ಪೆಟ್‌ನ ಥೋಮಸ್ ಡಿ ಕ್ಯಾಸ್ಟ್ರೋರವರು ಕಟ್ಟಿದರು. ಈ ಚರ್ಚ್ ರೋಮ್ ಪ್ರಖ್ಯಾತಿ ಚರ್ಚ್ ಸೇಂಟ್ ಪೀಟರ್ಸ್ ಬೆಸಿಲಿಕಾವನ್ನು ಹೋಲುತ್ತದೆ. ಈ ಚರ್ಚಿನ ಪ್ರಧಾನ ದೇವರಾಗಿ ಪಾದುವಾದ ಸಂತ ಅಂತೋನಿಯನ್ನು ಆರಾಧಿಸಲಾಗುತ್ತದೆ. ಸಂತ ಅಂತೋನಿಯವರು ಪವಾಡ ಪುರುಷರಾಗಿದ್ದಾರೆ.

ಸೈಂಟ್ ಎಲೋಶಿಯಸ್ ವಸ್ತು ಸಂಗ್ರಹಾಲಯ

ಸೈಂಟ್ ಎಲೋಶಿಯಸ್ ಚರ್ಚ್ ಒಂದು ವಸ್ತು ಸಂಗ್ರಹಾಲಯಾ ಆಗಿದೆ. ಈ ಸಂಗ್ರಹಾಲಯದಲ್ಲಿ ಹಳೆಯ ಕಾಲದ ನಾಣ್ಯಗಳು, ನೋಟುಗಳು, ಮಂಗಳೂರಿನ ಪ್ರಥಮ ಮೋಟಾರು ಕಾರು, ಹಳೆಯ ಮರದ ಪಾತ್ರಗಳು ಹಳೆ ರೇಡಿಯೋಗಳನ್ನು ಕಾಣಬಹುದು.

ಶ್ರೀಮತಿ ಬಾಯಿ ಸ್ಮಾರಕ ವಸ್ತು ಸಂಗ್ರಹಾಲಯ, ಬಜ್ಜೈ, ಮಂಗಳೂರು

ಬಿಜ್ಜೈ ಸರ್ಕಲ್ ಬಳಿ ಇರುವ ಶ್ರೀಮತಿ ಬಾಯಿ ಸ್ಮಾರಕ ವಸ್ತು ಸಂಗ್ರಹಾಲಯವು ಅಪೂರ್ವ ವಸ್ತುಗಳ ಸಂಗ್ರಹಾಲಯವಾಗಿದೆ. ವಿ.ಆರ್. ಮಿರಾಜ್‌ಕರ್ ಅವರು ಈ ಸಂಗ್ರಹಾಲಯದ ಜಾಗವನ್ನು ದಾನವಾಗಿ ನೀಡಿದ್ದರು. ಈ ಸಂಗ್ರಹಾಲಯದಲ್ಲಿ ಅತ್ಯಂತ ಪುರಾತನ, ಚಾರಿತ್ರಿಕ ವಸ್ತುಗಳ ಸಂಗ್ರಹವಿದೆ.

ಸುಲ್ತಾನ್ ಬತ್ತೇರಿ

ಮಂಗಳೂರಿಂದ ೬ಕಿ.ಮೀ ದೂರದಲ್ಲಿ ಬೋಳೂರಿನಲ್ಲಿ ಟಿಪ್ಪು ಸುಲ್ತಾನನು ೧೮ನೇ ಶತಮಾನದಲ್ಲಿ ಕಾಲಗೋಪುರವನ್ನು ನಿರ್ಮಿಸಿದನು. ಈ ಗೋಪುರವನ್ನು ಗುರುಪುರ ನದಿಗೆ ಸಮೀಪದಲ್ಲಿ ಕಟ್ಟಲಾಗಿದೆ. ಇಲ್ಲಿ ಟಿಪ್ಪುವು ಒಂದು ಕೋಟೆಯನ್ನು ಕಟ್ಟಿದ್ದಾನೆ. ಆ ಕೋಟೆಯನ್ನು ಟಿಪ್ಪುಸುಲ್ತಾನ್ ಕೋಟೆ ಎಂದು ಕರೆಯಲಾಗಿದೆ. ಈ ಕೋಟೆಯಲ್ಲಿರುವ ಕಿಂಡಿಗಳನ್ನು ಬಂದೂಕುಗಳನ್ನು ಇಡುವುದಕೋಸ್ಕರ ಟಿಪ್ಪುವಿನ ಸೈನಿಕರು ಬಳಸುತ್ತಿದ್ದರು. ಯುದ್ಧಕಾಲದ ರಕ್ಷಣೆಗಾಗಿ ಈ ಕೋಟೆಯನ್ನು ಕಟ್ಟಲಾಗಿತ್ತು. ಈ ನದಿತೀರದ ಸೊಬಗು ಅತ್ಯಂತ ರಮಣೀಯವಾಗಿದೆ.

ಮಹಾಲಿಂಗೇಶ್ವರ ದೇವಸ್ಥಾನ ಪುತ್ತೂರು

ಈ ಧಾರ್ಮಿಕ ಸ್ಥಳವು ಮಂಗಳೂರಿನಿಂದ ೫೦ಕಿ.ಮೀ ದೂರದಲ್ಲಿದೆ. ಶ್ರೀ ಮಹಾಲಿಂಗೇಶ್ವರ ದೇವಸ್ಥಾವು ಪುತ್ತೂರಿನ ಅತ್ಯಂತ ಪುರಾತನ ಪುಣ್ಯಸ್ಥಳವಾಗಿದೆ. ಈ ದೇವಸ್ಥಾನವನ್ನು೧೩೫೩ ಶಕ ವರ್ಷದಲ್ಲಿ ವಿಜಯನಗರ ದೊರೆ ಪ್ರತಾಪ ದೇವರಾಯ ಕಟ್ಟಿಸಿದನು. ಪ್ರತೀ ವರ್ಷ ಏಪ್ರಿಲ್ ೧೦ನೇ ತಾರೀಖಿನಿಂದ ಏಪ್ರಿಲ್ ೧೯ನೇ ತಾರೀಖಿನ ವರೆಗೆ ನಡೆಯುವ ವರ್ಷಾವಧಿ ಜಾತ್ರೆ, ರಥೋತ್ಸವ ಮತ್ತು ಲಕ್ಷ ದೀಪ ಪ್ರವಾಸಿಗರನ್ನು, ಭಕ್ತರನ್ನು ಆಕರ್ಷಿಸುತ್ತದೆ.

ಬಿರುಮಲೆ ಬೆಟ್ಟ ಪುತ್ತೂರು

ಪುತ್ತೂರಿನಲ್ಲಿರುವ ಬಿರುಮಲೆ ಬೆಟ್ಟ ಪ್ರವಾಸಿಗರ ಕೇಂದ್ರ ಬಿಂದುವಾಗಿದೆ. ಈ ಬೆಟ್ಟವು ಮಂಗಳೂರಿನಿಂದ ೫೨ಕಿ.ಮೀ. ದೂರದಲ್ಲಿದೆ. ಮಕ್ಕಳ ಉದ್ಯಾನವನ ಮತ್ತು ಮುಕ್ತ ಸಭಾಭವನವು ಈ ನಿಸರ್ಗಧಾಮದ ಆಕರ್ಷಣೆಯಾಗಿದೆ.

ಬೆಂದ್ರ ತೀರ್ಥ ಪುತ್ತೂರು

ಬೆಂದ್ರ ತೀರ್ಥವು ಸ್ವಾಭಾವಿಕ ಬಿಸಿನೀರಿನ ಬುಗ್ಗೆಯಾಗಿದ್ದು ಸೀತಾ ಹಳೆಯ ದಡದಲ್ಲಿದೆ. ಮಂಗಳೂರಿನಿಂದ ೬೫ಕಿ.ಮೀ ದೂರದಲ್ಲಿ ಮತ್ತು ಪುತ್ತೂರಿನಿಂದ ೧೫ಕಿ.ಮೀ ದೂರದಲ್ಲಿ ಬೆಂದ್ರ ತೀರ್ಥವನ್ನು ಕಾಣಬಹುದು. ಬೆಂದ್ರ ತೀರ್ಥ ಎಂದರೆ ತುಳು ಭಾಷೆಯಲ್ಲಿ ಪವಿತ್ರ ಬಿಸಿ ನೀರು

ಎಂದರ್ಥ ಈ ಬಿಸಿನೀರು ಎಲ್ಲಾ ತರಹದ ಚರ್ಮರೋಗಗಳನ್ನು ಗುಣಪಡಿಸುತ್ತಿದೆ ಎಂದು ಪ್ರವಾಸಿಗರು ಇವು ಪಡುವಂತಹ ತಾಣವಾಗಿದೆ.

ಬೆಳ್ತಂಗಡಿಯ ಜಮಾಲಾಬಾದ್ ಕೋಟೆ

ಈ ಅತ್ಯಂತ ಸುಂದರವಾದ ಕೋಟೆಯು ಮಂಗಳೂರಿನಿಂದ ೬೬ಕಿ.ಮೀ. ದೂರದಲ್ಲಿರುವ ಬೆಳ್ತಂಗಡಿಯಲ್ಲಿದೆ. ಚರಿತ್ರೆಯ ಪ್ರಕಾರ ಮೈಸೂರಿನ ಹುಲಿ ಟಿಪ್ಪುಸುಲ್ತಾನನು ಈ ಕೋಟೆಯನ್ನು ತನ್ನ ತಾಯಿಯಾದ ಜಮಾಲಬಿಯ ನೆನಪಿನಲ್ಲಿ ಕಟ್ಟಿಸಿದನು ಎಂದು ಹೇಳುತ್ತದೆ. ಈ ಜಾಗವು ಚಾರಣಿಗರ ತಾಣವಾಗಿದ್ದು ಅಸಂಖ್ಯಾತ ಚಾರಣಿಗರನ್ನು ತನ್ನೆಡೆಗೆ ಆಕರ್ಷಿಸುತ್ತಿದೆ.

ಮೂಡಬಿದರೆಯ ಸಾವಿರ ಕಂಬದ ಬಸದಿ

ಪ್ರಮುಖ ಪ್ರವಾಸಿ ತಾಣ 'ಜೈನ ಕಾಶಿ' ಎಂದೇ ಹೆಸರು ವಾಸಿಯಾಗಿರುವ ಮೂಡಬಿದಿರೆಯು ಮಂಗಳೂರಿನಿಂದ ೩೫ಕಿ.ಮೀ ದೂರದಲ್ಲಿದೆ. ಜೈನ ಬಸದಿಯು ೧೪ ಮತ್ತು ೧೬ನೇ ಶತಮಾನದ ನಡುವೆ ಕಟ್ಟಲ್ಪಟ್ಟಿತು. ಗುರು ಬಸದಿ ಮತ್ತು ತ್ರಿಭುವನ ತಿಲಕ ಚೂಡಾಮಣಿ ಬಸದಿಗಳು ಸಾವಿರ ಕಂಬದ ಬಸದಿಗಳೆಂದು ಪ್ರಸಿದ್ಧವಾಗಿದೆ.

ವೇಣೂರು ಕೂಡಾ ಪ್ರವಾಸಿಗರನ್ನು ಅತೀ ಹೆಚ್ಚು ಸಂಖ್ಯೆಯಲ್ಲಿ ಆಕರ್ಷಿಸುತ್ತಿದೆ. ವೇಣೂರಿನಲ್ಲಿರುವ ಆಗಬಹುದು ಏಕಶಿಲಾ ವಿಗ್ರಹವು ಅಪರೂಪದ ಮೂರ್ತಿಯಾಗಿದೆ. ಈ ಮೂರ್ತಿಯನ್ನು ಅಜಿಲ ಅರಸನಾದ ४ನೇ ವೀರ ತಿಮ್ಮನ್ನನು ಸ್ಥಾಪಿಸಿದನು. ವೇಣೂರು ಗುರುಪುರ ನದಿಯ ದಕ್ಷಿಣ ತಟದಲ್ಲಿದೆ. ಇಲ್ಲಿ ೮ ಬಸದಿಗಳು ಸುಂದರವಾಗಿ ಕಟ್ಟಲ್ಪಟ್ಟಿವೆ.

ಟಾಗೋರ್ ಪಾರ್ಕ್ (ಪಿ.ವಿ.ಎಸ್.ಪಾರ್ಕ್)

ಮಂಗಳೂರಿನ ಸಂತ ಎಲೋಶಿಯಸ್ ಕಾಲೇಜಿನ ಹತ್ತಿರದ ಗುಡ್ಡದ ಪ್ರದೇಶದಲ್ಲಿ ಶತಮಾನದ ಹಳೆಯದಾದ ದೀಪ ಸ್ತಂಭವು ಬಂದರಿಗೆ ಮುಖಮಾಡಿದ್ದು ಸಮುದ್ರದಲ್ಲಿ ಸಂಚರಿಸುತ್ತಿರುವ ಹಡಗುಗಳಿಗೆ ಮತ್ತು ಬೆಸ್ತರಿಗೆ ದಿಕ್ಕು ತೋರಿಸಲು ಅನುಕೂಲಕರವಾಗಿತ್ತು. ಈ ಜಾಗವನ್ನು ಬಾವುಟಗುಡ್ಡ ಎಂದೂ ಕರೆಯುತ್ತಿದ್ದರು.

ಸೈಯದ್ ಮಹಮ್ಮದ್ ಶರೀಫುಲ್ ಮದನಿ ದರ್ಗಾ ಉಳ್ಳಾಲ

ಈ ದರ್ಗವು ಸಂತ ಸೈಯದ್ ಮದನಿಯವರ ಹೆಸರನಲ್ಲಿ ಕಟ್ಟಲ್ಪಟ್ಟಿದೆ. ಈ ದರ್ಗಾವು ೪೦೦ವರ್ಷಗಳ ಇತಿಹಾಸವನ್ನು ಹೊಂದಿದ್ದು ವಿವಿಧ ಪಂಗಡಗಳ ಜನರು ಈ ದರ್ಗಾಕ್ಕೆ ಭೇಟಿ ನೀಡಿ ಊರುಸ್ ನಲ್ಲಿ ಭಾಗವಹಿಸುತ್ತಾರೆ.

ಪಿಲಿಕುಲ ನಿಸರ್ಗಧಾಮ

ದಂತ ಕಥೆಗಳ ಪ್ರಕಾರ ದ.ಕನ್ನಡದ ಒಂದು ಸ್ಥಳದಲ್ಲಿ ಹಿಂದಿನ ಕಾಲದಲ್ಲಿ ಹುಲಿಗಳು ಆಡುತ್ತಿದ್ದವು ಎಂಬುವುದನ್ನು ಹೇಳುತ್ತದೆ. ಈ ಜಾಗವನ್ನೇ ಇಂದು ಪಿಲಿಕುಲ ಎಂದು ಕರೆಯುತ್ತಾರೆ. ಪಿಲಿಕುಲ ಎಂದರೆ ಹುಲಿಗಳ ಕೊಳ ಎಂದು ತುಳುವಿನಲ್ಲಿ ಅರ್ಥೈಸುತ್ತದೆ. ಈ ಸ್ಥಳವು ಮಂಗಳೂರಿನಿಂದ ೧೨ ಕಿ.ಮೀ ದೂರದಲ್ಲಿರುವ ಮೂಡುಶೆಡ್ಡೆ ಎಂಬಲ್ಲಿದೆ. ಪ್ರಕೃತಿ ಪ್ರೇಮಿಗಳಿಗೆ ರಸದೌತಣವನ್ನು ನೀಡುವಂಥಹ ಮನಮೋಹಕ ತಾಣವಾಗಿ ಪಿಲಿಕುಲವು ದೇಶಿಗರು ಮತ್ತು ವಿದೇಶಿಗರನ್ನು ತನ್ನತ್ತ ಆಕರ್ಷಿಸುತ್ತಿದೆ. ೩೫೦ ಎಕರೆ ಜಾಗದಲ್ಲಿ ವಿಸ್ತಾರವಾಗಿ ಹಬ್ಬಿಕೊಂಡಿರುವಂಥ ಉದ್ಯಾನವನವು ಪ್ರವಾಸಿಗರನ್ನು ಕೈ ಬೀಸಿ ಕರೆಯುತ್ತಿದೆ. ವನ್ಯ ಜೀವಿ ಮೃಗಗಳು, ವಿವಿಧ ರೀತಿಯ ಸಸ್ಯ ಸಂಕುಲಗಳು, ಮನಮೋಹಕ ಪುಷ್ಪಗಳು, ಸದಾ ಕೇಳುತ್ತಿರುವ ಪಕ್ಷಿಗಳ ಕಲರವ ಮಕ್ಕಳಿಗೆ, ವೃದ್ಧರಿಗೆ ಮನಸ್ಸಿಗೆ ಮುದ ನೀಡುತ್ತಿವೆ. ದೋಣಿವಿಹಾರ, ಸಂಗೀತ ಕಾರಂಜಿಗಳು, ಚಿಣ್ಣರ ರೈಲುಬಂಡಿ, ರೆಸ್ಟೋರೆಂಟ್‌ಗಳು ಮತ್ತು ಮಾನಸ ನೀರಿನ ಪಾರ್ಕ್‌ಗಳು ಈ ಪಿಲಿಕುಲಕ್ಕೆ ವಿಶೇಷ ಮೆರುಗುನ್ನು ನೀಡಿವೆ.

ಕಾರಿಂಜೇಶ್ವರ ದೇವಸ್ಥಾನ ಬಂಟ್ವಾಳ

ಮಂಗಳೂರಿನಿಂದ ೩೨ಕಿ.ಮೀ ದೂರದಲ್ಲಿರುವ ಬಂಟ್ವಾಳ ತಾಲೂಕಿನಲ್ಲಿ ಶಿವ ಪಾರ್ವತಿಯರ ದೇವಸ್ಥಾನ ಅನೇಕ ಪ್ರವಾಸಿಗರ ಅಚ್ಚುಮೆಚ್ಚಿನ ತಾಣವಾಗಿದೆ. ಈ ದೇವಸ್ಥಾನವು ಪರ್ವತದ ನಡುವೆ ಕಟ್ಟಲ್ಪಟ್ಟಿದೆ. ಪರ್ವತದ ಮೇಲಿನಿಂದ ಈ ದೇವಸ್ಥಾನದ ನೋಟವು ರಮಣೀಯವಾಗಿದೆ. ಪ್ರತೀ ವರ್ಷ ಫೆಬ್ರವರಿ ಮಾರ್ಚ್ ತಿಂಗಳುಗಳಲ್ಲಿ ಇಲ್ಲಿ ಶಿವರಾತ್ರಿನ್ನು ಅತ್ಯಂತ ಸಂಭ್ರಮದಿಂದ ಆಚರಿಸುತ್ತಾರೆ. ಶಿವ ಪಾರ್ವತಿಯರ ಸಾನ್ನಿಧ್ಯ ಅಸಂಖ್ಯಾತ ಧಾರ್ಮಿಕ ಪ್ರವಾಸಿಗರನ್ನು ಕೈ ಬೀಸಿ ಕರೆಯುತ್ತಿದೆ.

ನರಹರಿ ಬೆಟ್ಟ ಬಂಟ್ವಾಳ

ಮಂಗಳೂರಿನಿಂದ ೨೫ಕಿ.ಮೀ. ದೂರದಲ್ಲಿರುವ ಶಿವ ದೇವಾಲಯವು ಬಂಟ್ವಾಳದಲ್ಲಿ ಬಹು ಪ್ರಸಿದ್ಧಿ ಪಡೆದಿದೆ. ಇಲ್ಲಿ ವಿಷ್ಣುವಿನ ಅವತಾರಗಳಾದ ನರ ಮತ್ತು ಹರಿಯರು ತಪಸ್ಸು ಮಾಡಿದರೆಂದು ಪ್ರತೀತಿ ಇದೆ. ಅತೀ ಎತ್ತರದಲ್ಲಿರುವ ಈ ದೇವಸ್ಥಾನವು ಇಲ್ಲಿಯ ಕೆರೆಗಳಿಗೆ ಹೆಸರುವಾಸಿಯಾಗಿದೆ. ಈ ಒಂದೊಂದು ಕೆರೆಗಳು ಶಂಬ, ಚಕ್ರ, ಗಧಾ ಪದ್ಮ ಆಕಾರದಲ್ಲಿ ನಿರ್ಮಿಸಲ್ಪಟ್ಟಿವೆ. ವಿಷ್ಣುವಿನ ಆಯುಧಗಳು ಕೆರೆಗೆ ಆಕಾರವನ್ನು ಕೊಟ್ಟಿವೆ. ಕಾರ್ಮಿಕ ಸೋಮವಾರದಂದು ಈ ಕೆರೆಗಳಲ್ಲಿ ಮೀಯುವುದು ಶ್ರೇಷ್ಠ ಎಂದು ಹಿಂದೂ ಪುರಾಣವು ಹೇಳುತ್ತದೆ. ಈ ಸಮಯದಲ್ಲಿ ಈ ಕ್ಷೇತ್ರವು ಅಸಂಖ್ಯಾತ ಪ್ರವಾಸಿಗರನ್ನು ಧಾರ್ಮಿಕ ಶ್ರದ್ಧೆಯಿರುವ ಭಕ್ತರನ್ನು ಆಕರ್ಷಿಸುತ್ತಿದೆ.

ಬಾಲವನ ಪುತ್ತೂರು

ಡಾ। ಶಿವರಾಮ ಕಾರಂತ ಬಾಲವನ ಪುತ್ತೂರು ತಾಲೂಕಿನ ವರ್ಲಡ್ಕದಲ್ಲಿದೆ. ಈ ಬಾಲವನವು ೬ಎಕರೆ ವಿಸ್ತೀರ್ಣವನ್ನು ಹೊಂದಿದೆ. ಈ ಉದ್ಯಾನವನವು ಹಸಿರಾಗಿದ್ದು ಅತ್ಯಂತ ಆಕರ್ಷಣೀಯ ಸ್ಥಳವಾಗಿದೆ. ಈ ಬಾಲವನವು ಡಾ.ಶಿವರಾಮ ಕಾರಂತರ ಕನಸಿನ ಕೂಸಾಗಿದೆ. ಕಾರಂತರಿಗೆ ಮಕ್ಕಳ ಮೇಲಿನ ಅತೀವ ಮಮಕಾರದಿಂದ ಅವರು ಈ ವನವನ್ನು ಬಾಲವನ ಎಂಬ ನಾಮಕರಣ ಮಾಡಿ ಮಕ್ಕಳಿಗೆ ಅವರಲ್ಲಿರುವ ಪ್ರೀತಿಯನ್ನು ತೋರ್ಪಡಿಸಿದರು. ಕಾರಂತರಿಗೆ ನಾಟಕ, ಸಾಹಿತ್ಯ, ನೃತ್ಯ ಕಲೆಗಳಲ್ಲಿ ಅಪಾರವಾದ ಆಸಕ್ತಿ ಅವರ ಕೊಡುಗೆ ಈ ಕ್ಷೇತ್ರಗಳಲ್ಲಿ ಅಪಾರವಾಗಿದೆ. ಪ್ರವಾಸಿಗರಿಗೆ ಇಲ್ಲಿ ಉತ್ತಮವಾದ ಈಜುಕೊಳ, ಮಕ್ಕಳ ಉದ್ಯಾನವನ, ಮಕ್ಕಳ ವಾಚನಾಲಯ, ಸ್ವಯಂ ಚಾಲಿತ ಆಟಿಕೆಗಳು, ಶಿವರಾಮ ಕಾರಂತರ ಅಮೂಲ್ಯ ಪುಸ್ತಕ ಸಂಗ್ರಹಗಳು, ಕಾರಂತರ ಮತ್ತು ಸಂಗ್ರಹಾಲಯ, ಮುಕ್ತ ಸಭಾ ಭವನದ ಸೌಲಭ್ಯಗಳು ಸಿಗುತ್ತದೆ.

ಧರ್ಮಸ್ಥಳ ಮಂಜುನಾಥ ಕ್ಷೇತ್ರ ಬೆಳ್ತಂಗಡಿ

ಈ ದೇವಸ್ಥಾನವು ಅತ್ಯಂತ ಪ್ರಸ್ತಿದ್ಧವಾದ ಧಾರ್ಮಿಕ ಪ್ರವಾಸೀ ಕೇಂದ್ರವಾಗಿದ್ದು ಕರ್ನಾಟಕದ ಹೆಮ್ಮೆಯ ಪ್ರತೀಕವಾಗಿದೆ. ಈ ದೇವಸ್ಥಾನವು ಜೈನ ಧರ್ಮದ ಹೆಗ್ಗಡೆಯವರಿಂದ ನಡೆಸಲ್ಪಡುತ್ತಿದೆ. ಈ ಕ್ಷೇತ್ರದಲ್ಲಿ ಉಚಿತ ಅನ್ನದಾನ ಸೇವೆ ಕ್ಷೇತ್ರದಿಂದ ನಡೆಸಲ್ಪಡುತ್ತಿದೆ. ಇಲ್ಲಿಯ ಇತರ ಪ್ರವಾಸೀ ಆಕರ್ಷಣೆ ಎಂದರೆ ಮಂಜೂಷ ಸಂಗ್ರಹಾಲಯ ಈ ವಸ್ತು ಸಂಗ್ರಹಾಲಯವು

ಅತೀ ಪುರಾತನ, ಅಪರೂಪದ ಸಂಗ್ರಹವಿರುವ ಸಂಗ್ರಹಾಲಯವಾಗಿದೆ. ವರ್ಷಂಪ್ರತಿ ಲಕ್ಷ ದೀಪೋತ್ಸವವೂ ಅತ್ಯಂತ ಸಂಭ್ರಮ ಸಡಗರದಿಂದ ಆಚರಿಸಲ್ಪಡುತ್ತದೆ.

ಶ್ರೀ ಕ್ಷೇತ್ರ ಕುಕ್ಕೆ ಸುಬ್ರಮಣ್ಯ ದೇವಸ್ಥಾನ, ಸುಬ್ರಮಣ್ಯ

ಪ್ರಕೃತಿಯ ಹಸಿರುವನ ಸಿರಿಯ ನಡುವೆ ಕುಮಾರಧಾರ ನದಿ ತಟದ ಮೇಲೆ ಶ್ರೀ ಕ್ಷೇತ್ರ ಸುಬ್ರಮಣ್ಯವು ಅಸಂಖ್ಯಾತ ಪ್ರವಾಸಿಗರನ್ನು ತನ್ನೆಡೆಗೆ ಸೆಳೆದುಕೊಂಡಿದೆ. ಈ ಕ್ಷೇತ್ರವು ಬಹು ಪ್ರಸಿದ್ಧವಾದ ಪ್ರತಿಷ್ಠೆಯ ಕ್ಷೇತ್ರವಾಗಿದೆ. ಈ ಕ್ಷೇತ್ರವು ಮಂಗಳೂರಿನಿಂದ ೧೦೪ ಕಿ.ಮೀ ಮತ್ತು ಸುಳ್ಯದಿಂದ ೪೦ಕಿ.ಮೀ ದೂರದಲ್ಲಿದೆ. ಸುಬ್ರಮಣ್ಯವನ್ನು ಬಸ್, ಟ್ಯಾಕ್ಸಿಗಳ ಮೂಲಕ ಸುಲಭವಾಗಿ ತಲುಪಬಹುದು. ಕುಮಾರ ಪರ್ವತದ ತಪ್ಪಲಿನಲ್ಲಿ ಈ ಕ್ಷೇತ್ರವು ರಮಣೀಯವಾಗಿ ತಲೆ ಎತ್ತಿದೆ. ಶ್ರೀ ಸುಬ್ರಮಣ್ಯ ದೇವರು ಇಲ್ಲಿನ ಪ್ರಧಾನ ದೇವರಾಗಿ ಪೂಜಿಸಲ್ಪಡುತ್ತಿದ್ದಾರೆ. ಈ ದೇವಸ್ಥಾನದಿಂದ ಕೇವಲ ಒಂದು ಫರ್ಲಾಂಗು ದೂರದಲ್ಲಿ ಆದಿ ಸುಬ್ರಮಣ್ಯನ ದೇವಸ್ಥಾನವಿದೆ. ಈ ಕುಮಾರಧಾರದಲ್ಲಿ ಸ್ನಾನ ಮಾಡಿದರೆ ಎಲ್ಲಾ ತರಹದ ಚರ್ಮ ರೋಗಗಳಿಂದ ಮುಕ್ತಿ ಹೊಂದಬಹುದೆಂಬ ಪ್ರತೀತಿ ಇದೆ.

ಕುಮಾರ ಪರ್ವತ ಸುಳ್ಯ

ಈ ಕುಮಾರ ಪರ್ವತವು ಅಸಂಖ್ಯಾತ ಚಾರವಾಗಿರದ ಆಯ್ಕೆಯ ತಾಣವಾಗಿದೆ. ಹತ್ತಿರದ ಸ್ಥಳದಿಂದ ಯುವಕರು, ವಿದ್ಯಾರ್ಥಿಗಳು, ಸಂಘಸಂಸ್ಥೆಗಳವರು ಈ ತಾಣಕ್ಕೆ ಚಾರಣಿಗರಾಗಿ ಬರುತ್ತಿದ್ದಾರೆ. ಈ ಸ್ಥಳವನ್ನು 'ಚಾರಣಿಗರ ಸ್ವರ್ಗ' ಎಂದೇ ಕರೆಯಲಾಗುತ್ತಿದೆ. ಈ ಪರ್ವತವು ಸಮುದ್ರ ಮಟ್ಟದಿಂದ ೪೦೦೦ ಫೀಟ್ ಎತ್ತರದಲ್ಲಿದೆ. ಈ ಪರ್ವತದ ಚಾರಣಕ್ಕೆ ಫೆಬ್ರವರಿಯಿಂದ ಮೇ ತಿಂಗಳು ಉತ್ತಮ ಸಮಯವಾಗಿದೆ. ಈ ಪರ್ವತದಲ್ಲಿ ಭಟ್ಟ ರಾಶಿ, ಸಿದ್ಧ ಮತ್ತು ಶೇಷ ಎನ್ನುವ ೩ ಪರ್ವತಗಳಿವೆ.

ಕುದುರೆಮುಖ ಬೆಳ್ತಂಗಡಿ

ಕುದುರೆಮುಖವು ಸಮುದ್ರ ಮಟ್ಟದಿಂದ ೬,೨೧೪ಕಿ.ಮೀ. ಎತ್ತರದಲ್ಲಿದೆ. ಈ ವೇಗವು ಕೂಡಾ ಚಾರಣಿಗರ ಆಯ್ಕೆಯ ತಾಣಾವಾಗಿದೆ. ಕರ್ನಾಟಕದ ಅತ್ಯಂತ ಸುಂದರವಾದ ಮಲೆನಾಡು ಪ್ರದೇಶದಲ್ಲಿ ಕುದುರೆಮುಖವಿದೆ. ಈ ಕುದುರೆಮುಖವು ಅಸಂಖ್ಯಾತ ಪುಷ್ಪ ಮತ್ತು ಅಮೂಲ್ಯವಾದ ಮರಗಳನ್ನು ಹೊಂದಿದೆ. ಕುದುರೆಮುಖ ಕಬ್ಬಿಣ ಅದಿರು ಕಂಪೆನಿಯು

ಕುದುರೆಮುಖದಲ್ಲಿ ಅನೇಕ ನಗರಗಳನ್ನು ಅಭಿವೃದ್ಧಿಗೊಳಿಸಿದೆ. ಕುದುರೆಮುಖದ ಇತರ ಪ್ರವಾಸೀ ಕೇಂದ್ರಗಳಲ್ಲಿ ಕುದುರೆಮುಖ ರಾಷ್ಟ್ರೀಯ ಉದ್ಯಾನವನ, ಭಗವತಿ ಪ್ರಕೃತಿ ಶಿಬಿರ, ಹನುಮಾನ್ ಗುಂಡಿ ಜಲಪಾತ, ಗಂಗಮೂಲ ಮತ್ತು ಅತ್ಯಂತ ರಮಣೀಯವಾದ ಲಕ್ಯಾ ಡ್ಯಾಂ ಸೇರಿದೆ.

ಮಂಗಳಾದೇವಿ ದೇವಸ್ಥಾನ

ಮಂಗಳೂರಿನಲ್ಲಿರುವ ಮಂಗಳಾದೇವಿ ದೇವಸ್ಥಾನವು ಅಸಂಖ್ಯಾತ ಭಕ್ತ ಜನರನ್ನು ಆಕರ್ಷಿಸುತ್ತಿರುವ ಧಾರ್ಮಿಕ ಪ್ರವಾಸೀ ಕೇಂದ್ರವಾಗಿದೆ. ತಾಯಿ ದೇವಿಯು ಇಲ್ಲಿ ಪ್ರಧಾನ ದೇವತೆಯಾಗಿ ಪೂಜಿಸಲ್ಪಡುತ್ತಿದ್ದಾಳೆ. ನವರಾತ್ರಿಯ ಒಂಭತ್ತು ದಿನಗಳಲ್ಲಿ ವಿಶೇಷ ಸಂಭ್ರಮದಿಂದ ಪೂಜೆ, ಉತ್ಸವಾದಿಗಳು ನಡೆಯುತ್ತವೆ. ಸ್ವಯಂವರ ಪಾರ್ವತಿ ಪೂಜೆಯು ಈ ಸ್ಥಳದ ವಿಶೇಷ ಪೂಜೆಯಾಗಿದೆ.

ಕದ್ರಿ ಮಂಜುನಾಥೇಶ್ವರ ದೇವಸ್ಥಾನ

ಕ್ರಿ.ಶ೧೦೬೮ರಲ್ಲಿ ನಿರ್ಮಿಸಲ್ಪಟ್ಟ ಕದ್ರಿ ಮಂಜುನಾಥ ದೇವಸ್ಥಾನವು ಅತ್ಯಂತ ಪ್ರಾಚೀನ ದೇವಸ್ಥಾನವೆಂದು ಹೆಸರುವಾಸಿಯಾಗಿದೆ. ಪರಶುರಾಮ ಚರಿತ್ರೆಯಲ್ಲಿ ಈ ದೇವಸ್ಥಾನದ ಉಲ್ಲೇಖವಿದೆ. ಇಲ್ಲಿ ಪಾಂಡವರ ಗುಹೆ, ಸೀತಾಬಾವಿ ಪ್ರವಾಸಿಗರನ್ನು ಆಕರ್ಷಿಸಿದೆ. ಯಾವತ್ತು ಗೋಮುಖದ ಬಾಯಿಯಲ್ಲಿ ಹರಿಯುತ್ತಿರುವ ನೀರು ಈ ಕ್ಷೇತ್ರದ ವೈಶಿಷ್ಯವಾಗಿದೆ. ವರ್ಷಾವಧಿ ಉತ್ಸವಗಳು ಬಹು ವಿಜೃಂಭಣೆಯಿಂದ ಜರಗುತ್ತದೆ.

ಗೋಕರ್ಣನಾಥ ದೇವಸ್ಥಾನ ಕುದ್ರೋಳಿ

ಕುದ್ರೋಳಿ ಗೋಕರ್ಣನಾಥ ದೇವಸ್ಥಾನವು ಬಿಲ್ಲವ ಸಮಾಜದ ಗುರುಗಳಾಗಿರುವ ಶ್ರೀ ನಾರಾಯಣ ಗುರುಗಳಿಂದ ೧೯೧೨ರಲ್ಲಿ ಪ್ರತಿಷ್ಠಾಪಿಸಲ್ಪಟ್ಟಿತು. ೧೯೯೧ರಲ್ಲಿ ಈ ದೇವಸ್ಥಾನವನ್ನು ನವೀಕರಿಸಲಾಯಿತು. ಕುದ್ರೋಳಿಯ ದಸರಾ ಉತ್ಸವವು ಮಂಗಳೂರು ದಸರಾ ಎಂದೇ ಪ್ರಸಿದ್ಧವಾಗಿದೆ. ಮೈಸೂರು ದಸರಾವನ್ನು ಕೂಡಾ ಮೀರಿಸುವಂಥಹ ಶೋಭಾಯಮಾನವಾದ ಮೆರವಣಿಗೆಯು ಈ ಕ್ಷೇತ್ರದ ವೈಶಿಷ್ಟ್ಯವಾಗಿದೆ.

ಅಧ್ಯಾಯ – ೩

ಆರ್ಥಿಕ ಅಭಿವೃದ್ಧಿಯಲ್ಲಿ ಪ್ರವಾಸೋದ್ಯಮ ಮತ್ತು ಕಿರು ಉದ್ಯಮಗಳ ಪಾತ್ರ

ಅಧ್ಯಾಯ – ೩

ಆರ್ಥಿಕ ಅಭಿವೃದ್ಧಿಯಲ್ಲಿ ಪ್ರವಾಸೋದ್ಯಮ ಮತ್ತು ಕಿರು ಉದ್ಯಮಗಳ ಪಾತ್ರ

೩.೧. ಪೀಠಿಕೆ

ಪ್ರವಾಸೋದ್ಯಮವು ಕಿರು ಉದ್ಯಮಗಳ ಮುಖಾಂತರ ಉದ್ಯೋಗ ಸೃಷ್ಟಿಗೆ ಅವಕಾಶ ನೀಡಿ ಆರ್ಥಿಕ ಅಭಿವೃದ್ಧಿಯಲ್ಲಿ ಮಹತ್ತರ ಪಾತ್ರ ವಹಿಸುತ್ತದೆ.ಪ್ರವಾಸೋದ್ಯಮ ವಾಣೀಜ್ಯಾತ್ಮಕ ಸಂಸ್ಥೆಗಳಾಗಿದ್ದು, ಪ್ರವಾಸಿಗರಿಗೆ ಸೇವಾ ಸೌಲಭ್ಯಗಳನ್ನು ಒದಗಿಸುತ್ತಿವೆ. ಇವುಗಳಲ್ಲಿ ವಸತಿ ಘಟಕಗಳಾದ ಹೋಟೇಲ್‌ಗಳು, ರೆಸಾರ್ಟ್‌ಗಳು, ಡಾರ್ಮೆಟ್ರಿಗಳು ಚಾಲ್ಟ್ರಿಸ್, ರಸ್ತೆಯ ಬದಿಯ ಸೌಲಭ್ಯಗಳಾದ ದೂರ ಸಂಪರ್ಕ, ಮಂಟಪ, ಶೌಚಾಲಯ, ವಿಶ್ರಾಂತಿ ತಾಣಗಳು ಹಾಗೂ ವಾಹನ ನಿಲುಗಡೆ ಇತ್ಯಾದಿ ಒಳಗೊಂಡಿದೆ. ಜತೆಗೆ ಟೂರಿಸಂ, ರೆಸಾರ್ಟ್ ವಿನೋದದ ವಿದ್ಯಾನಗಳು ಮತ್ತು ಸಾಹಸ ಕ್ರೀಡೆಗಳು, ಸರೋವರ ದೋಣಿಗಳು, ಹೌಸ್ ಬೋಟ್ ಹಾಗೂ ಟೂರಿಸ್ಟ್ ವಿಲೇಜ್ ಇತ್ಯಾದಿ ಘಟಕಗಳ ಮೂಲಕ ಬರುವ ಪ್ರವಾಸಿಗರಿಗೆ ಸೇವಾ ಸೌಲಭ್ಯಗಳನ್ನು ಒದಗಿಸುವುದು ಸೇರಿದೆ.

ಪ್ರವಾಸೋದ್ಯಮ ಎಂದ ಕೂಡಲೇ ಶ್ರೀಮಂತ ಪ್ರವಾಸಿಗರು ಮತ್ತು ಅವರ ಅಗತ್ಯಗಳನ್ನು ಗಮನದಲ್ಲಿಟ್ಟುಕೊಂಡು ಈ ವಲಯವನ್ನು ಬಂಡವಾಳ ವಿನಿಯೋಜನೆಯ ನೆಲೆಯಲ್ಲಿ ವಿಂಗಸಬಹುದು. ಶ್ರೀಮಂತ ಪ್ರವಾಸಿಗರನ್ನು ಗಮನದಲ್ಲಿಟ್ಟುಕೊಂಡು ಬೃಹತ್ ಪ್ರಮಾಣದ ಬಂಡವಾಳ ತೊಡಗಿಸಿ ಐಷಾರಾಮಿ ಹೋಟೇಲ್ ಮತ್ತು ರೆಸ್ಟೋರೆಂಟ್‌ಗಳು ನಿರ್ಮಿತವಾಗುತ್ತಿವೆ. ಈ ಮೂಲಕ ಪ್ರವಾಸಿಗರನ್ನು ಆಕರ್ಷಿಸಿ ಆದಾಯ ಉದ್ಯೋಗಗಳನ್ನು ವೃದ್ಧಿಸಬಹುದೆಂಬ ಗ್ರಹತವಿದೆ. ಈ ಸಾಂಸ್ಥಿಕ ವ್ಯವಸ್ಥೆಯು ಶ್ರೀಮಂತ ಪ್ರವಾಸಿಗರಿಗೆ ಹೆಚ್ಚಿನ ಉಪಯೋಗ ಆಗಬಹುದು. ಶ್ರೀಮಂತ ಪ್ರವಾಸಿಗರು ಸಂಘಟಕ ಸಾಂಸ್ಥಿಕ ಪ್ರವಾಸೋದ್ಯಮ ಘಟಕಗಳ ಮೂಲಕ ಬರುವುದು ಅಥವಾ ಪ್ಯಾಕೇಜ್ ಟೂರಿಸ್ಟ್‌ಗಳಾಗಿರುವುದು ಇದೆ. ಈ ಮಾದರಿಯ ಪ್ರವಾಸಿಗರು ಪ್ರವಾಸೋದ್ಯಮ ನೀತಿಯ ಅನುಗುಣವಾಗಿ ನಿರ್ಮಿಸಿದ ಔಪಚಾರಿಕ ಸಂಘಟಿತ ವಲಯದ ಸ್ಟಾರ್ ಹೋಟೇಲ್ ಮತ್ತು ಐಷಾರಾಮಿ ರೆಸ್ಟೋರೆಂಟ್, ಅತಿಥಿ ಗೃಹ ಮತ್ತು ರೆಸಾರ್ಟ್ ಇತ್ಯಾದಿ ಘಟಕಗಳಲ್ಲಿನ ಸೇವಾ ಸೌಲಭ್ಯ ಇಚ್ಛಿಸುತ್ತಾರೆ. ಇವರ ಅಭಿರುಚಿಗಳು ಸಹ ಆಧುನಿಕ ಸೇವಾ ಸೌಲಭ್ಯಗಳನ್ನು ಬಯಸುವಂತಾಗಿರುವುದರಿಂದ ಇವರಿಗೆ ಕ್ಲಾಸ್ ಟೂರಿಸ್ಟ್ ಎನ್ನುವುದಿದೆ. ಸರ್ಕಾರದ ಪ್ರವಾಸೋದ್ಯಮ ನೀತಿಗಳು ಕೂಡಾ ಹೆಚ್ಚು ಬಂಡವಾಳ ಹೂಡಿಕೆಗೆ ಪೂರಕವಾಗುವ ಉದ್ಯಮಗಳಿಗೆ ಮಹತ್ವ ಕೊಡುವಂತಿವೆ. ಇಲ್ಲಿ ಹೆಚ್ಚು ಹೆಚ್ಚು ಬಂಡವಾಳ

ಹೂಡಲು ಶಕ್ತಿ ಇರುವವರು ಮಾತ್ರ ಪ್ರವಾಸೋದ್ಯಮದಲ್ಲಿ ತೊಡಗಿಸಿಕೊಳ್ಳಬಹುದು. ಇದು ಸಂಪತ್ತಿನ ಅಸಮಾನ ಹಂಚಿಕೆಗೆ ದಾರಿ ಮಾಡಿ ಕೊಡುತ್ತದೆ. ಈ ಕ್ರಮದ ಪ್ರವಾಸೋದ್ಯಮದ ಬೆಳವಣಿಗೆಯು ಉಳ್ಳವರ ಸಂಪತ್ತನ್ನು ಇನ್ನೂ ಹೆಚ್ಚಿಸಲು ನೆರವಾಗಬಹುದು.

ಪ್ರವಾಸೋದ್ಯಮವು ಈ ಸಾಂಸ್ಥಿಕ ರೂಪವನ್ನು ಪಡೆಯುವ ಮೊದಲಿನ ಹಂತವನ್ನು ಅನಧಿಕೃತ ಅಥವಾ ಅನೌಪಚಾರಿಕ ವಲಯವೆಂದು ಕರೆಯಲ್ಪಡುತ್ತದೆ. ಅನಧಿಕೃತ ವಲಯ ಮುಖ್ಯವಾಗಿ ಮಧ್ಯಮ ಮತ್ತು ಶ್ರಮಿಕ ವರ್ಗದ ಪ್ರವಾಸಿಗರನ್ನು ಗಮನದಲ್ಲಿಟ್ಟುಕೊಂಡು ಬೆಳೆಯುತ್ತದೆ. ಇವರು ಪ್ಯಾಕೆಜ್ ಟೂರಿಸ್ಟ್ ಆಗಿದೆ. ನಿರ್ದಿಷ್ಟ ಗೊತ್ತುಗುರಿ ಇಲ್ಲದ ಪ್ರವಾಸಿಗರು ಎಲ್ಲಿಗೆ ಮತ್ತು ಹೇಗೆ ಹೋಗುವುದು, ಎಲ್ಲಿ ತಂಗುವುದು, ಎಷ್ಟು ತಂಗುವುದು, ಎಷ್ಟು ದಿನಗಳು ಉಳಿಯುವುದು ಇತ್ಯಾದಿಗಳು ಮುಂಚಿತವಾಗಿ ನಿರ್ಧಾರವಾಗಿರದೆ ಸಮಯಕ್ಕೆ ತಕ್ಕಂತೆ ನಿರ್ಧಾರಗಳನ್ನು ತೆಗೆದುಕೊಳ್ಳುವವರಾಗಿರುತ್ತಾರೆ. ಇಂತಹ ಪ್ರವಾಸಿಗರನ್ನು ಡ್ರಿಫರ್ಸ್ ಮತ್ತು ಎಕ್ಸ್‌ಪ್ಲೋರರ್ಸ್ ಎಂದು ಕರೆಯಲಾಗುತ್ತಿದೆ. ಇವರುಗಳು ಕಡಿಮೆ ಆದಾಯ ಹೊಂದಿದ್ದು ಆಧುನಿಕ ಸೇವಾ ಸೌಲಭ್ಯಗಳನ್ನು ಪಡೆದು ಐಷಾರಮಿ ಜೀವನ ನಡೆಸಲು ಅಶಕ್ತರಾಗಿರುವುದರಿಂದ ಸಾಮಾನ್ಯ ಸೇವಾ ಸೌಲಭ್ಯಗಳನ್ನು ಹೊಂದುವ ಅಭಿರುಚಿಯನ್ನು ಹೊಂದಿರುತ್ತಾರೆ. ಕಡಿಮೆ ಆದಾಯವಿರುವ ಈ ಮಾದರಿಯ ಪ್ರವಾಸಿಗರು ಆಧುನಿಕ ಸೇವಾ ಸೌಲಭ್ಯಗಳನ್ನು ಕೊಡುವ ಹೋಟೇಲ್, ರೆಸ್ಟೋರೆಂಟ್, ಅತಿಥಿಗೃಹ ಇತ್ಯಾದಿಗಳಿಗೆ ಹೋಗದೆ, ಕಡಿಮೆ ದರದಲ್ಲಿ ದೊರಕುವ ಸೇವಾ ಸೌಲಭ್ಯಗಳನ್ನು ಬಯಸುತ್ತಾರೆ. ಈ ಪ್ರವಾಸಿಗರನ್ನು ಗಮನದಲ್ಲಿಟ್ಟುಕೊಂಡು ಪ್ರವಾಸೋದ್ಯಮದ ನೀತಿ ನಿಯಮಗಳು ರೂಪಿತವಾಗುತ್ತಿಲ್ಲ. ಹಾಗೂ ಇವರಿಗೆ ಬೇಕಾಗುವ ಸೇವಾ ಸೌಲಭ್ಯಗಳನ್ನು ಪ್ರವಾಸೋದ್ಯಮದ ಔಪಚಾರಿಕ ಸಂಘಟಿತ ವಲಯಗಳು ಕಡಿಮೆ ದರದಲ್ಲಿ ಈ ಪ್ರವಾಸಿಗರಿಗೆ ನೀಡಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಮಧ್ಯಮ ಮತ್ತು ಶ್ರಮಿಕ ವರ್ಗದ ಪ್ರವಾಸಿಗರ ಅಭಿರುಚಿ ಮತ್ತು ಆದಾಯಕ್ಕೆ ತಕ್ಕಂತೆ ಸೇವಾ ಸೌಕರ್ಯಗಳನ್ನೇ ಒದಗಿಸಲು ಅನೌಪಚಾರಿಕ ಅಸಂಘಟಿತ ವಲಯಗಳು ಪ್ರವಾಸೋದ್ಯಮದಲ್ಲಿ ಸ್ಥಾಪಿತಗೊಂಡಿದೆ.

ಅನೌಪಚಾರಿಕ ಅಸಂಘಟಿತ ವಲಯವು ಕಡಿಮೆ ಬಂಡವಾಳ ಹೊಂದಿರುವವರು ಸ್ಥಾಪಿಸಲು ಸಾಧ್ಯವಾಗುವುದರಿಂದ ಎಲ್ಲಾ ವರ್ಗಗಳು ಪ್ರವಾಸೋದ್ಯಮದ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ತಮ್ಮ ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳನ್ನು ಸುಧಾರಿಸಿಕೊಳ್ಳಬಹುದಾಗಿದೆ. ಈ ಅನೌಪಚಾರಿಕ ಅಸಂಘಟಿತ ವಲಯವು ಹೆಚ್ಚು ಉದ್ಯೋಗಗಳನ್ನು ಸೃಷ್ಟಿಸಿ, ಶ್ರಮ ಆಧಾರಿತ

ವಲಯವಾಗುತ್ತಿದೆ. ಇದು ಪ್ರವಾಸೋದ್ಯಮದ ಮೂಲ ಉದ್ದೇಶಕ್ಕೆ ಪೂರಕವಾಗಿದೆ. ಒಂದನೇಯದಾಗಿ, ಪ್ರವಾಸೋದ್ಯಮವು ಹೆಚ್ಚು ಹೆಚ್ಚು ಬಂಡವಾಳ ಹೂಡುವುದು ಯಾವುದೇ ವಲಯದ ಬೆಳವಣಿಗೆಗೆ ಅಗತ್ಯ ಎನ್ನುವ ಸಾಂಪ್ರದಾಯಿಕ ಅಭಿವೃದ್ಧಿ ಸಿದ್ಧಾಂತಗಳ ಗ್ರಹಿಕೆಗೆ ಪೂರಕವಾಗಿ ಬೆಳೆಯುತ್ತಿರುವುದು, ಈ ನೀತಿ ಪ್ರಕಾರ ಪ್ರವಾಸೋದ್ಯಮದ ಬೆಳವಣಿಗೆಯೆಂದರೆ ಹೆಚ್ಚಿನ ಬಂಡವಾಳ ಹೂಡಿ ಸ್ಟಾರ್ ಹೋಟೇಲ್ ಮತ್ತು ರೆಸಾರ್ಟ್‌ಗಳನ್ನು ನಿರ್ಮಿಸುವುದು ಎಂದಾಗಿದೆ. ಇದು ಪ್ರವಾಸಿಗರಲ್ಲಿ ಶ್ರೀಮಂತರು ಮತ್ತು ಅವರ ಬೇಡಿಕೆಗಳು ಕೂಡಾ ಅಷ್ಟೇ ಶ್ರೀಮಂತವಾಗಿರುತ್ತವೆ ಎನ್ನುವ ಗೃಹಿಕೆಯಿಂದ ರೂಪುಗೊಂಡಿದೆ. ಎರಡನೇದಾಗಿ, ಕಡಿಮೆ ಬಂಡವಾಳ ಹೂಡಿ ಆದರೆ ಹೆಚ್ಚು ಮಾನವ ಶ್ರಮ ಬಳಸಿ ವೃದ್ಧಿಗೊಳಿಸಬಹುದಾದ ಪ್ರವಾಸೋದ್ಯಮ. ಇದು ಎರಡು ಕಡೆ ಪ್ರವಾಸಿಗರ ದೃಷ್ಟಿಯಿಂದ ಮತ್ತು ಅವರಿಗೆ ಸೇವಾ ಸೌಲಭ್ಯಗಳನ್ನು ಒದಗಿಸುವ ಉದ್ಯಮಿಗಳ ದೃಷ್ಟಿಯಿಂದ ಸಮಾಜದ ಕೆಳವರ್ಗಗಳನ್ನು ಗಮನದಲ್ಲಿಟ್ಟುಕೊಂಡು ನಡೆಯುವ ಪ್ರಕ್ರಿಯೆಯಾಗಿದೆ. ಇದನ್ನೇ ಅಸಂಘಟಿತ ಅಥವಾ ಅನಧಿಕೃತ ವಲಯ ಎಂದು ಕರೆಯುತ್ತಾರೆ.

೩.೨ ಅಭಿವೃದ್ಧಿಯ ಪರಿಕಲ್ಪನೆ

ಆರ್ಥಿಕಾಭಿವೃದ್ಧಿಯು ಒಂದು ದೇಶದ ಸಂಪನ್ಮೂಲ ಮತ್ತು ಸಂಪನ್ಮೂಲಗಳ ಬಳಕೆಯನ್ನು ಅವಲಂಬಿಸಿದೆ. ಸಂಪನ್ಮೂಲಗಳ ಅಡಕ ಪ್ರಾಕೃತಿಕವಾಗಿದ್ದರೆ, ಅದರ ಬಳಕೆ ಮಾನವನು ವಿವಿಧ ತಂತ್ರಗಾರಿಕೆಯನ್ನು ಬಳಸಿ ಉಪಯೋಗಿಸುವುದು ಆಗಿರುತ್ತದೆ. ಇದು ಕಾಲ ಕಾಲಕ್ಕೆ ಹಾಗೂ ದೇಶ ದೇಶಗಳಲ್ಲಿ ಬದಲಾಗುತಿರುತ್ತದೆ.

ಒಂದು ಪ್ರದೇಶ ಅಭಿವೃದ್ಧಿಯಾಗುವುದೆಂದರೆ ಅಲ್ಲಿ ರಚನಾತ್ಮಕ ಪರಿವರ್ತನೆ ವೈಜ್ಞಾನಿಕ ಮುನ್ನಡೆ, ತಂತ್ರಜ್ಞಾನದ ಬಳಕೆ, ಆರ್ಥಿಕತೆಯಲ್ಲಿ ಸುಧಾರಣೆಗಳಾಗಬೇಕು. ಅಭಿವೃದ್ಧಿ ಎಂಬುದು ನಿರಂತರವಾದ ಚಲನಶೀಲ ಪ್ರಕ್ರಿಯೆಯಾಗಿದೆ. ಪ್ರತಿಯೊಂದು ದೇಶವೂ ಅಭಿವೃದ್ಧಿಗಾಗಿ ತೆಗೆದುಕೊಳ್ಳುವ ಅಗತ್ಯತೆ ಕಂಡು ಬರುತ್ತದೆ. ಅಭಿವೃದ್ಧಿಯಲ್ಲಿ ಬೆಳವಣಿಗೆ ಎಂದು ಭಾವಿಸಿದಾಗ ಅದು ಹೊಸ ಸಂಶೋಧನೆಗಳ ಜೊತೆಗೂಡಿ ಮುಂದೆ ಸಾಗುತ್ತದೆ.

ಅಭಿವೃದ್ಧಿಗೆ ವಿವಿಧ ಆಯಾಮಗಳಿವೆ ಮನುಷ್ಯ ಜೀವನವನ್ನು ಸುಧಾರಿಸುವುದಲ್ಲದೆ ಅದು ಧೀರ್ಘವಾದ ಪ್ರಕ್ರಿಯೆಯಾಗಿರುತ್ತದೆ. ಯಾವುದೇ ಆರ್ಥಿಕತೆಯು ಅಲ್ಪಕಾಲದಲ್ಲಿ ಅಭಿವೃದ್ಧಿ ಹೊಂದಲು ಸಾಧ್ಯವಿಲ್ಲ. ಅಭಿವೃದ್ಧಿಯಿಂದ ಮುಂದಿನ ಪೀಳಿಗೆಯು ವಿಕಾಸ ಹೊಂದಲು ಸಾಧ್ಯ.

ಅಭಿವೃದ್ಧಿಯನ್ನು ವಿಶ್ಲೇಷಿಸುವುದು ಸುಲಭವಲ್ಲ. ಅದು ವ್ಯಕ್ತಿ ನಿಷ್ಠ ದೃಷ್ಠಿ ಕೋನಗಳನ್ನು ಒಳಗೊಂಡಿರುತ್ತದೆ. ಅಭಿವೃದ್ಧಿಯನ್ನು ಖಚಿತವಾಗಿ ಅಥವಾ ನಿಖರವಾಗಿ ಅಳೆಯುವುದೂ ಕಷ್ಟಕರವಾಗಿದೆ. ಇದರಿಂದಾಗಿ ಅರ್ಥಶಾಸ್ತ್ರಜ್ಞರು ಅಭಿವೃದ್ಧಿಯ ಸರಿಯಾದ ಮಾಪನ ಅಸಾಧ್ಯವೆಂದು ಭಾವಿಸುತ್ತಾರೆ.

ಆದರೆ ಸಂಶೋಧನಾ ದೃಷ್ಠಿಯಿಂದ ಅಭಿವೃದ್ಧಿಯನ್ನು ವ್ಯಾಖ್ಯಾನಿಸುವುದು ಅಗತ್ಯ "ಓಕನ್ ಮತ್ತು ರಿಚರ್ಡ್ಸನ್" ಎಂಬ ತಜ್ಞರು ಆರ್ಥಿಕ ಅಭಿವೃದ್ಧಿಯ ಅಧ್ಯಯನಗಳು ಎಂಬ ಕೃತಿಯಲ್ಲಿ "ಆರ್ಥಿಕ ಅಭಿವೃದ್ಧಿಯ ಸರಕು ಮತ್ತು ಸೇವೆಗಳ ಮೊತ್ತವನ್ನು ಪ್ರತಿಬಿಂಬಿಸುವ ಕಲ್ಯಾಣದ ದೀರ್ಘಕಾಲಿಕ ಸುಧಾರಣೆಯಾಗಿದೆ.[೧]" ಎಂದಿರುತ್ತಾರೆ. ಇದನ್ನು ಗಮನಿಸಿದಾಗ ಅಭಿವೃದ್ಧಿ ಎನ್ನುವುದು ರಾಷ್ಟ್ರೀಯ ಆದಾಯದ ನೆಲೆಯಿಂದ ರೂಪುಗೊಂಡಿದೆ. ಎಂದು ವ್ಯಾಖ್ಯಾನಿಸಬಹುದು. "ಆರ್ಥಿಕ ಅಭಿವೃದ್ಧಿಯ ಭೌತಿಕ ಅಗತ್ಯಗಳನ್ನು ಮಾತ್ರವಲ್ಲದೆ ಮನುಷ್ಯನ ಸಾಮಾಜಿಕ ಜೀವನವನ್ನು ಒಳಗೊಂಡಿರುತ್ತದೆ. ಅಭಿವೃದ್ಧಿ ಎಂದರೆ ಆರ್ಥಿಕ ಬೆಳವಣಿಗೆ ಮಾತ್ರವಲ್ಲ ಜೊತೆಗೆ ಸಾಮಾಜಿಕ ಮತ್ತು ಸಾಂಸ್ಕೃತಿಕ ಬದಲಾವಣೆಗಳನ್ನು ಒಳಗೊಂಡಿರುತ್ತದೆ[೨]."

ಅಭಿವೃದ್ಧಿ ಅಧ್ಯಯನದ ಪರಿಣಿತ ಮೈಖೇಲ್ ಟೊಡೇರೊ ರವರ ಅಭಿಪ್ರಾಯಗಳು ಅಧ್ಯಯನಕ್ಕೆ ಪೂರಕವಾಗುವ ಚಿಂತನೆಗಳಾಗಿವೆ. ಅವರು "ತೃತೀಯ ವಿಶ್ವದಲ್ಲಿ ಆರ್ಥಿಕ ಅಭಿವೃದ್ಧಿ ಎಂಬ ಕೃತಿಯಲ್ಲಿ ಅಭಿವೃದ್ಧಿಯನ್ನು ಸಾಮಾಜಿಕ ರಚನೆಗಳಲ್ಲಿ ಜನರ ವರ್ತನೆಗಳಲ್ಲಿ ಮತ್ತು ಸಂಘ ಸಂಸ್ಥೆಗಳಲ್ಲಿ ಬೃಹತ್ ಬದಲಾವಣೆಯನ್ನು ಹಾಗೂ ಆರ್ಥಿಕ ಬೆಳವಣಿಗೆಗಳ ವೇಗೋತ್ಕರ್ಷ, ಅಸಮಾನತೆಯ ಇಳಿಕೆ ಮತ್ತು ನಿರಪಾಕ್ಷೆ ಬಡತನದ ನಿವಾರಣೆಗಳನ್ನು ಒಳಗೊಂಡಿರುವ ಪ್ರಕ್ರಿಯೆ ಎಂದು ಉಲ್ಲೇಖಿಸಿದ್ದಾರೆ.[೩] ಈ ವ್ಯಾಖ್ಯೆಯನ್ನು ವಿಶ್ಲೇಷಿಸುವಾಗ ಅಭಿವೃದ್ಧಿ ಎನ್ನುವುದು ಒಂದು ಸಮಗ್ರ ಸುಧಾರಣೆ ಹಾಗೂ ಸಕಾರಾತ್ಮಕ ಬದಲಾವಣೆ ಎನ್ನುವ ಅಭಿಪ್ರಾಯಗಳು ವ್ಯಕ್ತವಾಗುತ್ತವೆ.

---

೧ ಡಾ.ಬಿ.ಪ್ರಭಾಕರ ಶಿಶಿಲ 'ಅಭಿವೃದ್ಧಿಯ ಅರ್ಥಶಾಸ್ತ್ರ' ಮಂಗಳ ಪ್ರಕಾಶನ ಮಂಗಳೂರು ೨೦೦೨ ಪುಟ – ೫

೨ ಅದೇ ಪುಟ ೩

೩. ಅದೇ ಪುಟ ೩–೪

ಅಭಿವೃದ್ಧಿಯ ಕುರಿತಂತೆ ಯಾವುದೇ ಒಂದು ಪ್ರದೇಶವನ್ನು ಪರಿಶೀಲಿಸುವಾಗ ಹಲವು ಅಂಶಗಳಿಂದ ಅವರಿಸಿಕೊಂಡ ವಿಷಯವಾಗಿದೆ ಎಂದು ತಿಳಿಯುತ್ತದೆ. ಅಭಿವೃದ್ಧಿ ಅಧ್ಯಯನ, ಅಭಿವೃದ್ಧಿ ಸಮಸ್ಯೆ, ಅಭಿವೃದ್ಧಿ ಹೊಂದುತ್ತಿರುವ ದೇಶ, ಹಿಂದುಳಿದ ಪ್ರದೇಶಗಳು, ಅಭಿವೃದ್ಧಿ ಸಹಕಾರ, ಅಭಿವೃದ್ಧಿ ನೆರವು, ಯೋಜನೆಗಳು, ಸರ್ಕಾರಿ ನೀತಿಗಳು, ಹೀಗೆ ಹತ್ತು ಹಲವು ಆಯಾಮಗಳನ್ನು ಅಭಿವೃದ್ಧಿ ಪಡೆದಿರುತ್ತದೆ.

ಭಾರತದ ಆರ್ಥಿಕಾಭಿವೃದ್ಧಿ ಎನ್ನುವ ಕೃತಿಯಲ್ಲಿ ಒಡೆಯರ್ ಡಿ ಹೆಗ್ಗಡೆ ಅಭಿವೃದ್ಧಿಯನ್ನು ಕುರಿತಂತೆ ಪ್ರಥಮ ಪಂಚವಾರ್ಷಿಕ ಯೋಜನೆಯು ನೀಡಿದ ವ್ಯಾಖ್ಯಾನವನ್ನು "ಉಲ್ಲೇಖಿಸುವುದು ಸೂಕ್ತವಾಗಿದೆ. ಅಪೂರ್ಣಭಿವೃದ್ಧಿ ಆರ್ಥಿಕತೆಯೊಂದರ ಲಕ್ಷಣವೆಂದರೆ ಒಂದೆಡೆ ಅದು ಬಹುಮಟ್ಟಿಗೆ ಬಳಸಲಾದ ಅಥವಾ ಅಲ್ಪಸ್ವಲ್ಪವಷ್ಟೇ ಬಳಸದಿರುವ ನೈಸರ್ಗಿಕ ಸಂಪನ್ಮೂಲಗಳನ್ನು ಪಡೆದಿರುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಚಲನಶೀಲವಾಗಿ ಕಾರ್ಯಚರಣೆ ಮಾಡುವಲ್ಲಿ ಅಡ್ಡಿಯಾಗುವ ಅಂಶಗಳು ಸಾಮಾಜಿಕ ಆರ್ಥಿಕ ಶಕ್ತಿಗಳನ್ನು ಕುಂಠಿತಗೊಳಿಸುತ್ತದೆ[೪]".

೪ ಒಡೆಯರ್ ಡಿ ಹೆಗ್ಗಡೆ, ಎನ್ ಅನ್ನಪೂರ್ಣೇಶ್ವರಿ, 'ಭಾರತದ ಆರ್ಥಿಕಾಭಿವೃದ್ಧಿ', ಅರ್ಜುನ್ ಪಬ್ಲಿಷಿಂಗ್ ಹೌಸ್, ಮೈಸೂರು, ೨೦೦೪ ಪುಟ - ೫

೩.೩ ಪ್ರವಾಸೋದ್ಯಮದ ವ್ಯಾಖ್ಯೆ

ಪ್ರವಾಸೋದ್ಯಮವು ಪ್ರಮುಖವಾಗಿ ಒಂದು ವಿಹಾರಕ್ಕೋಸ್ಕರ ಪ್ರಯಾಣಿಸುವ ಕ್ರಿಯೆಯಾಗಿರುವುದರ ಜೊತೆಗೆ ಇದಕ್ಕೆ ಪೂರಕವಾದ ಸೇವೆಗಳನ್ನು ಒದಗಿಸುವುದಕ್ಕೆ ಸಂಬಂಧಿಸಿದೆ. ವಿಶ್ವ ಪ್ರವಾಸೋದ್ಯಮ ಸಂಸ್ಥೆಯ ಪ್ರಕಾರ ಪ್ರವಾಸೋದ್ಯಮವು ಪ್ರವಾಸಿಗಳೆಂದರೆ "ತನ್ನ ವಾಸಸ್ಥಾನದಿಂದ ಒಂದು ವರ್ಷಕ್ಕಿಂತ ಕಡಿಮೆ ಅವಧಿಗೆ ವಿಹಾರಕ್ಕಾಗಿ, ವ್ಯಾಪಾರಕ್ಕೆ ಅಥವಾ ಇನ್ನಿತರ ಆದರೆ ಆದಾಯಕ್ಕೆ ಸಂಬಂಧಿಸದೇ ಇರುವ ಉದ್ದೇಶಗಳಿಗೆ ಪ್ರಯಾಣಿಸುವವರು ಅಥವಾ ವಾಸಿಸುವವರು" ಆಗಿರುತ್ತಾರೆ

ಪ್ರವಾಸದ ಅವಧಿ ಎಷ್ಟೇ ಅವಧಿಯದ್ದಾಗಿದ್ದರೂ ಪ್ರವಾಸೋದ್ಯಮವು ವಿಶ್ವದಾದ್ಯಂತ ಒಂದು ಬಹು ಪ್ರಚಲಿತ ಕ್ರಿಯೆಯಾಗಿದೆ. ೨೦೦೪ ನೇ ಇಸವಿಯಲ್ಲಿ ೭೬೩ ಮಿಲಿಯನ್ ಪ್ರವಾಸಿಗರು ಭಾರತಕ್ಕೆ ಭೇಟಿ ನೀಡಿದ್ದರು.

ಸೇವಾ ಉದ್ಯಮವಾಗಿ ಪ್ರವಾಸೋದ್ಯಮವು ಹಲವಾರು ವ್ಯಕ್ತ ಮತ್ತು ಅವ್ಯಕ್ತ ಅಂಶಗಳನ್ನು ಒಳಗೊಂಡಿದೆ. ವಾಹನ ಸೌಕರ್ಯ, ವಸತಿ ಮತ್ತು ಅತಿಥಿ ಸತ್ಕಾರಕ್ಕೆ ಸಂಬಂಧಿಸಿದ ಇತರ ಅಂಶಗಳು ವ್ಯಕ್ತ ಅಂಶಗಳನ್ನು ಒಳಗೊಂಡಿವೆ. ವಿಶ್ರಾಂತಿ, ವಿಹಾರ ಮತ್ತು ಹೊಸಬರನ್ನು ಭೇಟಿಯಾಗುವ ಹಾಗೂ ಹೊಸ ಸಂಸ್ಕೃತಿಗಳನ್ನು ಅರಿತುಕೊಳ್ಳುವ ಅವಕಾಶ ಅಥವಾ ವಿಭಿನ್ನವಾದದ್ದನ್ನು ಮಾಡುವುದು ಅಥವಾ ಸಾಹಸ ಕ್ರೀಡೆಗಳಲ್ಲಿ ಭಾಗವಹಿಸುವುದು ಪ್ರವಾಸೋದ್ಯಮದ ಅವ್ಯಕ್ತ ಅಂಶಗಳು.

ಪ್ರವಾಸಿಗರಿಂದ ವಸ್ತುಗಳ ಖರೀದಿ ಹಾಗೂ ಸೇವೆಗಳ ಬಳಕೆ, ಪ್ರವಾಸೋದ್ಯಮದಿಂದ ದೊರೆಯುವ ತೆರಿಗೆ, ಉದ್ಯೋಗಾವಕಾಶಗಳು ಮತ್ತು ಆರ್ಥಿಕ ಅಭಿವೃದ್ಧಿಯಿಂದಾಗಿ ಪ್ರವಾಸೋದ್ಯಮವು ಹಲವಾರು ದೇಶಗಳ ಆರ್ಥಿಕತೆಗೆ ಅವಶ್ಯಕವಾಗಿದೆ. ಈ ಕಾರಣಗಳಿಂದಾಗಿ ಸರಕಾರೇತರ ಹಾಗೂ ಸರಕಾರಿ ಸಂಸ್ಥೆಗಳು ನಿರ್ದಿಷ್ಟ ಸ್ಥಳಗಳಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಲು ಅಥವಾ ಒಂದು ಸ್ಥಳವನ್ನು ಪ್ರವಾಸೀ ತಾಣವಾಗಿ ಅಭಿವೃದ್ಧಿಪಡಿಸಲು ಪ್ರಯತ್ನಿಸಬಹುದು. ಪ್ರವಾಸೋದ್ಯಮದ ವಿಪರೀತ ಬೆಳವಣಿಗೆಯು ಅತಿಯಾದ ಅಭಿವೃದ್ಧಿಗೆ ಕಾರಣವಾದರೂ ಪರಿಸರಸ್ನೇಹಿ ಪ್ರವಾಸೋದ್ಯಮದಂಥ ಪರ್ಯಾಯ ಪ್ರವಾಸೋದ್ಯಮದಿಂದ ಈ ಉದ್ಯಮವು ದೀರ್ಘಕಾಲ ಬಾಳುವಂತೆ ಮಾಡಬಹುದು.

ಪ್ರವಾಸೋದ್ಯಮಕ್ಕೆ ಪ್ರಯಾಣವೆಂದು ಪರ್ಯಾಯವಾಗಿ ಕರೆಯಲಾಗುತ್ತದೆ. ಪ್ರಯಾಣವು ಪ್ರವಾಸಕ್ಕೆ ಹೋಗುವುದಕ್ಕೆ ಸಮನಾದರೂ ಪ್ರಯಾಣದ ಹಿಂದೆ ನಿರ್ದಿಷ್ಟ ಉದ್ದೇಶವಿರುತ್ತದೆ. ಪ್ರವಾಸೋದ್ಯಮ ಮತ್ತು ಪ್ರವಾಸಿ ಎಂಬ ಶಬ್ದಗಳನ್ನು ಪ್ರವಾಸಿಗಳು ಭೇಟಿ ನಿಡುವ ಸಂಸ್ಕೃತಿಗಳು ಹಾಗೂ ಸ್ಥಳಗಳ ಬಗ್ಗೆ ವಿವರಿಸಲು ಸಹ ಬಳಸಲಾಗುತ್ತದೆ.

ನಿರೂಪಣೆ ಮತ್ತು ವರ್ಗೀಕರಣ

ಪ್ರವಾಸೋದ್ಯಮಕ್ಕೆ ಒಂದು ನಿರೂಪಣೆ ನೀಡಿದವರಲ್ಲಿ ಆಸ್ಟ್ರಿಯಾದ ಹರ್ಮನ್ ವೊನ್ ಶುಲ್ಲಾರ್ಡ್ ಒಬ್ಬರು. ಅವರು ೧೯೧೦ ರಲ್ಲಿ ನೀಡಿದ ನಿರೂಪಣೆಯ ಪ್ರಕಾರ "ಪ್ರವಾಸೋದ್ಯಮವು ದೇಶದ ಒಳಗೆ ಮತ್ತು ಹೊರಗೆ ವಿದೇಶೀಯರ ಆಗಮನ, ವಾಸ ಮತ್ತು ಚಲನವಲನಗಳಿಗೆ ನೇರವಾಗಿ ಸಂಬಂಧಿಸಿದ ಆರ್ಥಿಕ ಸ್ವರೂಪದ ಒಟ್ಟಾರೆ ಕಾರ್ಯನಿರ್ವಹಣೆ."

ಹನ್ಜಿಕರ್ ಮತ್ತು ಕ್ರಾಫ್ಟ್ ೧೯೪೧ರಲ್ಲಿ ಪ್ರವಾಸೋದ್ಯಮವನ್ನು "ಅನಿವಾಸಿಗಳ ಪ್ರಯಾಣ ಮತ್ತು ತಾತ್ಕಾಲಿಕ ವಾಸದಿಂದ ಉದ್ಭವಿಸುವ ಆರ್ಥಿಕ ಚಟುವಟಿಕೆಗೆ ಸಂಬಂಧಿಸದ ವಿದ್ಯಮಾನಗಳು ಮತ್ತು ಸಂಬಂಧಗಳು" ಎಂದು ನಿರೂಪಿಸಿದ್ದಾರೆ.

೧೯೭೬ ರಲ್ಲಿ ಟೂರಿಸಂ ಸೊಸೈಟಿ ಆಫ್ ಇಂಗ್ಲೆಂಡ್ ಪ್ರವಾಸೋದ್ಯಮವನ್ನು "ತಮ್ಮ ವಾಸಸ್ಥಳವಲ್ಲದ ಅಥವಾ ಕೆಲಸದ ಸ್ಥಳವಲ್ಲದ ಪ್ರದೇಶದಿಂದ ಹೊರಕ್ಕೆ ತಾತ್ಕಾಲಿಕವಾಗಿ ಅಲ್ಪಾವಧಿಗೆ ಪ್ರಯಾಣಿಸುವುದು ಹಾಗೂ ಇದಕ್ಕೆ ಸಂಬಂಧಿಸಿದ ಚಟುವಟಿಕೆಗಳು. ಇದರಲ್ಲಿ ಎಲ್ಲಾ ಉದ್ದೇಶಗಳಿಗೆ ಸಂಬಂಧಿಸಿದ ಪ್ರಯಾಣವು ಒಳಗೊಂಡಿದೆ" ಎಂದು ಬಣ್ಣಿಸಿದೆ.

ಇಂಟರ್‌ನ್ಯಾಷನಲ್ ಅಸೋಸಿಯೇಶನ್ ಆಫ್ ಸೈಂಟಿಫಿಕ್ ಎಕ್ಸ್‌ಪರ್ಟ್ಸ್ ಇನ್ ಟೂರಿಸಂ ೧೯೮೧ರಲ್ಲಿ ಪ್ರವಾಸೋದ್ಯಮವನ್ನು ವ್ಯಕ್ತಿಯೊಬ್ಬ ತನ್ನ ಇಚ್ಛೆಯಿಂದ ಆಯ್ಕೆ ಮಾಡಿದ ಹಾಗೂ ತನ್ನ ಮನೆಯ ಪರಿಸರದಿಂದ ದೂರ ಕೈಗೊಳ್ಳುವ ಚಟುವಟಿಕೆ ಎಂದು ನಿರೂಪಿಸಿತು. ವಿಶ್ವಸಂಸ್ಥೆಯು ೧೯೯೪ರಲ್ಲಿ ತನ್ನ ಪ್ರವಾಸೋದ್ಯಮದ ಅಂಕೆಸಂಖ್ಯೆಗಳ ಶಿಫಾರಸಿನಲ್ಲಿ ಪ್ರವಾಸೋದ್ಯಮವನ್ನು ಈ ಕೆಳಗಿನಂತೆ ವರ್ಗೀಕರಿಸಿದೆ:

೧. ಒಂದು ದೇಶದ ನಿವಾಸಿಗಳು ದೇಶದೊಳಗೆಯೇ ಪ್ರಯಾಣಿಸುವ ದೇಶೀಯ ಪ್ರವಾಸೋದ್ಯಮ.

೨. ವಿದೇಶೀಯರು ಅಥವಾ ಅನಿವಾಸಿಗಳು ಒಂದು ದೇಶಕ್ಕೆ ಆಗಮಿಸುವ ಒಳಾಗಮನದ ಪ್ರವಾಸೋದ್ಯಮ.

೩. ಒಂದು ದೇಶದ ನಿವಾಸಿಗಳು ಇನ್ನೊಂದು ದೇಶಕ್ಕೆ ಹೋಗುವ ಹೊರಹೋಗುವ ಪ್ರವಾಸೋದ್ಯಮ.

ಈ ಮೂರು ಮೂಲ ವಿಧಗಳನ್ನು ಸಂಯೋಜಿಸಿ ವಿಶ್ವಸಂಸ್ಥೆಯು ಪ್ರವಾಸೋದ್ಯಮವನ್ನು ಇನ್ನೂ ಮೂರು ವಿಧಗಳಾಗಿ ವಿಂಗಡಿಸಿದೆ:

೧. ದೇಶೀಯ ಮತ್ತು ಒಳಾಗಮನದ ಪ್ರವಾಸೋದ್ಯಮದ ಸಂಯೋಜನೆಯಿಂದ ಉಂಟಾಗುವ ಆಂತರಿಕ ಪ್ರವಾಸೋದ್ಯಮ.

೨. ದೇಶೀಯ ಮತ್ತು ಹೊರಹೋಗುವ ಪ್ರವಾಸೋದ್ಯಮದ ಸಂಯೋಜನೆಯಿಂದ ಉಂಟಾಗುವ ರಾಷ್ಟ್ರೀಯ ಪ್ರವಾಸೋದ್ಯಮ.

೩. ಒಳಾಗಮನ ಮತ್ತು ಹೊರಹೋಗುವ ಪ್ರವಾಸೋದ್ಯಮದ ಸಂಯೋಜನೆಯಿಂದ ಉಂಟಾಗುವ ಅಂತಾರ್ರಾಷ್ಟ್ರಿಯ ಪ್ರವಾಸೋದ್ಯಮ.

ಆಧುನಿಕ ದೃಷ್ಟಿಕೋನ

ಕೊರಿಯಾ ದೇಶದ ಪ್ರವಾಸೋದ್ಯಮ ಸಂಸ್ಥೆಯು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ದೇಶೀಯ ಪ್ರವಾಸೋದ್ಯಮದಲ್ಲಿ ಇನ್ನೂ ಹಲವು ಅಂಶಗಳನ್ನು ಒಳಗೂಡಿಸಿದೆ. ಈ ನಿರೂಪಣೆಯ ಪ್ರಕಾರ ದೇಶೀಯ ಪ್ರವಾಸೋದ್ಯಮವು ಪ್ರವಾಸೋದ್ಯಮ ಕಾರ್ಯನೀತಿಯನ್ನು ರೂಪಿಸಿ ಅನುಷ್ಠಾನಗೊಳಿಸುವುದನ್ನು ಒಳಗೊಂಡಿದೆ.

೨೧ನೇ ಶತಮಾನದಲ್ಲಿ ಪ್ರವಾಸೋದ್ಯಮವು ಒಳಾಗಮನದ ಪ್ರವಾಸೋದ್ಯಮದಿಂದ ಮೇಲೆ ಹೇಳಿದ ದೇಶೀಯ ಪ್ರವಾಸೋದ್ಯಮವಾಗಿ ರೂಪಾಂತರಗೊಂಡಿದೆ. ಹಲವಾರು ದೇಶಗಳಲ್ಲಿ ದೇಶದೊಳಗೆ ಆಗಮಿಸುವ ಪ್ರವಾಸಿಗಳ ಪೈಪೋಟಿಯಿಂದಾಗಿ ಈ ರೂಪಾಂತರವು ಉಂಟಾಗಿದೆ. ಸಾಂಪ್ರದಾಯಿಕ ದೇಶೀಯ ಪ್ರವಾಸೋದ್ಯಮವಿಲ್ಲದೆ ಮೇಲೆ ಹೇಳಿದ ವಿಧದ ದೇಶೀಯ ಪ್ರವಾಸೋದ್ಯಮವು ಉಳಿಯದಿರುವುದರಿಂದ ಶಾಸಕರು ಸ್ಥಳೀಯ ಆರ್ಥಿಕತೆಗೆ ಸಹಾಯಕವಾಗುವ ಸ್ಥಳೀಯ ಪ್ರವಾಸೋದ್ಯಮಕ್ಕೆ ತಮ್ಮ ಗಮನವನ್ನು ಹರಿಸಿದ್ದಾರೆ.

"ಸೀ ಅಮೆರಿಕಾ", "ಗೆಟ್ಟಿಂಗ್ ಗೋಯಿಂಗ್ ಕೆನಡಾ", "ಸೀ ಕೊರಿಯಾ ಕ್ಯಾಂಪೇಯ್ನ್" ಇತ್ಯಾದಿಗಳು ಇದಕ್ಕೆ ಉದಾಹರಣೆಗಳು. ಕೊರಿಯಾ ಪ್ರವಾಸೋದ್ಯಮ ಇಲಾಖೆಯು ಪ್ರವಾಸೋದ್ಯಮವನ್ನು ಬಲಪಡಿಸಲು "ಗುಸೆಯೊಕ್, ಗುಸೆಯೊಕ್" ಅರ್ಥಾತ್ ದೇಶದ ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ಎಂಬ ಚಟುವಟಿಕೆಯನ್ನು ಆರಂಭಿಸಿದೆ.

ಪ್ರವಾಸಕ್ಕೆ ಹೋಗಲು ಅಗತ್ಯವಿರುವ ಅಂಶಗಳು

ಪ್ರವಾಸಕ್ಕೆ ಹೋಗುವ ಮೊದಲು ಈ ಕೆಳಗಿನ ಅಂಶಗಳನ್ನು ಪೂರೈಸುವುದು ಅಗತ್ಯ:

೧. ಖರ್ಚು ಮಾಡಲು ಸಾಕಷ್ಟು ದುಡ್ಡು ಇರಬೇಕು.

೨. ಸಾಕಷ್ಟು ಸಮಯವಿರಬೇಕು.

೩. ವಾಹನ ಸೌಕರ್ಯ ಹಾಗೂ ವಸತಿ ಸೌಕರ್ಯದಂಥ ಸೌಲಭ್ಯಗಳು ಇರಬೇಕು.

ವೈಯಕ್ತಿಕವಾಗಿ ಉತ್ತಮ ಆರೋಗ್ಯ ಹಾಗೂ ಪ್ರವಾಸಕ್ಕೆ ಹೋಗುವ ಇಚ್ಛೆಯೂ ಇರಬೇಕು. ಕೆಲವು ದೇಶಗಳು ತಮ್ಮ ನಾಗರಿಕರು ಕೆಲವು ದೇಶಗಳಿಗೆ ಪ್ರವಾಸ ಹೋಗುವುದಕ್ಕೆ ನಿರ್ಬಂಧ ಹೇರುತ್ತವೆ. ಜನಜೀವನದ ಮೇಲೆ ಬಿಗಿಯಾದ ಹಿಡಿತವಿರುವ ದೇಶಗಳು (ಉದಾಹರಣೆಗೆ ಕಮುನಿಸ್ಟ್ ದೇಶಗಳು) ನಂಬಿಕೆಗೆ ಅರ್ಹವಾದ ವ್ಯಕ್ತಿಗಳಿಗೆ ಮಾತ್ರ ವಿದೇಶಗಳಿಗೆ ಹೋಗಲು ಅವಕಾಶ ನೀಡುತ್ತವೆ. ಅಮೆರಿಕಾವು ಕ್ಯೂಬಾದಂಥ ದೇಶಗಳಿಗೆ ತನ್ನ ನಾಗರಿಕರು ಹೋಗುವುದನ್ನು ನಿರ್ಬಂಧಿಸುತ್ತವೆ.

ಚಾರಿತ್ರಿಕ ದೃಷ್ಟಿಕೋನ

ಶ್ರೀಮಂತರು ಅನಾದಿ ಕಾಲದಿಂದಲೂ ವಿಶ್ವವಿಖ್ಯಾತ ಕಟ್ಟಡಗಳನ್ನು ನೋಡಲು, ಕಲಾತ್ಮಕ ಕೃತಿಗಳನ್ನು ವೀಕ್ಷಿಸಲು, ಹೊಸ ಭಾಷೆಗಳನ್ನು ಕಲಿಯಲು, ಹೊಸ ಸಂಸ್ಕೃತಿಗಳ ಬಗ್ಗೆ ಅರಿಯಲು ಅಥವಾ ಹೊಸ ಆಹಾರಪದಾರ್ಥಗಳನ್ನು ಆಸ್ವಾದಿಸಲು ಪ್ರವಾಸಕ್ಕೆ ಹೋಗುತ್ತಿದ್ದಾರೆ. ರೋಮನ್ ಸಾಮ್ರಾಜ್ಯದ ಕಾಲದಲ್ಲಿ ಬಾಯೇ ಎಂಬ ಕಡಲತೀರವು ಶ್ರೀಮಂತರ ಪ್ರವಾಸಿ ತಾಣವಾಗಿತ್ತು.

ರಾಷ್ಟ್ರ ಸಂಘ ೧೯೩೭ರಲ್ಲಿ ಪ್ರವಾಸಿ ಮತ್ತು ಪ್ರವಾಸೋದ್ಯಮ ಎಂಬ ಶಬ್ದಗಳನ್ನು ಅಧಿಕೃತವಾಗಿ ಬಳಸಿತು. ವ್ಯಕ್ತಿಯೊಬ್ಬ ೨೪ ಗಂಟೆಗಳಿಗಿಂತಲೂ ಹೆಚ್ಚು ಕಾಲ ವಿದೇಶಕ್ಕೆ ಪ್ರಯಾಣಿಸುವುದನ್ನು ಪ್ರವಾಸೋದ್ಯಆಮ ಎನ್ನಲಾಗುತ್ತಿತ್ತು.

ಆರೋಗ್ಯ ಪ್ರವಾಸೋದ್ಯಮ ಹಾಗೂ ವಿಹಾರಾತ್ಮಕ ಪ್ರವಾಸೋದ್ಯಮ

ಯುರೋಪಿನ ಪ್ರವಾಸೋದ್ಯಮವು ಮಧ್ಯಕಾಲೀನ ತೀರ್ಥಯಾತ್ರೆಗಳಿಂದ ಆರಂಭವಾಯಿತು ಎನ್ನಬಹುದು. ಪ್ರಾಥಮಿಕವಾಗಿ ತೀರ್ಥಯಾತ್ರೆಯಾಗಿದ್ದರೂ ಕ್ಯಾಂಟರ್‌ಬರಿ ಟೇಲ್ಸ್‌ಗೆ ಬರುತ್ತಿದ್ದ ತೀರ್ಥಯಾತ್ರಿಗಳಿಗೆ ತಾವು ರಜಾದಿನಗಳನ್ನು ಕಳೆದ ಅನುಭವವಾಗುತ್ತಿತ್ತು. ನೆನಪಿನ ಕಾಣಿಕೆಗಳನ್ನು ತರುವುದು, ವಿದೇಶೀ ಬ್ಯಾಂಕುಗಳಿಮ್ದ ಸಾಲ ಪಡೆದುಕೊಳುವುದು (ಮಧ್ಯಕಾಲೀನ ಯುಗದಲ್ಲಿ ಯೆಹೂದಿಗಳು ಮತ್ತು ಲೋಂಬಾರ್ಡ್‌ಗಳು ಪರಸ್ಪರ ಸಂಪರ್ಕವನ್ನು ಬಳಸುತ್ತಿದ್ದರು), ಲಭ್ಯವಿರುವ ವಾಹನ ಸೌಕರ್ಯ ಬಳಸುವುದು (ಮಧ್ಯಯುಗದಲ್ಲಿ ವಿಗೋ ಎಂಬಲ್ಲಿಗೆ ವೈನ್ ಸಾಗಿಸುತ್ತಿದ್ದ ಬ್ರಿಟಿಷರ ಹಡಗುಗಳಲ್ಲಿ ತೀರ್ಥಯಾತ್ರಿಗಳು ಸ್ಯಾಂಟಿಯಾಗೊ ದೆ ಕೊಂಪೊಸ್ಟೆಲಾಗೆ ಹೋಗುತ್ತಿದ್ದರು) ತೀರ್ಥಯಾತ್ರೆಗೆ ಸಂಬಂಧಿಸಿದ ಇತರ ಅಂಶಗಳು. ಲೂರ್ದ್ ಮತ್ತು ಐರ್ಲೆಂಡಿನ ನೊಕ್‌ಗೆ ತೀರ್ಥಯಾತ್ರೆಗಳು ಇಂದಿಗೂ ಪ್ರಮುಖ ಪ್ರವಾಸೋದ್ಯಮದ ಮೂಲಗಳಾಗಿವೆ. ಆಧುನಿಕ ಜಗತ್ತಿನಲ್ಲಿ ಇದಕ್ಕೆ ಸಮನಾಗಿ ಗ್ರೇಸ್‌ಲ್ಯಾಂಡ್ ಹಾಗೂ 'ಪೆರೆ ಲಾಚಾಯ್ ಸ್ಮಶಾನಾದ ಜಿಮ್ ಮೊರಿಸನ್‌ನ ಗೋರಿಗಳಿವೆ.

ಹದಿನೇಳನೇ ಶತಮಾನದಲ್ಲಿ ದೀರ್ಘ ಪ್ರವಾಸಗೈಯುವುದು ಇಂಗ್ಲೆಂಡಿನಲ್ಲಿ ಪ್ರಚಲಿತವಾಯಿತು. ವಿದ್ಯಾಭ್ಯಾಸದ ಸಲುವಾಗಿ ರಾಜಮನೆತನದವರು ಹಾಗೂ ಶ್ರೀಮಂತರು ದೀರ್ಘಕಾಲ ಯುರೋಪಿನ ಪ್ರವಾಸ ಮಾಡಲು ಆರಂಭಿಸಿದರು. ಹದಿನೆಂಟನೇ ಶತಮಾನವು ಇಂಥ ಪ್ರವಾಸಗಳ ಸುವರ್ಣಯುಗವಾಗಿದ್ದು ರೋಮಿನ ಪೊಂಪೆಯೋ ಬಾಟೊನಿ ಇಂಥ ಹಲವಾರು ಪ್ರವಾಸಿಗಳ ಚಿತ್ರಗಳನ್ನು ಬಿಡಿಸುತ್ತಿದ್ದರು. ಆಧುನಿಕ ಪ್ರಪಂಚದಲ್ಲಿ ಸ್ವಾನ್-ಹೆಲೆನಿಕ್ ಈ ರೀತಿಯ ಪ್ರವಾಸಗಳನ್ನು ಏರ್ಪಡಿಸುತ್ತಾರೆ.

ಆರೋಗ್ಯ ಪ್ರವಾಸೋದ್ಯಮವು ಹಿಂದಿನಿಂದಲೂ ಇದ್ದರೂ ೧೮ನೇ ಶತಮಾನದಲ್ಲಿ ಅದರ ಮಹತ್ವ ಹೆಚ್ಚಿತು. ಇಂಗ್ಲೆಂಡಿನಲ್ಲಿ ಆರೋಗ್ಯ ಪ್ರವಾಸೋದ್ಯಮವು ವಿವಿಧ ರೋಗಗಳಿಗೆ ಚಿಕಿತ್ಸೆ ನೀಡುವ ಖನಿಜಾಂಶಯುಕ್ತ ನೀರಿನ ಬುಗ್ಗೆಗಳಲ್ಲಿ ಸ್ನಾನ ಮಾಡುವ ಮಟ್ಟಕ್ಕೆ ತಲುಪಿತು.

ಬಾತ್ ಎಲ್ಲರ ಮೆಚ್ಚುಗೆ ಗಳಿಸಿದ್ದರೂ ಬಕ್ಸ್‌ತನ್, ಹ್ಯಾರೋಗೇಟ್ ಮತ್ತು ಟನ್‌ಬ್ರಿಜ್ ಬಾವಿಗಳು ಪ್ರಾಮುಖ್ಯಕ್ಕೆ ಬಂದವು. ಆನರು ಈ ಸ್ಥಳಗಳಿಗೆ ನೃತ್ಯ ಕುಣಿತ ಮತ್ತಿತರ ಮನೋರಂಜನೆಗಳಿಗಾಗಿಯೂ ಭೇಟಿ ನೀಡಲು ಆರಂಭಿಸಿದರು. ಹತ್ತೊಂಬತ್ತನೆಯ ಶತಮಾನದಲ್ಲಿ ಕಾರ್ಲ್ಸ್‌ಬಾದ್‌ನ ಬಿಸಿನೀರಿನ ಬುಗ್ಗೆಗಳು ಪ್ರವಾಸಿಗಳನ್ನು ಆಕರ್ಷಿಸಲು ಆರಂಭಿಸಿದವು.

೩.೪ ಪ್ರವಾಸೋದ್ಯಮದ ಉಗಮ ಮತ್ತು ಸುಧಾರಣೆಗಳು

ಇಂದಿನ ಪ್ರವಾಸೋದ್ಯಮದ ಉಗಮವನ್ನು ನಾವು ೧೯೩೯–೪೫ರ ಪ್ರಪಂಚದ ಎರಡನೇ ಯುದ್ಧದ ನಂತರ ವರ್ಷಗಳಲ್ಲಿ ಗುರುತಿಸಬಹುದು. ನಂತರದ ವರ್ಷಗಳಲ್ಲಿ ಪ್ರವಾಸೋದ್ಯಮವು ಉತ್ತಮಗೊಂಡ ಜನರ ಜೀವನ ಮಟ್ಟ, ಹೆಚ್ಚಿದ ವಿರಾಮದ ಸಮಯಗಳು ಮತ್ತು ಮನರಂಜನೆ ಅಭಿವೃದ್ಧಿ ಸಾಗಾಣಿಕೆ, ಇವುಗಳು ಅಂತರಾಷ್ಟ್ರೀಯ ಪ್ರವಾಸಗಳಿಗೆ ನಾಂದಿಯಾಯಿತು. ಈ ಮಹತ್ವದ ಹಂತಗಳು ಸ್ಥಿರವಾದ ಏರುವಿಕೆಯು ಇತ್ತೀಚಿನ ದಿನಗಳ ಪ್ರವಾಸೋದ್ಯಮದ ಏರುವಿಕೆಯಲ್ಲಿ ಅಥವ ಅಭಿವೃದ್ಧಿಯಲ್ಲಿ ನಾವು ಕಾಣಬಹುದು.

ಗ್ರೀಕ್ ನಾಗರಿಕತೆಯು ಮೊತ್ತಮೊದಲಿಗೆ ಕೆಲಸ ಮತ್ತು ವಿರಾಮದ ನಡುವಿನ ಸಮತೋಲನವನ್ನು ಸಮಾಜಕ್ಕೆ ಪರಿಚಯಿಸಿತು. ಒಲಿಂಪಿಕ್ಸ್ ಕ್ರೀಡೆಗಳನ್ನು ಆಯೋಜಿಸುವ ಮೂಲಕ ಗ್ರೀಕರು ಬೇರೆ ದೇಶದ ಸ್ಪರ್ಧಾಳುಗಳನ್ನು ತಮ್ಮ ದೇಶಕ್ಕೆ ಬರಮಾಡಿಕೊಂಡರು. ಕ್ರಿ.ಪೂ. ೭೭೬ರಲ್ಲಿ ನಡೆದ ಪ್ರಥಮ ಒಲಿಂಪಿಕ್ಸ್ ಕ್ರೀಡಾಕೂಟ ವಿದೇಶಗಳಿಂದ ಕ್ರೀಡಾಳುಗಳನ್ನು ಅಹ್ವಾನಿಸುವ ಮೂಲಕ ಅಂತರಾಷ್ಟ್ರೀಯವಾಗಿ ಪ್ರವಾಸಿಗಳನ್ನು ಆಕರ್ಷಿಸಿತು. ರೋಮನರು ಕ್ರೀಡೆಗಳ ಮುಖಾಂತರ ಅಥವಾ ಕ್ರೀಡೆಗಳಲ್ಲಿ ಭಾಗವಹಿಸುವ ಮುಖಾಂತರ ದೇಶಿಯವಾಗಿ ಅಥವಾ ಅಂತರ್ ರಾಷ್ಟ್ರೀಯ ಮಟ್ಟದಲ್ಲಿ ಜನರ ಚಲನೆಯನ್ನು ಉತ್ತೇಜಿಸಿದರು. ರೋಮನ್ನರ ಕಾಲದಲ್ಲಿನ ಅತ್ಯುತ್ತಮವಾದ ಸಾರಿಗೆ ಸಂಪರ್ಕಗಳು ಪ್ರವಾಸೋದ್ಯಮದ ಅಭಿವೃದ್ಧಿಗೆ ಪೂರಕವಾದುವು. ಕ್ರಿ.ಶ ೪೦೦ರ ಮಧ್ಯಯುಗದಲ್ಲಿ ರೋಮನ್ ಸಾಮ್ರಾಜ್ಯದಲ್ಲಿ ಕ್ರೈಸ್ತಧರ್ಮದ ಉಗಮದಿಂದಾಗಿ ವಿರಾಮ ಚಟುವಟಿಕೆಗಳಿಗೆ ಧಾರ್ಮಿಕ ಸ್ಥಾನಮಾನಗಳನ್ನು ನೀಡಲಾಯಿತು. ರಜಾದಿನ ಎನ್ನುವ ಒಂದು ಪರಿಕಲ್ಪನೆಯು ರೋಮನರ ಕಾಲದಲ್ಲಿ ಬಹುಪ್ರಮುಖ್ಯತೆಯನ್ನು ಪಡೆದಿತ್ತು. ಹೊಲಿಡೇಸ್ ಎಂಬ ಶಬ್ಧವು ಕ್ರೈಸ್ತರಿಗೆ ಸಂಬಂಧ ಪಟ್ಟ ಹೋಲಿಡೇಸ್ (ಪವಿತ್ರ ದಿನಗಳು) ಎಂಬಲ್ಲಿಂದ ಉಗಮವಾಗಿದೆ. ಈ ಹೊಲಿಡೇಸ್ (ಪವಿತ್ರ ದಿನಗಳು) ಅಲ್ಲಿನ ಜನರಿಗೆ

ಮುಖ್ಯವಾಗಿ ವಿರಾಮದ ದಿನಗಳಾಗಿದ್ದವು ಈ ವಿರಾಮದ ದಿನಗಳನ್ನು ಅವರು ಪ್ರವಾಸ, ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆಗಳಿಗೆ ಮೀಸಲಾಗಿಟ್ಟದ್ದರು. ಈ ಕಾಲದಲ್ಲಿ ಅಂತರಾಷ್ಟ್ರೀಯ ಪ್ರವಾಸ ಪ್ರಮುಖ್ಯತೆಯನ್ನು ಪಡೆದಿತ್ತು. ಶ್ರೀಮಂತರಾದ ರೋಮನರು ತಮ್ಮ ಗೆಳೆಯರು ತಮ್ಮ ಗೆಳೆಯರು ಮತ್ತು ಸಂಬಂಧಿಕರನ್ನು ಭೇಟಿಯಾಗಲು ಅಂತರಾಷ್ಟ್ರೀಯವಾಗಿ ಪ್ರಯಾಣಿಸಲು ಆರಂಭಿಸಿದರು. ೧೭ನೇ ಶತಮಾನದಲ್ಲಿ ಈ ಪ್ರವಾಸೋದ್ಯಮವು ಒಂದು ತಿರುವನ್ನು ಪಡೆಯಿತು. ನಂತರದ ದಿನಗಳಲ್ಲಿ ವೈಭವೋಚಿತ ಪ್ರವಾಸಗಳು ಮತ್ತು ವಿರಾಮದ ಮನೆಗಳ ಒಂದು ಯುಗ ಆರಂಭವಾಯಿತು. ೧೮ನೇ ಶತಮಾನದಲ್ಲಿ ಈ ವೈಭವೋಪೇತ ಪ್ರವಾಸಗಳು ಬಹಳ ಪ್ರಸಿದ್ಧಿಯನ್ನು ಪಡೆದವು.

ಕೈಗಾರಿಕ ಕ್ರಾಂತಿ

೧೮ನೇಯ ಶತಮಾನದ ಕೈಗಾರಿಕಾ ಕ್ರಾಂತಿಯು ಜನರ ಜೀವನ ಶೈಲಿಯನ್ನು ಬದಲಾಯಿಸಿತು. ಕಾರ್ಖಾನೆಗಳ ಮತ್ತು ಕೈಗಾರಿಕೆಗಳ ಅಭಿವೃದ್ಧಿಯಿಂದಾಗಿ ಜನರು ಹಳ್ಳಿಯಿಂದ ಪಟ್ಟಣದ ಕಡೆಗೆ ವಲಸೆ ಆರಂಭಿಸಿದರು ಈ ಕೈಗಾರಿಕೆಗಳಲ್ಲಿ ನಿರಂತರವಾದ ಕೆಲಸದ ಅವಧಿಯಿಂದ ಬಿಡುವನ್ನು ಪಡೆಯಲು ಜನರು ಸಮುದ್ರತೀರದ ಪ್ರದೇಶಗಳನ್ನು ಆಶ್ರಯಿಸಿದರು.

೧೮೭೧ರ ಬ್ಯಾಂಕ್ ಹೂಲಿಡೆ ಆ್ಯಕ್ಟ್ ಪಬ್ಲಿಕ್ ಹೊಲಿಡೆ (ಸಾರ್ವಜನಿಕ ರಜಾದಿನ ಘೋಷಿಸಿತು ಈ ಸಾರ್ವಜನಿಕ ದಿನಗಳು ವರ್ಷಗಳಲ್ಲಿ ಕೆಲವುದಿನಗಳಿಗೆ ಮಾತ್ರ ಸೀಮಿತವಾಗಿತ್ತು. ಈ ದಿನಗಳು ಪ್ರವಾಸ ಮತ್ತು ರಜಾಕಾಲದ ಮಜಾವನ್ನು ಅನುಭವಿಸಲು ಅನುವು ಮಾಡಿಕೊಟ್ಟಿತ್ತು. ಇದರಿಂದಾಗಿ ಸಮುದ್ರತೀರದ ವಿರಾಮ ಮನೆಗಳು ಮತ್ತು ಸಮುದ್ರ ತೀರ ಪ್ರವಾಸೋದ್ಯಮವು ಅಭಿವೃದ್ಧಿಯನ್ನು ಪಡೆಯಿತು. ಉಗಿಬಂಡಿಯ ಅಥವಾ ರೈಲು ಬಂಡಿಯ ಆವಿಷ್ಕಾರ ಪ್ರವಾಸೋದ್ಯಮದ ಮೇಲೆ ತೀರ್ವ ಪರಿಣಾಮಗಳನ್ನು ಬೀರಿತು. ರೈಲ್ವೆ ಸಾರಿಗೆಯು ಒಂದು ಅಗ್ಗವಾದ ಸಾರಿಗೆ ಜಾಲವಾಗಿದ್ದು. ಪ್ರವಾಸೋದ್ಯಮದ ಬೆಳವಣಿಗೆಯಲ್ಲಿ ಅತ್ಯಂತ ಸಹಕಾರಿ ಸಂಸ್ಥೆಯಾಗಿದೆ. ಕಾರ್ಮಿಕ ವರ್ಗದವರ ಉತ್ಕಟವಾದ ಇಚ್ಛೆಯನ್ನು ಪೂರೈಸುವುದರಲ್ಲಿ ರೈಲ್ವೆಸಾರಿಗೆಯು ಒಂದು ಅಗ್ಗದ ಸಾಧನವಾಗಿದೆ.

೩.೫ ಇಪ್ಪತ್ತನೇಯ ಶತಮಾನದಲ್ಲಿ ಪ್ರವಾಸೋದ್ಯಮ

ಒಂದನೇ ಪ್ರಪಂಚ ಮಹಾಯುದ್ದದ ನಂತರ ಮೋಟಾರು ಕಾರು ಉತ್ಪಾದನೆಯ ಹೆಚ್ಚಳದಿಂದಾಗಿ ರೈಲ್ವೆಸಾರಿಗೆಯು ಹಿನ್ನಡೆಯನ್ನು ಕಂಡಿತು. ಇದರಿಂದಾಗಿ ಜನರು ರಜಾದಿನದ ಪ್ರವಾಸಕ್ಕಾಗಿ ತಮ್ಮ ವಾಹನಗಳನ್ನು ಹೆಚ್ಚಾಗಿಯಳಂತ ತೊಡಗಿದರು. ಈ ಸಮಯದಲ್ಲಿ ಬ್ರಿಟಿಷ್ ಸಮುದ್ರತೀರದ ವಿರಾಮ ಮನೆಗಳು ತೀವ್ರವಾಗಿ ಬೆಳೆದವು. ಒಂದನೇ ಮಹಾಯುದ್ಧದ ನಂತರದ ವಿಮಾನಗಳ ಪರಿಚಯ ತಂತ್ರಜ್ಞಾನದಲ್ಲಿ ಯಾವ ಅಭಿವೃದ್ಧಿ ಮತ್ತು ಅಂತರಾಷ್ಟ್ರೀಯ ಪ್ಯಾಕೇಜ್ ಪ್ರವಾಸಗಳು ಪ್ರವಾಸೋದ್ಯಮದ ದಿಕ್ಕನ್ನೇ ಬದಲಾಯಿಸಿದವು.

ಅಪಾರ ಸಂಪತ್ತು ಮತ್ತು ಉನ್ನತವಾದ ಶಿಕ್ಷಣ, ಚಲನೆಯ ಹೆಚ್ಚಳ ಅತಿಯಾದ ವಿರಾಮದ ಸಮಯಗಳು ರಾಷ್ಟ್ರೀಯವಾಗಿ ಮತ್ತು ಅಂತರಾಷ್ಟ್ರೀಯಮಾಗಿ ಪ್ರವಾಸೋದ್ಯಮದ ಬೇಡಿಕೆಗಳನ್ನು ಹೆಚ್ಚಿಸಿವೆ. ಅಂತರಾಷ್ಟ್ರೀಯ ಪ್ರವಾಸಗಳು ಕೂಡ ಇಂದಿನ ಯುಗದಲ್ಲಿ ಅಥವಾ ರತಮಾನದಲ್ಲಿ ಕೈಗೆಟುಕುವ ದರದಲ್ಲಿ ಲಭ್ಯವಾಗಿರುವುದರಿಂದ ಮಧ್ಯಮವರ್ಗದವರಿಗೂ ಕೂಡ ರಾಷ್ಟ್ರೀಯ/ ಅಂತರಾಷ್ಟ್ರೀಯ ಕನಸು ನನಸಾಗಿಸುವ ಕಾಲವಾಗಿದೆ.

ಖಾಸಗಿ ಮತ್ತು ಸಾರ್ವಜನಿಕ ರಂಗದ ಪ್ರತಿಭಾ ಸಂಸ್ಥೆಗಳು ಪ್ರವಾಸಿಗರ ಬೇಡಿಕೆಯನ್ನು ಈಡೇರಿಸುವಲ್ಲಿ ಧನತ್ಮಕವಾಗಿ ಪ್ರತಿಕ್ರಿಯಿಸುತ್ತಿವೆ. ಈ ಪ್ರವಾಸೋದ್ಯಮವು ಒಂದು ಮುಕ್ತವಾದ ವ್ಯಾಪಾರ ಉದ್ಯಮವಾಗಿದ್ದು, ರಾಷ್ಟ್ರೀಯ ಹಾಗೂ ಅಂತರ್ ರಾಷ್ಟ್ರೀಯವಾಗಿ ಕಾರ್ಯಾಚರಿಸುವಂಥಹ ಉದ್ಯಮವಾಗಿದೆ.

೩.೬ ಆರ್ಥಿಕಾಭಿವೃದ್ಧಿಗೆ ಪ್ರವಾಸೋದ್ಯಮದ ಕೊಡುಗೆ

ಪ್ರವಾಸೋದ್ಯಮವು ದೇಶದ ಆರ್ಥಿಕತೆಯ ಮೇಲೆ ತೀವ್ರವಾದ ಪರಿಣಾಮವನೇ ಬೀರುತ್ತದೆ. ಪ್ರವಾಸೋದ್ಯಮದ ಪರಿಣಾಮ ನಮ್ಮ ಆರ್ಥಿಕತೆಯ ಮೇಲೆ ವಿವಿಧ ಆಯಾಮಗಳಿಂದ ಪರಿಣಾಮ ಬೀರುತ್ತಿದೆ. ಪ್ರವಾಸೋದ್ಯಮವನ್ನು ಆರ್ಥಿಕಾಭಿವೃದ್ಧಿಗೆ ಕೊಟ್ಟಿರುವಂತಹ ಉಡುಗೊರೆ ಎಂದೂ ಹೇಳಬಹುದು. ಇದನ್ನು ನಾವು ಆರ್ಥಿಕಾಭಿವೃದ್ಧಿಗೆ ಪ್ರಕೃತಿ ಕೊಟ್ಟಿರುವ ಕೊಡುಗೆ ಎಂದೂ ಭಾವಿಸಬಹುದು. ಪ್ರವಾಸೀ ಸ್ಥಳಗಳಲ್ಲಿ ಉಗಮಿಸಿರುವ ಸಣ್ಣ ಉದ್ಯಮಿಗಳು ಉದ್ಯಮದಾರರನ್ನು ಸ್ವತಂತ್ರರನ್ನಾಗಿರಸಿವೆ. ಈ ಉದ್ಯಮಿಗಳಿಂದ ಉದ್ಯೋಗವಕಾಶವು ಸೃಷ್ಠಿಯಾಗಿದೆ. ಉದ್ಯೋಗದ ಸೃಷ್ಠಿಯು ಆರ್ಥಿಕಾಭಿವೃದ್ಧಿಗೆ ಪೂರಕ

ಅಂಶವಾಗಿದೆ. ಪ್ರವಾಸೀ ಸ್ಥಳಗಳಲ್ಲಿರುವ ಸಣ್ಣ ಅಧೀನ ಉದ್ದಿಮೆಗಳು ಕೈಗಾರಿಕಾಭಿವೃದ್ಧಿಗೆ ಪೂರಕವಾಗಿವೆ. ಪ್ರವಾಸೋದ್ಯಮದ ಆದಾಯವು ಆರ್ಥಿಕಾಭಿವೃದ್ಧಿಯ ಏರುಗತಿಗೆ ಕಾರಣವಾಗಿದೆ. ಪ್ರವಾಸೋದ್ಯಮವು ದೇಶೀಯ ಮತ್ತು ಅಂತರ್‌ದೇಶೀಯವಾಗಿ ಆರ್ಥಿಕಾಭಿವೃದ್ಧಿಗೆ ಸಹಾಯಕಾರಿಯಾಗುವ ಅಂಶವಾಗಿದೆ.

ವಿವಿಧ ಪ್ರವಾಸಿಗರು ದೇಶೀಯ ಮತ್ತು ಅಂತರ್ ದೇಶೀಯವಾಗಿ ವಿದೇಶೀ ವಿನಿಮಯದ ಗಳಿಕೆಗೆ ಕಾರಣರಾಗುತ್ತಾರೆ. ಪ್ರವಾಸೋದ್ಯಮದಿಂದ ಉದ್ಯಮದಾರರು ಗಳಿಸಿದ ಆದಾಯದಿಂದ ಅವರ ತಲಾ ಆದಾಯ ಹೆಚ್ಚುತ್ತದೆ. ತಲಾ ಆದಾಯದ ಹೆಚ್ಚಳದಿಂದ ಸ್ವಾಭಾವಿಕವಾಗಿ ರಾಷ್ಟ್ರೀಯ ಆದಾಯ ಹೆಚ್ಚಾಗುತ್ತದೆ. ಪ್ರವಾಸಿಗರಿಂದ ಪ್ರವಾಸಿ ಸ್ಥಳಗಳಲ್ಲಿ ಸುರಿಯಲ್ಪಟ್ಟು ಅಥವಾ ವಂಚನೆ ಮಾಡಲ್ಪಟ್ಟ ಹಣದಿಂದ ಉದ್ಯಮದಾರರ ಆದಾಯ ಹೆಚ್ಚಾಗಿ ಆರ್ಥಿಕತೆಯ ಅಭಿವೃದ್ಧಿಗೆ ಕಾರಣವಾಗುತ್ತದೆ. ಹೆಚ್ಚಿದ ಉದ್ಯೋಗಾವಕಾಶಗಳು ಆರ್ಥಿಕಾಭಿವೃದ್ಧಿಯನ್ನು ಉಂಟುಮಾಡುತ್ತದೆ. ಈ ಸೃಷ್ಠಿಯಾದ ಉದ್ಯೋಗ ಅವಕಾಶಗಳು ಪ್ರವಾಸೋದ್ಯಮದ ಮೂಲಕ ಆರ್ಥಿಕಾಭಿವೃದ್ಧಿಯ ಮೇಲೆ ಆಗುವ ಪ್ರತ್ಯಕ್ಷ ಅಥವಾ ನೇರ ಪರಿಣಾಮವಾಗಿದೆ. ಪರೋಕ್ಷ ಪರಿಣಾಮವಾಗಿ ಪ್ರವಾಸೀ ಕೇಂದ್ರಗಳಲ್ಲಿ ಅಸಂಖ್ಯಾತ ಸಣ್ಣ ಪುಟ್ಟ ವ್ಯಾಪಾರಗಳು ತಲೆದೋರುವುದರಿಂದ ಅವುಗಳ ನಡುವೆ ಸ್ಪರ್ಧೆಯೂ ಏರ್ಪಡುತ್ತದೆ. ಈ ಪರಿಣಾಮವು ಪ್ರವಾಸೋದ್ಯಮದ ಪರೋಕ್ಷ ಪರಿಣಾಮವಾಗಿದೆ. ಉದ್ಯೋಗಾವಕಾಶಗಳು ಹೆಚ್ಚಿದಾಗ ಭೂಮಿ, ಕೂಲಿ, ಬಂಡವಾಳ, ಉದ್ಯಮದಾರ ಬೇಡಿಕೆ ಕೂಡಾ ಹೆಚ್ಚಾಗುತ್ತದೆ. ಇದರಿಂದ ಉತ್ಪಾದನಾಂಗಗಳೂ ಏರತೊಡಗುತ್ತದೆ. ಉತ್ಪಾದನಾಂಗಗಳ ಏರುವಿಕೆಯಿಂದ ಯಾವುದೇ ಆರ್ಥಿಕತೆಯು ಅಭಿವೃದ್ಧಿ ಹೊಂದಲು ಸಾಧ್ಯ. ಹೀಗೆ ಪ್ರವಾಸೋದ್ಯಮ ಅರ್ಥಿಕಾಭಿವೃದ್ಧಿ ಮೇಲೆ ಅಥವಾ ಒಂದು ದೇಶದ ಅಭಿವೃದ್ಧಿಯ ಮೇಲೆ ನೇರ ಪರಿಣಾಮ ಬೀರುತ್ತದೆ.

ಪ್ರವಾಸೋದ್ಯಮದ ಸಾಮಾಜಿಕ ಆರ್ಥಿಕ ಮತ್ತು ಆರ್ಥಿಕ ಪರಿಸರಾತ್ಮಕ ಪರಿಣಾಮವನ್ನು ಅಧ್ಯಯನ ಮಾಡುವಾಗ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಪ್ರವಾಸೋದ್ಯಮ ಒಂದು ಆರ್ಥಿಕ ಮತ್ತು ಕೈಗಾರಿಕಾ ಅಭಿವೃದ್ಧಿ ಚಟುವಟಿಕೆ ಇದರಲ್ಲಿ ಅನೇಕ ವ್ಯಕ್ತಿಗಳು, ನಿಗಮಗಳು, ಸಂಘ ಸಂಸ್ಥೆಗಳು ಪ್ರತ್ಯಕ್ಷವಾಗಿ ಪಾಲು ಪಡೆದಿದೆ ಆರ್ಥಿಕವಾಗಿ ಇವುಗಳು, ಆದಾಯ ಮೂಲ, ಉದ್ಯೋಗವನ್ನು ಒದಗಿಸುತ್ತದೆ. ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಯು

ಪ್ರವಾಸೋದ್ಯಮದಿಂದ ಸಾಧ್ಯವಾಗಿದೆ. ಇವೆಲ್ಲವುಗಳು ಪ್ರವಾಸೋದ್ಯಮದ ಅಭಿವೃದ್ಧಿಗೆ ಬಲವಾಗಿ ಕಾರಣವಾಗಿದೆ.

ಪ್ರವಾಸೋದ್ಯಮವನ್ನು ಅತಿಥ್ಯದ ಉದ್ಯಮ ಎಂದೂ ಕರೆಯಲಾಗುತ್ತದೆ. ಇದನ್ನು ತೃತೀಯ ರಂಗದ ಉದ್ಯಮ ಎಂದೂ ಕರೆಯಲಾಗುತ್ತದೆ. ಭಾರತದ ಆರ್ಥಿಕತೆಗೆ ತೃತೀಯ ರಂಗದ ಕೊಡುಗೆ ಅದರಲ್ಲಿಯೂ ಪ್ರವಾಸೋದ್ಯಮದ ಕೊಡುಗೆ ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿದೆ. ಒಟ್ಟು ರಾಷ್ಟ್ರೀಯ ಉತ್ಪನ್ನದ ದರ ಪ್ರವಾಸೋದ್ಯಮದಿಂದಾಗಿ ಹೆಚ್ಚಳವಾಗಿದೆ. ಸೇವಾಕ್ಷೇತ್ರಗಳು ಒಟ್ಟು ರಾಷ್ಟ್ರೀಯ ಉತ್ಪನ್ನದ ಅಭಿವೃದ್ಧಿಗೆ ಅಮೋಘವಾದ ಕೊಡುಗೆಯನ್ನು ನೀಡಿವೆ. ಭಾರತದ ತೃತೀಯ ಸೇವಾ ರಂಗವು ಒಟ್ಟು ರಾಷ್ಟ್ರೀಯ ಉತ್ಪನ್ನದ ೫% ಬೆಳವಣಿಗೆ ಕಾರಣವಾಗಿದೆ. ಕೃಷಿ ಮತ್ತು ಅದಕ್ಕೆ ಸಂಬಂಧಿಸಿದ ಚಟುವಟಿಕೆ ಒಟ್ಟು ರಾಷ್ಟ್ರೀಯ ಉತ್ಪನ್ನದ ೨೫% ಹೆಚ್ಚಳಿಕ್ಕೆ ಕಾರಣವಾಗಿವೆ. ಕೈಗಾರಿಕೆಗಳು ಒಟ್ಟು ರಾಷ್ಟ್ರೀಯ ಉತ್ಪನ್ನದ ಅಭಿವೃದ್ಧಿಯಲ್ಲಿ ೩೪% ಪಾಲನ್ನು ಹೊಂದಿವೆ. ಆದರೆ ಪ್ರತೀ ವರ್ಷವು ಒಟ್ಟು ರಾಷ್ಟ್ರೀಯ ಉತ್ಪನ್ನದ ದರದಲ್ಲಿ ಪ್ರವಾಸೋದ್ಯಮದಿಂದಾಗಿ ಏರುವಿಕೆ ಕಾಣುತ್ತಿದೆ.

ವಿದೇಶೀ ವಿನಿಮಯ ಗಳಿಕೆ

ಪ್ರವಾಸೋದ್ಯಮದಿಂದ ಆದಾಯಗಳಿಕೆ ಭಾರತದ ಆರ್ಥಿಕಾಭಿವೃದ್ಧಿಯಲ್ಲಿ ಸಹಾಯವಾಗುವ ಒಂದು ಪರೋಕ್ಷ ಅಂಶವಾಗಿದೆ. ಪ್ರವಾಸೋದ್ಯಮವು ವಿಶಾಲವಾದ ಉತ್ಪಾದನಾ ಸಾಮರ್ಥ್ಯವನ್ನು ಹೊಂದಿರುವ ಉದ್ಯಮವಾಗಿದೆ. ಹೇಗಾದರೂ ಭಾರತ ದೇಶಕ್ಕೆ ಪ್ರವಾಸೋದ್ಯಮದ ಆದಾಯವು ಇತರ ಅಭಿವೃದ್ಧಿ ಹೊಂದಿದ ದೇಶಗಳಿಗೆ ಹೋಲಿಸಿದರೆ ತುಂಬಾ ಕಡಿಮೆಯಾಗಿದೆ.

ಪ್ರವಾಸೋದ್ಯವನ್ನು 'ಅತಿಥ್ಯದ ಕೈಗಾರಿಕೆ' ಎಂದೂ ಕರೆಯುತ್ತಾರೆ. ಯಾಕೆಂದರೆ ಈ ಉದ್ಯಮದಲ್ಲಿ ಪ್ರವಾಸಿಗರಿಗೆ ಆತಿಥ್ಯ ನೀಡುವುದು ಮುಖ್ಯ ಕೆಲಸವಾಗಿದೆ. ಈ ಅತಿಥ್ಯ ನೀಡುವ ಉದ್ಯಮವನ್ನು ಮನರಂಜನಾ ಅರ್ಥಶಾಸ್ತ್ರದ ಒಂದು ಭಾಗವಾಗಿ ಪರಿಗಣಿಸಲಾಗಿದೆ. ಆದುದರಿಂದ ಪ್ರವಾಸೋದ್ಯಮವನ್ನು ತೃತೀಯ ರಂಗದ ಅಥವಾ ಸೇವಾ ಕ್ಷೇತ್ರದ ಉತ್ಪಾದನೆ ಎಂದು ಕರೆಯಲಾಗುತ್ತದೆ.

ಪ್ರವಾಸೋದ್ಯಮದ ಗಳಿಕೆಯ ಮೇಲೆ ಪರಿಣಾಮ ಬೀರುವ ಅಂಶಗಳು

ಅನೇಕ ಸೂಕ್ಷ್ಮ ಮತ್ತು ಸ್ಥೂಲ ಅಂಶಗಳು ದೇಶದ ಪ್ರವಾಸೋದ್ಯಮದಿಂದಾಗುವ ಆದಾಯದ ಮೇಲೆ ಪರಿಣಾಮ ಬೀರುತ್ತವೆ. ಅವುಗಳಲ್ಲಿ ಪ್ರಮುಖವಾದ ಅಂಶಗಳೆಂದರೆ

- ಒಟ್ಟು ಆಗಮಿಸಿದ ಪ್ರವಾಸಿಗರ ಸಂಖ್ಯೆ
- ಅತಿಥೇಯ ರಾಷ್ಟ್ರಗಳಲ್ಲಿ ಪ್ರವಾಸಿಗರು ಕಳೆದ ಒಟ್ಟು ದಿನಗಳ ಸಂಖ್ಯೆ
- ಪ್ರವಾಸಿಗರ ಒಟ್ಟು ಮಾಡಿದ ಮೊತ್ತ
- ಪ್ರವಾಸಿಗರ ಒಟ್ಟು ತಲಾ ವೆಚ್ಚ

ಸಂದರ್ಶಿಸಿದ ಒಟ್ಟು ಪ್ರವಾಸಿಗರ ಸಂಖ್ಯೆ ಮತ್ತು ಒಟ್ಟು ವಿನಿಮಯ ಗಳಿಕೆ ಈ ಎರಡೂ ಅಂಶಗಳೂ ಒಂದಕ್ಕೊಂದು ನೇರ ಸಂಬಂಧವನ್ನು ಹೊಂದಿವೆ. ಇದರ ಜೊತೆಗೆ ಪ್ರವಾಸಿಗರು ಕಳೆದ ದಿನಗಳನ್ನು ಕೂಡಾ ಆದಾಯದ ಗಳಿಕೆಯನ್ನು ಲೆಕ್ಕಾ ಹಾಕುವಾಗ ಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಹೆಚ್ಚು ಖರ್ಚು ಮಾಡುವ ಪ್ರವಾಸಿಗರ ಸಂಖ್ಯೆಯನ್ನು ಕೂಡಾ ಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಪ್ರತಿ ಪ್ರವಾಸಿಗರ ತಲಾ ವೆಚ್ಚ ಮಾಡುವ ಪಾಯಥ್ಯದ ಮೇಲೆ ಪ್ರವಾಸೋದ್ಯಮದ ಗಳಿಕೆಯ ಅಂಶವನ್ನು ಅಂದಾಜು ಮಾಡಲಾಗುತ್ತದೆ. ಭಾರತದಲ್ಲಿ ಪ್ರವಾಸಿಗರ ತಲಾ ವೆಚ್ಚವು ವಿದೇಶಗಳಿಗೆ ಹೋಲಿಸಿದರೆ ತುಂಬಾ ಕಡಿಮೆಯಾಗಿರುತ್ತದೆ. ಏಷ್ಯಾ ದೇಶಗಳಲ್ಲಿ ತಲಾ ವೆಚ್ಚವು ಅಧಿಕವಾಗುತ್ತದೆ.

ಪ್ರವಾಸೋದ್ಯಮವು ಆರ್ಥಿಕಾಭಿವೃದ್ಧಿಗೆ ಮಹತ್ತರವಾದ ಕೊಡುಗೆಯನ್ನು ನೀಡುತ್ತದೆ. ಪ್ರವಾಸೋದ್ಯಮದಿಂದ ಗಳಿಸಿದ ಆದಾಯವು ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿ ಹೊಂದುತ್ತಿರುವ, ಅನಭಿವೃದ್ಧಿ ಹೊಂದಿದ ದೇಶಗಳು ಹೇಗೆ ಮೂರು ರೀತಿಯ ಆರ್ಥಿಕತೆಗೂ ಒಂದು ಬೆನ್ನೆಲುಬಾಗಿದೆ. ಈ ಆದಾಯದ ಮುಖಾಂತರ ಯಾವುದೇ ದೇಶದ ಆರ್ಥಿಕತೆಯು ಅಭಿವೃದ್ಧಿ ಹೊಂದಲು ಸಾಧ್ಯವಾಗಿದೆ. ಆದರೆ ಈಗಿನ ಪ್ರಸ್ತುತ ಆರ್ಥಿಕಾಭಿವೃದ್ಧಿಯನ್ನು ಗಮನಿಸುವಾಗ ಅಭಿವೃದ್ಧಿ ಹೊಂದಿದ ದೇಶಗಳ ಆದಾಯವು ಅಭಿವೃದ್ದಿ ಹೊಂದುತ್ತಿರುವ ದೇಶಗಳಿಂದ ಹೆಚ್ಚಾಗಿವೆ.

ಭಾರತದಲ್ಲಿ ಪ್ರವಾಸೋದ್ಯಮವು ಒಂದು ಬೃಹತ್ ಉದ್ಯಮವಾಗಿ ರೂಪುಗೊಂಡಿದೆ. ಭಾರತದ ಪ್ರವಾಸೋದ್ಯಮ ಆದಾಯವು ಅಭಿವೃದ್ಧಿ ಹೊಂದುತ್ತಾ ಇದೆ. ಪ್ರವಾಸೋದ್ಯಮವು ಈಗ ಇನೇ ದೊಡ್ಡ ರಫ್ತು ಉದ್ಯಮವಾಗಿ ಬೆಳೆಯುತ್ತಿದೆ. ಆಭರಣಗಳ ರಫ್ತು, ಬಟ್ಟೆಗಳ ರಫ್ತು ಇವು ಪ್ರಥಮ ಮತ್ತು ದ್ವಿತೀಯ ದೊಡ್ಡ ರಫ್ತು ಉದ್ಯಮವಾಗಿದೆ.

ದೇಶೀಯ ಪ್ರವಾಸೋದ್ಯಮದ ಗಳಿಕೆ

ದೇಶೀಯ ಪ್ರವಾಸೋದ್ಯಮದ ಗಳಿಕೆಯು ಅಂತರ್ ರಾಷ್ಟ್ರೀಯ ಗಳಿಕೆಯಷ್ಟೇ ಪ್ರಾಮುಖ್ಯತೆಯನ್ನು ಪಡೆದಿದೆ. ದೇಶೀಯ ಪ್ರವಾಸೋದ್ಯಮವು ಹೆಚ್ಚಾಗಿ ಪ್ರತಿಯೊಬ್ಬ ಅನುಭವಿಸಿರುವಂಥದ್ದಾಗಿರುತ್ತದೆ. ದೇಶೀಯ ಪ್ರವಾಸೋದ್ಯಮವು ಅಂತರ್ ರಾಷ್ಟ್ರೀಯ ಪ್ರವಾಸೋದ್ಯಮಕ್ಕಿಂತ ಹೆಚ್ಚಾಗಿ ಆದಾಯ ಮತ್ತು ಉದ್ಯೋಗಾವಾಕಾಶವನ್ನು ಸೃಷ್ಟಿ ಮಾಡುತ್ತವೆ. ಆದುದರಿಂದ ದೇಶೀಯ ಪ್ರವಾಸೋದ್ಯಮವು ಆರ್ಥಿಕಾಭಿವೃದ್ಧಿಯಲ್ಲಿ ಮುಖ್ಯವಾದ ಪಾತ್ರ ವಹಿಸುತ್ತದೆ. ದೇಶೀಯ ಪ್ರವಾಸೋದ್ಯಮದ ಗಳಿಕೆಯನ್ನು ಅಂದಾಜು ಮಾಡಲು ಪ್ರತಿಯೊಬ್ಬ ಪ್ರವಾಸಿಗನು ಕಳೆದ ಒಟ್ಟು ಪ್ರವಾಸೀ ದಿನಗಳು, ತಲಾ ಖರ್ಚು ಮತ್ತು ದೇಶೀ ಪ್ರವಾಸಿಗರ ಸಂಖ್ಯೆಯ ಅಗತ್ಯವಿದೆ.

ಪ್ರವಾಸಿಗರು ಪ್ರವಾಸೀ ಸ್ಥಳಗಳಲ್ಲಿ ಖರ್ಚು ಮಾಡಿದ ದುಡ್ಡು ಅಲ್ಲಿರುವ ವಿವಿಧ ವ್ಯವಹಾರೀ ಜನರ ನಡುವೆ ವಿವಿಧ ರೀತಿಯಲ್ಲಿ ಹಂಚಿ ಹೋಗುತ್ತದೆ. ಪ್ರವಾಸಿಗರು ವಾಸ್ತವ್ಯ, ಸಾರಿಗೆ, ಆಹಾರ, ಮನರಂಜನೆ ಮುಂತಾದವುಗಳಿಗೆ ಖರ್ಚು ಮಾಡುತ್ತಾರೆ. ಈ ಖರ್ಚು ಮಾಡಿದ ಮೊತ್ತವು ಪ್ರವಾಸೀ ಸಂಸ್ಥೆಗಳವರಿಗೆ ಮತ್ತು ಪ್ಯಾಕೇಜ್ ಪ್ರವಾಸ ಏರ್ಪಡಿಸುವವರನ್ನು ಸೇರಿರುತ್ತದೆ. ಹೀಗೆ ವಿವಿಧ ರೀತಿಯ ಉದ್ದೇಶಗಳಿಗಾಗಿ ಖರ್ಚು ಮಾಡಿದ ಹಣವು ವಿವಿಧ ಜನರಿಗೆ ಆದಾಯವಾಗಿರುತ್ತದೆ.

ಪ್ರವಾಸೋದ್ಯಮವು ಆರ್ಥಿಕವಾಗಿ ಒಂದು ದೇಶಕ್ಕೆ ಲಾಭವನ್ನು ತರುತ್ತದೋ ಎಂಬ ಅಂಶವು ವಿವಿಧ ಅಂಶಗಳ ಮೇಲೆ ಹೊಂದಿಕೊಂಡಿದೆ. ಅವುಗಳೆಂದರೆ :

- ಆ ದೇಶವು ಪ್ರವಾಸೋದ್ಯಮದಿಂದ ಗಳಿಸಿದ ಆದಾಯವನ್ನು ದೇಶೀಯವಾಗಿ ಖರ್ಚು ಮಾಡಿದೆಯೋ ಇಲ್ಲವೋ?
- ಪ್ರವಾಸೋದ್ಯಮದ ಬೇಡಿಕೆಯನ್ನು ಪೂರೈಸಲು ಪ್ರವಾಸೀ ಸ್ಥಳಗಳ ಮೂಲಭೂತ ಅವಶ್ಯಕತೆಗಳ ಪೂರೈಕೆಗಾಗಿ ಗಳಿಸಿದ ಆದಾಯವನ್ನು ವ್ಯಯಿಸಲಾಗಿದೆಯೇ?
- ಸ್ಥಳೀಯ ಜನರು ಈ ಕಿರು ಉದ್ಯಮಗಳಲ್ಲಿ ಭಾಗಿಯಾಗಿದ್ದಾರೆಯೇ?
- ಸ್ಥಳೀಯ ಕರೆನ್ಸಿಯ ದರವನ್ನು ಪ್ರವಾಸಿಗರ ಕರೆನ್ಸಿಯ ದರಕ್ಕೆ ಹೇಗೆ ಬದಲಾಯಿಸಲಾಗಿದೆ?

- ತೆರಿಗೆಗಳು ಎಷ್ಟು ದುಬಾರಿಯಾಗಿವೆ?
- ಇತರ ಕಿರು ಉದ್ಯಮಗಳು ಇವುಗಳಿಂದ ಪ್ರಯೋಜನ ಪಡೆದಿವೆಯಾ?

ಈ ಮೇಲಿನ ಅಂಶಗಳು ಪ್ರವಾಸೋದ್ಯಮದಿಂದಾದ ಅಭಿವೃದ್ಧಿಯನ್ನೇ ಉಲ್ಲೇಖಿಸುತ್ತದೆ. ಸರಕಾರವು ಈ ಪ್ರವಾಸಿಗರಿಂದ ತೆರಿಗೆಯನ್ನೇ ವಸೂಲು ಮಾಡುವ ಮೂಲಕ, ವಿದೇಶೀ ವಿನಿಮಯದ ಮೂಲಕ ಮತ್ತು ಪ್ರವಾಸಿಗರಿಂದ ಸಂಗ್ರಹವಾದ ಹಣದ ಮೂಲಕ ತನ್ನ ಆದಾಯವನ್ನು ಈ ರೀತಿಯಲ್ಲಿ ಹೆಚ್ಚಿಸಿಕೊಳ್ಳುತ್ತದೆ.

ಪ್ರವಾಸೋದ್ಯಮ ಮತ್ತು ಉದ್ಯೋಗ ಸೃಷ್ಟಿ

ಪ್ರವಾಸೋದ್ಯಮದ ಅತ್ಯಂತ ಮಹತ್ತರವಾದ ಲಕ್ಷಣವೆಂದರೆ ಬೃಹತ್ ಪ್ರಮಾಣದ ಉದ್ಯೋಗದ ಸೃಷ್ಟಿ. ಪ್ರವಾಸೋದ್ಯಮದಿಂದಾಗಿ ಅನೇಕ ನಿರುದ್ಯೋಗಿಗಳು ಉದ್ಯೋಗವನ್ನು ಪಡೆದುಕೊಂಡಿದ್ದಾರೆ. ಈ ಉದ್ಯಮದ ಅಭಿವೃದ್ಧಿಯಿಂದಾಗಿ ಅನೇಕ ಮಹಿಳೆಯರು, ಮಕ್ಕಳು ಮತ್ತು ಉತ್ಸಾಹಿ ಯುವಕರು ಉದ್ಯೋಗವನ್ನು ಕಂಡುಕೊಂಡಿದ್ದಾರೆ. ಸ್ವ ಉದ್ಯೋಗದಿಂದಾಗಿ ನಿರುದ್ಯೋಗ ಸಮಸ್ಯೆಯನ್ನು ಪ್ರವಾಸೋದ್ಯಮ ಹೋಗಲಾಡಿಸುವಲ್ಲಿ ಸಹಾಯಕವಾಗಿದೆ. ಬಂಡವಾಳ ಸಂಚಯನದಲ್ಲಿ ಪ್ರವಾಸೋದ್ಯಮದ ಪಾಲಿನಲ್ಲಿ ಹೆಚ್ಚಳವಾಗಿದೆ, ಪ್ರತಿಯೊಂದು ದೇಶವು ಅದು ಅಭಿವೃದ್ಧಿ ಹೊಂದಿರುವ ದೇಶವಾಗಿರಬಹುದು ಅಥವಾ ಅಭಿವೃದ್ಧಿ ದೇಶವಾಗಿರಬಹುದು ಪ್ರತೀ ವರ್ಷವೂ ತನ್ನ ಬಜೆಟಿನಲ್ಲಿ ಪ್ರವಾಸೋದ್ಯಮದ ಅಭಿವೃದ್ಧಿಗಾಗಿ ವ್ಯಯಿಸುತ್ತಿದೆ. ಯಾವುದೇ ದೇಶವೂ ಪ್ರವಾಸೋದ್ಯಮವನ್ನು ನಿರ್ಲಕ್ಷಿಸಿಲ್ಲ ಹೋಟೇಲು ಮತ್ತು ರೆಸ್ಟೋರೆಂಟ್ ಗಳಲ್ಲಿ ಅನೇಕ ಉದ್ಯೋಗಾವಕಾಶವು ಪ್ರವಾಸೋದ್ಯಮದ ಅಭಿವೃದ್ಧಿಯಿಂದಾಗಿ ಸೃಷ್ಟಿಯಾಗಿದೆ. ಕಾರ್ಮಿಕರಿಗೆ ಬೇಡಿಕೆ ಮತ್ತು ಉದ್ಯೋಗಾವಕಾಶವು ಯಾವುದೇ ದೇಶದ ಅಭಿವೃದ್ಧಿಗೆ ಪೂರಕವಾದ ಅಂಶವಾಗಿದೆ.

ಪ್ರವಾಸೋದ್ಯಮದ ಮುಖಾಂತರ ಸಮರ್ಥನೀಯ ಅಭಿವೃದ್ಧಿಯು ಮಾನವ ಅಭಿವೃದ್ಧಿ, ಬಡತನ ನಿರ್ಮೂಲನ, ಪರಿಸರ ಅಭಿವೃದ್ಧಿ, ಉದ್ಯೋಗ ಸೃಷ್ಟಿ, ಹಿಂದುಳಿದ ಪ್ರದೇಶಗಳಲ್ಲಿ ಉದ್ಯೋಗ ಸೃಷ್ಟಿ, ಮಹಿಳಾ ಅಭಿವೃದ್ಧಿ ಮುಂತಾದುವುಗಳ ಮೇಲೆ ಧನಾತ್ಮಕ ಪರಿಣಾಮವನ್ನು ಬೀರಿದೆ. ಆದ್ದರಿಂದ ಪ್ರವಾಸೋದ್ಯಮವು ಆರ್ಥಿಕ ಅಭಿವೃದ್ಧಿ ಮಾತ್ರವಲ್ಲದೆ ಆರ್ಥಿಕಾ ಬೆಳವಣಿಗೆಗೂ ಕಾರಣವಾಗಿದೆ.

ಪ್ರವಾಸೋದ್ಯಮವು ಈ ಕೆಳಗಿನ ಕಿರು ಉದ್ಯಮಗಳಲ್ಲಿ ಉದ್ಯೋಗ ಸೃಷ್ಟಿಸಿವೆ;

೧. ಹೋಟೆಲ್, ಗೆಸ್ಟ್ ಹೌಸ್‌ಗಳು, ವಿರಾಮದ ಮನೆಗಳು, ಉಪಹಾರ ಗೃಹಗಳು, ಪಬ್ ಮತ್ತು ಕಾಫಿ ತಿಂಡಿ ಊಟಗಳ ಹೋಟೆಲುಗಳು.

೨. ಪ್ರವಾಸ ಮತ್ತು ಸಾರಿಗೆ ನಡೆಸುವ ಸಂಸ್ಥೆಗಳು–ರೈಲ್ವೆ ಟಿಕೆಟ್ ಮಾಡುವ ಸಂಸ್ಥೆಗಳು, ಬಸ್ ಮತ್ತು ವಿಮಾನ ಟಿಕೆಟ್ ಮಾಡುವ ಸಂಸ್ಥೆಗಳು ಸೇರಿವೆ.

೩. ಧಾರ್ಮಿಕ ಕೇಂದ್ರಗಳು, ಪ್ರಾಕೃತಿಕ ಉದ್ಯಾನವನಗಳು ಇಲ್ಲಿ ನಡೆಸಲ್ಪಡುವ ಉಪಹಾರ ಗೃಹಗಳು ಇತ್ಯಾದಿ.

ಈ ಉದ್ಯಮಗಳ ಮುಖಾಂತರ ಪ್ರವಾಸೋದ್ಯಮವು ಪ್ರತ್ಯಕ್ಷವಾ ಮತ್ತು ಪರೋಕ್ಷವಾಗು ಉದ್ಯೋಗಾವಕಾಶವನ್ನು ಸೃಷ್ಟಿಸಿದೆ. ವೃತ್ತಿ ಕೌಶಲವನ್ನು ಹೊಂದಿರದ ಜನರಿಗೂ ಸ್ವ-ಉದ್ಯೋಗ ಕೈಗೊಳ್ಳುವಲ್ಲಿ ನೆರವಾಗಿದೆ. ಈ ಉದ್ಯೋಗ ಸೃಷ್ಟಿಯು ಆರ್ಥಿಕ ಅಭಿವೃದ್ಧಿಗೆ ಪೂರಕವಾದ ಅಂಶವಾಗಿದೆ. ಈ ವೃತ್ತಿಗಳ ಮುಖಾಂತರ ಉದ್ಯೋಗಸ್ಥರಿಗೆ ಪ್ರವಾಸಿಗರ ಜೊತೆಗೆ ಮುಖಃತ ಭೇಟಿ ಸಾಧ್ಯವಾಗುತ್ತದೆ.

ವಸತಿ ಮತ್ತು ಆಹಾರೋದ್ಯಮದಲ್ಲಿರುವ ಉದ್ಯೋಗಾವಕಾಶಗಳು

ವಸತಿ	ಆಹಾರೋದ್ಯಮ
• ರಿಸೆಪ್‌ಶನ್ • ಬಾರ್ ಸರ್ವೀಸ್ • ಹೋಟೇಲ್ ಮೆನೇಜ್‌ಮೆಂಟ್	• ಕೇಟರಿಂಗ್ ಮೆನೇಜ್‌ಮೆಂಟ್ • ಆಹಾರ ತಯಾರಿಸುವಿಕೆ • ಆಹಾರ ಬಡಿಸುವಿಕೆ

ಟ್ರಾವೆಲ್ ಮತ್ತು ಸಾರಿಗೆ ಸಂಸ್ಥೆಗಳಲ್ಲಿ ಉದ್ಯೋಗವಕಾಶ

ಪ್ರವಾಸಿ	ಸಾರಿಗೆ
• ಪ್ರವಾಸೀ ಸಂಸ್ಥೆಗಳು • ಪ್ರವಾಸ ಏಜೆಂಟ್‌ಗಳು	• ವಾಯು ಸಾರಿಗೆ • ರೈಲು ಸಾರಿಗೆ ಕಂಪೆನಿಗಳು • ಶಿಪ್ಪಿಂಗ್ ಕಂಪೆನಿಗಳು

ಟೂರ್ ಅಪರೇಟರ್‌ಗಳು ಪ್ಯಾಕೇಜ್ ಟೂರ್ ನಡೆಸುವವರಾಗಿದ್ದು. ಪ್ರವಾಸಗಳನ್ನು ಸಂಘಟಿಸುವವರಾಗಿರುತ್ತಾರೆ.

ಟ್ರಾವೆಲ್ ಏಜೆಂಟರು ಪ್ರವಾಸಗಳನ್ನು ಏರ್ಪಡಿಸುವ ಮದ್ಯವರ್ತಿಗಳಾಗಿರುತ್ತಾರೆ.

ಸಾರಿಗೆಯಲ್ಲಿರುವ ಉದ್ಯೋಗವಕಾಶಗಳು:

ಸಾರಿಗೆಯ ವಿಧ	ಕೆಲಸಕ್ಕೆ ನೇಮಿಸುವ ಸಂಸ್ಥೆಗಳು	ಕೆಲಸದ ನಮೂನೆ
ರಸ್ತೆ	• ಕಂಪೆನಿಗಳು • ಕಾರ್ ಬಾಡಿಗೆ ಕಂಪೆನಿಗಳು	ಡ್ರೈವರ್‌ಗಳು, ಟೂರ್ ಗೈಡ್‌ಗಳು, ಮೆಕ್ಯಾನಿಕ್
ರೈಲು	• ರಾಷ್ಟ್ರೀಯ ರೈಲ್ವೇ	ಡ್ರೈವರ್ಸ್, ಟೆಕ್‌ನಿಕಲ್ ಸ್ಟಾಫ್, ಟಿಕೆಟ್ ಮಾರಟಗಾರರು
ವಾಯುಪಡೆ	• ವಾಯು ಸಾರಿಗೆ ಕಂಪೆನಿಗಳು • ವಿಮಾನ ನಿಲ್ದಾಣಗಳು	ಪೈಲಟ್‌ಗಳು, ಏರ್‌ಪೋರ್ಟ್ ಸಿಬ್ಬಂದಿ, ಕ್ಯಾಬಿನ್ ಸಿಬ್ಬಂದಿಗಳು.
ಜಲ ಸಾರಿಗೆ	• ಕ್ರೂಸ್ ಬೋಟ್ ಕಂಪೆನಿಗಳು	ಮೆಡಿಕಲ್ ಆಫಿಸರ್, ಆಫೀಸ್ ಸಿಬ್ಬಂದಿಗಳು.

ವಿರಾಮ ಮತ್ತು ಪ್ರವಾಸಿಗರ ಆಕರ್ಷಣೀಯ ಸ್ಥಳಗಳಲ್ಲಿ ಇರುವ ಉದ್ಯೋಗಾವಕಾಶಗಳು

ಪ್ರವಾಸಿಗರ ಆಕರ್ಷಣೀಯ ಸ್ಥಳಗಳು	ವಿರಾಮದ ಆಕರ್ಷಣೆಗಳು
• ಉದ್ಯಾನವನಗಳು • ಮೃಗಾಲಯಗಳು • ಮನೆಗಳು • ಪ್ರಾಚೀನ ಸ್ಥಳಗಳು	ವಿರಾಮದ ಮನೆಗಳು ಈಜು ಕೊಳಗಳು ಆರೋಗ್ಯ ಧಾಮಗಳು ಟೆನ್ನಿಸ್ ಕೋರ್ಟ್‌ಗಳು, ಗಾಲ್ಫ್ ಕೋರ್ಟ್‌ಗಳು

ಪ್ರವಾಸಿಗರ ಆಕರ್ಷಣೀಯ ಸ್ಥಳಗಳಲ್ಲಿ ಕೆಲಸ ಮಾಡುವ ಜನರಲ್ಲಿ ಉದ್ಯಾನವನಗಳನ್ನೇ ನೋಡಿಕೊಳ್ಳುವವರು, ವಿವಿಧ ಮನರಂಜನಾ ರೈಡ್ ಗಳನ್ನು ನೋಡಿಕೊಳ್ಳುವವರು, ಗೈಡ್‌ಗಳು, ಸೆಕ್ಯೂರಿಟಿ ಸಿಬ್ಬಂದಿಗಳು ಸೇರಿರುತ್ತಾರೆ.

ಕ್ರೀಡೆ ಮತ್ತು ವಿರಾಮ ಕ್ಷೇತ್ರದಲ್ಲಿ ದೈಹಿಕ ತರಬೇತಿದಾರರು, ಜೀವ ರಕ್ಷಕರು, ಕೋಟ್‌ಗಳು ನೋಡಿಕೊಳ್ಳುವವರು, ರಿಸೆಪ್‌ಶನಿಸ್ಟ್‌ಗಳು, ಸೌಂದರ್ಯ ವರ್ಧಕಿಯರು ಮುಂತಾದ ಉದ್ಯೋಗಳಿಗೆ ಬೇಡಿಕೆ ಹೆಚ್ಚಾಗಿರುತ್ತದೆ.

ಐತಿಹಾಸಿಕ ಸ್ಥಳಗಳಲ್ಲಿ ಉದ್ಯೋಗಾವಕಾಶಗಳು

ಸಂಗ್ರಹಾಲಯಗಳಲ್ಲಿ ಸಹಾಯಕರಾಗಿ, ಚರ್ಚ್‌ಗಳಲ್ಲಿ ಮೇಲ್ವಿಚಾರಕರಾಗಿ ವಸ್ತು ಸಂಗ್ರಹಾಲಯಗಳಲ್ಲಿ ಉಸ್ತುವಾರಿ ನೋಡಿಕೊಳ್ಳುವವರಾಗಿ ದುಡಿಯಲು ವಿಪುಲ ಉದ್ಯೋಗವಕಾಶಗಳಿರುತ್ತದೆ. ಇವುಗಳ ಜೊತೆಗೆ ಪ್ರವಾಸೀ ಕೇಂದ್ರಗಳಲ್ಲಿ ಸ್ಮರಣಿಕೆಗಳನ್ನು ಮಾರುವವರಾಗಿ, ಟಿಕೇಟ್ ಕೊಡುವವರಾಗಿ, ಗೈಡ್‌ಗಳಾಗಿ, ಅಮೂಲ್ಯ ವಸ್ತುಗಳ ರಕ್ಷಕರಾಗಿ, ಸವೆದು ಹೋದ ಸ್ಥಳಗಳಲ್ಲಿ ಕಾಲುದಾರಿ ಪುನರ್ ಸ್ಥಾಪಿಸುವರಾಗಿ ಅನೇಕ ಉದ್ಯೋಗವಕಾಶಗಳನ್ನು ಪ್ರವಾಸೋದ್ಯಮವು ಸೃಷ್ಟಿಸಿದೆ.

ಪ್ರವಾಸೀ ಕೇಂದ್ರಗಳಿಗೆ ಸಂದರ್ಶಿಸುವ ಪ್ರವಾಸಿಗರ ಸಂಖ್ಯೆಯ ಮೇಲೆ ಉದ್ಯೋಗಾವಕಾಶಗಳು ಅವಲಂಬಿಸಿದೆ. ಪ್ರವಾಸೀ ಕೇಂದ್ರಗಳಲ್ಲಿ ಅಧಿಕ ಸಂಖ್ಯೆಯ ಪ್ರವಾಸಿಗರು ಸಂದರ್ಶಿಸುತ್ತಿದ್ದಾರೆ. ಅಲ್ಲಿ ಅನೇಕ ಉದ್ಯೋಗವಕಾಶ ಇರುತ್ತದೆ. ವ್ಯವಹಾರ ಅಧಿಕ ಸಂಖ್ಯೆಯಲ್ಲಿ ಪ್ರವಾಸಿಗರು ಭೇಟಿ ನೀಡಿದರೆ ಪ್ರವಾಸೀ ಕೇಂದ್ರಗಳಲ್ಲಿ ಸಿಗುವಂಥಹ ಸೌಲಭ್ಯಗಳನ್ನು ಹೆಚ್ಚಿಸಬೇಕಾಗುತ್ತಿದೆ. ಸೌಲಭ್ಯಗಳು ಹೆಚ್ಚಾಗುವಾಗ ಅದರ ಜೊತೆಗೆ ಉದ್ಯೋಗಾವಕಗಳೂ ಕೂಡಾ ಹೆಚ್ಚುತ್ತಿದೆ. ಆದ್ದರಿಂದ ಪ್ರವಾಸಿಗರೂ ಹೆಚ್ಚಾದಷ್ಟು ಉದ್ಯೋಗವಕಾಶಗಳೂ ಹೆಚ್ಚುತ್ತವೆ.

ಋತುಮಾನಿಕ ಉದ್ಯೋಗ

ಹಲವು ಪ್ರವಾಸೀ ಕೇಂದ್ರಗಳು ಕೆಲವೊಂದು ಋತುಗಳಲ್ಲಿ ಮಾತ್ರ ಹೆಚ್ಚು ಪ್ರವಾಸಿಗರನ್ನು ಆಕರ್ಷಿಸುತ್ತವೆ. ಬೇಸಿಗೆ ಕಾಲದಲ್ಲಿ ಸಮುದ್ರ ತೀರಗಳು ಹೆಚ್ಚಾಗಿ ಪ್ರವಾಸಿಗರನ್ನು ಆಕರ್ಷಿಸುತ್ತದೆ. ಮಳೆಗಾಲದ ಸಮಯದಲ್ಲಿ ಉದ್ಯಾನವನಗಳು, ಮೃಗಾಲಯಗಳು, ಸಮುದ್ರ ತಟಗಳು, ಧಾರ್ಮಿಕ ಪ್ರವಾಸೀ ಕೇಂದ್ರಗಳಲ್ಲಿ ಪ್ರವಾಸಿಗಳ ಸಂಖ್ಯೆಯು ಅತ್ಯಂತ ಕಡಿಮೆಯಾಗಿರುತ್ತದೆ. ಈ ಋತುಮಾನಕ್ಕೆ ಮತ್ತು ಪ್ರವಾಸಿಗರ ಭೇಟಿಗೆ ಅನುಗುಣವಾಗಿ ಉದ್ಯೋಗಾವಕಾಶದಲ್ಲಿ ಮತ್ತು ಸರಕಾರದ ಆದಾಯ ಗಳಿಕೆಯಲ್ಲಿ ವ್ಯತ್ಯಾಸವಾಗುತ್ತದೆ.

ಅಧಿಕ ಸಂಖ್ಯೆಯ ಪ್ರವಾಸೀ ಸ್ಥಳಗಳಲ್ಲಿ ಮತ್ತು ಬೇಸಿಗೆ ಸಮಯಗಳಲ್ಲಿ ಹೆಚ್ಚು ಸಂಖ್ಯೆಯಲ್ಲಿ ಕಾರ್ಮಿಕರನ್ನು ಕೆಲಸಕ್ಕೆ ತೆಗೆದುಕೊಳ್ಳುತ್ತಾರೆ. ಮಳೆಗಾಲದಲ್ಲಿ ತನ್ನಿಂದ ತಾನಾಗಿಯೇ ಪ್ರವಾಸಿಗರ ಸಂಖ್ಯೆ ಕಡಿಮೆಯಾಗುವಾಗ ಉದ್ಯೋಗದ ಬೇಡಿಕೆಯನ್ನೆಲ್ಲಾ ಕೆಲಸವನ್ನು ಹೆಚ್ಚುವರಿ ಕೆಲಸಗಾರರು ಕಳೆದುಕೊಳ್ಳುತ್ತಾರೆ. ಹೇಗೆ ಋತುಮಾನಿಕ ನಿರುದ್ಯೋಗವು ಪ್ರವಾಸೋದ್ಯಮ ಕ್ಷೇತ್ರದಲ್ಲಿ ಸಾರ್ವತ್ರಿಕವಾಗಿ ಕಂಡುಬರುತ್ತದೆ.

ಪ್ರವಾಸೋದ್ಯಮ ಮತ್ತು ವಿದೇಶೀ ವಿನಿಮಯದ ಗಳಿಕೆ

ಆರ್ಥಿಕತೆಗೆ ಪ್ರವಾಸೋದ್ಯಮದ ಒಂದು ಮಹತ್ತರವಾದ ಕೊಡುಗೆ ಎಂದರೆ ವಿದೇಶೀ ವಿನಿಮಯ. ವಿದೇಶೀ ವಿನಿಮಯದ ದರ ಹೆಚ್ಚಾದಷ್ಟು ಆರ್ಥಿಕಾಭಿವೃದ್ಧಿಯ ದರ ಹೆಚ್ಚುತ್ತದೆ. ಅಭಿವೃದ್ಧಿ ಹೊಂದುತ್ತಿರುವ, ಅಭಿವೃದ್ಧಿ ಹೊಂದಿರದ ಮತ್ತು ಅಭಿವೃದ್ಧಿ ಹೊಂದಿದ ಮುಂತಾದ ಎಲ್ಲಾ ರೀತಿಯ ದೇಶಗಳಿಗೆ ಈ ಪ್ರವಾಸೋದ್ಯಮವು ಒಂದು ಬಳುವಳಿಯಾಗಿದೆ. ಈ ದೇಶಗಳಿಗೆ ಪ್ರವಾಸೋದ್ಯಮದಿಂದ ವಿದೇಶೀ ವಿನಿಮಯದ ಗಳಿಕೆ ಸಾಧ್ಯವಾಗುತ್ತದೆ. ಇದು ಒಂದು ಆದಾಯದ ಮೂಲವಾಗಿ ಪರಿಗಣಿಸಲ್ಪಟ್ಟಿದೆ. ಅಭಿವೃದ್ಧಿ ಹೊಂದಿದ ದೇಶಗಳಿಗೆ ಪ್ರವಾಸೋದ್ಯಮದ ಆದಾಯ ಶೇಕಾಡಾವಾರು ಹೆಚ್ಚು. ಈ ಪ್ರವಾಸೋದ್ಯಮದ ಆದಾಯಗಳು ಪಾವತಿ ಶಿಲ್ಕಿನ ಮೇಲೆ ಮಹತ್ತರವಾದ ಪರಿಣಾಮವನ್ನು ಬೀರುತ್ತದೆ. ಪ್ರವಾಸೋದ್ಯಮವು ಒಂದು ರಫ್ತು ಉದ್ಯಮವಾಘಿ ಕೂಡಾ ದೈತ್ಯಗಾತ್ರದಲ್ಲಿ ಬೆಳೆಯುತ್ತದೆ. ಪ್ರವಾಸೋದ್ಯಮವು ವಿದೇಶೀ ಗಳಿಕೆಯಲ್ಲಿ ೩ನೇ ಸ್ಥಾನವನ್ನು ಪಡೆದಿದೆ. ಪ್ರಥಮ ಮತ್ತು ದ್ವಿತೀಯ ಸ್ಥಾನವು ವಿದೇಶೀ ಗಳಿಕೆಯಲ್ಲಿ ಅಥವಾ ಉದ್ಯಮ ಮತ್ತು ಹತ್ತಿ ಬಟ್ಟೆ ಕೈಗಾರಿಕೆಯ ಪಾಲಾಗಿದೆ. ಭಾರತದ ಆರ್ಥಿಕತೆಯಲ್ಲಿ ಅಥವಾ ಭಾರತದ ವಿದೇಶೀ ವಿನಿಮಯದ ಗಳಿಕೆಯಲ್ಲಿ ಪ್ರವಾಸೋದ್ಯಮದ ಗಳಿಕೆ ಅಪಾರವಾಗಿದೆ.

ಭಾರತದ ಪ್ರವಾಸೋದ್ಯಮ ಗಳಿಕೆ ಅಥವಾ ಆದಾಯವು ಎಲ್ಲಾ ತಿಂಗಳುಗಳಲ್ಲಿ ಒಂದೇ ತರವಾಗಿಲ್ಲ ಬದಲಾಗಿ ಇದು ಪ್ರಮುಖವಾಗಿ ಪ್ರವಾಸಿಗರ ಅನುಕೂಲದ ವಾತಾವರಣವನ್ನು ಹೊಂದಿದೆ. ಭಾರತದಲ್ಲಿ ಜನವರಿಯಿಂದ ಮಾರ್ಚ್‌ವರೆಗಿನ ಋತುವನ್ನು ಪ್ರವಾಸೋದ್ಯಮಕ್ಕೆ ಸೂಕ್ತ ಕಾಲ ಎಂದು ಪರಿಗಣಿಸಲಾಗಿದೆ. ಈ ಸಮಯದಲ್ಲಿ ಸರಕಾರಕ್ಕೆ ಪ್ರವಾಸೋದ್ಯಮದ ಗಳಿಕೆ ಅಧಿಕವಾಗಿರುತ್ತದೆ.

೩.೭ ಪ್ರವಾಸೋದ್ಯಮ ಮತ್ತು ಕಿರು ಉದ್ಯಮ:

ಪ್ರವಾಸೋದ್ಯಮವು ವಿವಿಧ ರೀತಿಯಲ್ಲಿ ಆರ್ಥಿಕಾಭಿವೃದ್ಧಿಗೆ ಕೊಡುಗೆಯನ್ನು ನೀಡುತ್ತದೆ. ವಿದೇಶಿ ವಿನಿಮಯಗಳಿಗೆ ಅಂತರ್‌ರಾಷ್ಟ್ರೀಯ ಪ್ರವಾಸದಿಂದ ಅಭಿವೃದ್ಧಿಯಾದರೆ, ಸ್ಥಳೀಯವಾಗಿ ಪ್ರವಾಸೋದ್ಯಮ ಅನೇಕ ಚಟುವಟಿಕೆಗಳಿಗೆ ಪ್ರೇರಕವಾಗಿರುತ್ತದೆ. ಇವುಗಳಲ್ಲಿ ಮುಖ್ಯವಾಗಿ ಪ್ರವಾಸೋದ್ಯಮದಿಂದ ಕಿರು ಉದ್ಯಮಗಳಿಗೆ ಪ್ರೋತ್ಸಾಹ ತುಂಬಾ ಇದೆ. ಬೇರೆ ಬೇರೆ ಪ್ರವಾಸೀ ಕೇಂದ್ರಗಳಲ್ಲಿ ಬೇರೆ ಬೇರೆ ಕಿರು ಉದ್ಯಮಗಳು ಅವಕಾಶ ಪಡೆಯುತ್ತದೆ. ಇದರಿಂದ ಸ್ಥಳೀಯರಿಗೆ ಉದ್ಯೋಗ, ಆದಾಯ ಹಾಗೂ ಪ್ರವಾಸಿಗರಿಗೆ ಅವರ ಅಗತ್ಯ ಸೌಲಭ್ಯಗಳ ಪೂರೈಕೆಯಾಗುತ್ತದೆ.

ಆದ್ದರಿಂದ, ಪ್ರವಾಸೀ ಕೇಂದ್ರಗಳಲ್ಲಿರುವ ಕಿರು ಉದ್ಯಮಗಳು ಮಹತ್ವವನ್ನು ಪಡೆಯುತ್ತವೆ. ಇದಕ್ಕಾಗಿ ಅವುಗಳ ಸ್ವರೂಪ, ಕಾರ್ಯ ರೀತಿ ಹಾಗೂ ಸಮಸ್ಯೆಗಳನ್ನು ತಿಳಿದುಕೊಳ್ಳುವುದು ಅಗತ್ಯವಾಗಿದೆ.

೩.೮ ಕಿರು ಉದ್ಯಮಗಳು ಮತ್ತು ಅವುಗಳ ಅಭಿವೃದ್ಧಿ

ಕಿರು ಉದ್ಯಮಗಳು ಭಾರತದ ಆರ್ಥಿಕ ವ್ಯವಸ್ಥೆಯಲ್ಲಿ ಮಹತ್ವದ ಸ್ಥಾನವನ್ನು ಪಡೆದಿದೆ. ಯುರೋಪ್ ಖಂಡವೆಲ್ಲಾ ಇನ್ನೂ ಅನಾಗರಿಕ ಸ್ಥಿತಿಯಲ್ಲಿದ್ದಾಗಲೇ ಭಾರತ ತನ್ನ ಕರಕುಶಲ ನಿಪುಣತೆ ಮತ್ತು ಕರಕುಶಲ ವಸ್ತುಗಳಿಗೆ ಹೆಸರು ಗಳಿಸಿತ್ತು. ಪುರಾತನ ಕಾಲದಲ್ಲೇ ಭಾರತ ತನ್ನ ಕಿರು ಉದ್ಯಮಗಳಿದೆ ಹೆಸರು ಪಡೆದಿತ್ತು. "ನೈಲ್ ನದಿಯ ದಂಡೆಯ ಮೇಲೆ ಇನ್ನೂ ಪಿರಮಿಡ್‌ಗಳು ಮೇಲೇಳದಿದ್ದಾಗ, ಯುರೋಪ್ ಖಂಡದ ನಾಗರಿಕತೆಯ ತೊಟ್ಟಿಲು ಎಂದು ಕರೆಸಿಕೊಂಡ ಗ್ರೀಕ್ ಮತ್ತು ಇಟಲಿಗಳು ಇನ್ನೂ ಅನಾಗರಿಕತೆಯ ಗಾಢಾಂಧಕಾರದಲ್ಲಿದ್ದಾಗಲೇ ಭಾರತವು ಸಂಪತ್ತಿನಲ್ಲಿ ಮತ್ತು ಕಿರು ಉದ್ಯಮಗಳ ವೈಭವದಲ್ಲಿ ತನ್ನದೇ ಸ್ಥಾನ ಪಡೆದಿತ್ತೆಂದು "ಎಡ್ವರ್ಡ್ ಥಾಮೋಟನ್ ತಮ್ಮ "ಹಿಸ್ಟರಿ ಆಫ್ ಬ್ರಿಟಿಷ್ ಎಂಪೈರ್ ಇನ್ ಇಂಡಿಯಾ" ಎಂಬ ಪುಸ್ತಕದಲ್ಲಿ ಬರೆದಿದ್ದಾರೆ. ಭಾರತ ೧೭೮೭ರ ಕಾಲದಲ್ಲೆ ರೂ ೩೦ ಲಕ್ಷ ಬೆಲೆಬಾಳುವ ಡಾಕ್ಕಾ ಮಸ್ಲಿನ್‌ನನ್ನು ಇಂಗ್ಲೆಂಡಿನ ರಫ್ತಿ ಮಾಡಿತ್ತು. ಕಿರು ಉದ್ಯಮಗಳು ಮತ್ತು ಗೃಹ ಕೈಗಾರಿಕೆಗಳು ಭಾರತದ ಆರ್ಥಿಕ ವ್ಯವಸ್ಥೆಯ ಆಸ್ತಿವಾದಗಳೆಂದು ಪರಿಗಣಿಸಲ್ಪಟ್ಟಿದೆ.

ಕಳೆದ ಐದೂವರೆ ದಶಕಗಳ ಅವಧಿಯಲ್ಲಿ ಕಿರು ಪ್ರಮಾಣದ ಉದ್ಯಮಗಳ ವಲಯವು ದೇಶದ ಆರ್ಥಿಕತೆಯಲ್ಲಿ ಪ್ರಮುಖ ಸ್ಥಾನವನ್ನು ಆಕ್ರಮಿಸಿಕೊಂಡಿದೆ. ಈ ಕಿರು ಉದ್ಯಮಿಗಳು ಬಿಟ್ಟು ದೇಶೀಯ ಉತ್ಪನ್ನದ ಬೆಳವಣಿಗೆ ಉದ್ಯೋಗ ಅವಕಾಶಗಳ ಸೃಷ್ಠಿ ಮತ್ತು ಒಟ್ಟು ಆರ್ಥಿಕಾಭಿವೃದ್ಧಿಗೆ ಮಹತ್ವದ ಕೊಡುಗೆಯನ್ನು ನೀಡಿದೆ. ಈ ಉದ್ಯಮಗಳು ಈಗ ಸಣ್ಣ ಪ್ರಮಾಣದ ಸೇವೆ ಮತ್ತು ವ್ಯವಹಾರ ಉದ್ಯಮಗಳನ್ನು ಒಳಗೊಂಡಿದೆ. ಆದ್ದರಿಂದ ಈ ವಲಯವನ್ನು ಕಿರು ಉದ್ಯಮಗಳ ವಲಯ ಅಥವಾ ಸೂಕ್ಷ್ಮ ಮತ್ತು ಸಣ್ಣ ಉದ್ಯಮಗಳು ಎಂದು ಕರೆಯಲಾಗುತ್ತಿದೆ. ಈ ಉದ್ಯಮಗಳಿಗೆ ಅತ್ಯಂತ ಸಣ್ಣ ಪುಟ್ಟ ವ್ಯವಹಾರಗಳನ್ನು ನಡೆಸುವ ವ್ಯಾಪಾರಗಳೂ ಸೇರಿರುತ್ತಾರೆ.

ಕಿರು ಉದ್ಯಮಗಳ ಮಹತ್ವ

ಕಿರು ಉದ್ಯಮಗಳು ದೇಶದ ಅರ್ಥಿಕ ಅಭಿವೃದ್ಧಿಯಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತವೆ. ಭಾರತವು ಮೂಲತ ಹಳ್ಳಿಗಳಿಂದ ಕೂಡಿರುವ ದೇಶ ಆಗಾಧವಾಗಿ ಬೆಳೆಯುತ್ತಿರುವ ಜನಸಂಖ್ಯೆ, ಬಡತನ, ನಿರುದ್ಯೋಗ, ಆದಾಯ ಅಸಮಾನತೆ, ಪ್ರಾದೇಶಿಕ ಅಸಮತೋಲನ ಮುಂತಾದ ಜ್ವಲಂತ ಸಮಸ್ಯೆಗಳಿರುವ ಭಾರತದಲ್ಲಿ ಕಿರು ಉದ್ಯಮಗಳು ನಿರುದ್ಯೋಗವನ್ನು ಹೋಗಲಾಡಿಸುವಲ್ಲಿ ವಿಶೇಷ ಮಹತ್ವ ಪಡೆದಿವೆ.

ಉದ್ಯೋಗ ಸೃಷ್ಠಿ ಮಿತಿ ಮೀರಿ ಬೆಳೆಯುತ್ತಿರುವ ಜನಸಂಖ್ಯೆ, ಮಿಲಿಯಾಂತರ ಜನರು ನಿರುದ್ಯೋಗಗಳು ಮತ್ತು ಅರೆ ಉದ್ಯೋಗಿಗಳಿರುವ ಭಾರತ ದೇಶದಲ್ಲಿ ಕಿರು ಉದ್ಯಮಗಳು ಉದ್ಯೋಗ ಸೃಷ್ಠಿಯ ಕಾರ್ಯದಲ್ಲಿ ಪ್ರಮುಖ ಪಾತ್ರ ವಹಿಸಿವೆ. ಬೃಹತ್ ಪ್ರಮಾಣದ ಶ್ರಮ ಮತ್ತು ಬಂಡವಾಳ ಕೊರತೆಯ ಸಮಸ್ಯೆಗಳನ್ನು ಎದುರಿಸುತ್ತಿರುವ ಭಾರತದ ಕಿರು ಉದ್ಯಮಗಳು ಮಹತ್ವ ಪಡೆದಿದೆ. ೧೯೬೦-೬೧ ರಲ್ಲಿ ಈ ವಲಯ ೨೧.೫೯ ಲಕ್ಷ ಜನರಿಗೆ ಉದ್ಯೋಗ ಒದಗಿಸಿತು. ೨೦೦೬-೦೭ ರ ವೇಳೆಗೆ ಈ ವಲಯದ ಉದ್ಯೋಗದಲ್ಲಿದ್ದ ಕಾರ್ಮಿಕರ ಸಂಖ್ಯೆ ೬ದಶಲಕ್ಷಗಳಾಗಿದ್ದಿತು. ಗ್ರಾಮೀಣ ಮತ್ತು ನಗರ ಭಾಗಗಳಲ್ಲಿನ ನಿರುದ್ಯೋಗ ಸಮಸ್ಯೆಯ ನಿವಾರಣೆ ಕಿರು ಉದ್ಯಮಗಳ ಅಭಿವೃದ್ಧಿಯಿಂದ ಸಾಧ್ಯ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

ರಾಷ್ಟ್ರೀಯ ಆದಾಯಕ್ಕೆ ಕಿರು ಉದ್ಯಮಗಳಿಂದ ಪಡೆದ ಆದಾಯವು ಬಹಳ ಕೊಡುಗೆಯನ್ನು ನೀಡಿವೆ. ಪ್ರತೀ ಯೋರ್ವರ ತಲಾ ಆದಾಯದ ಏರಿಕೆಯು ರಾಷ್ಟ್ರೀಯ ಆದಾಯದ ಏರಿಕೆಗೆ ಕಾರಣವಾಗಿರುವುದರಿಂದ ಕಿರು ಉದ್ಯಮಗಳು ಉದ್ಯೋಗಾವಕಾಶಗಳನ್ನು ಒದಗಿಸಿ ಆರ್ಥಿಕಾಭಿವೃದ್ಧಿಗೆ ಪರೋಕ್ಷವಾಗಿ ಕಾರಣಾವಾಗಿದೆ.

ಬಂಡವಾಳ ಕೊರತೆ ಎದುರಿಸುತ್ತಿರುವ ಭಾರತದಂತಹ ದೇಶದಲ್ಲಿ ಕಿರು ಉದ್ಯಮಗಳು ವಿಶೇಷ ಮಹತ್ವ ಪಡೆದಿವೆ. ಪ್ರತೀ ಕಾರ್ಮಿಕನು ತೊಡಗಿಸಬೇಕಾಗಿರುವ ಬಂಡವಾಳದ ಪ್ರಮಾಣದ ಈ ಉದ್ಯಮಗಳಲ್ಲಿ ತುಂಬಾ ಕಡಿಮೆಯಾಗಿರುತ್ತದೆ. ಮಿತಿ ಮೀರಿದ ಶ್ರಮ ಮತ್ತುಮಿತಿ ಬಂಡವಾಳ ಲಭ್ಯವಿರುವ ಭಾರತ ದೇಶದಲ್ಲಿ ಕಿರು ಉದ್ಯಮಿಗಳು ಪರಿಣಾಮಕರ ಪರಿಹಾರವಾಗಬಲ್ಲುವು.

ಕಿರು ಉದ್ಯಮಗಳ ಸ್ಥಾಪನೆಗೆ ಸಾಮಾನ್ಯ ಕಾರ್ಮಿಕರು ಸಾಕು. ಈ ಉದ್ಯಮಗಳಲ್ಲಿ ಕೆಲಸ ಮಾಡಲು ಅಥವಾ ಉದ್ಯಮವನ್ನು ನಡೆಸಲು ವಿಶೇಷ ಪರಿಣಿತಿ ಹೊಂದಿರುವ ಅಥವಾ ದಕ್ಷ ತಂತ್ರಜ್ಞರ ಅಗತ್ಯತತೆ ಬೇಕಾಗಿರುವುದಿಲ್ಲ. ಆದುದರಿಂದ ಈ ಕಿರು ಉದ್ದಿಮೆಗಳು ಸಾಮಾನ್ಯರಿಗೆ ನಿಲುಕುವಂಥ ಉದ್ಯೋಗವಕಾಶವಾಗಿ ಬೆಳೆಯುತ್ತದೆ. ಉದ್ಯೋಗ ಸೃಷ್ಠಿ, ಪ್ರಾದೇಶಿಕ ಅಸಮತೋಲನದ ನಿವಾರಣೆ, ಜೀವನ ಮಟ್ಟದ ಸುಧಾರಣೆ, ಆದಾಯ ವೃದ್ಧಿ ಮುಂತಾಡ ಪರಿಣಾಮಗಳ ಮೂಲಕ ಕಿರು ಉದ್ಯಮಗಳು ಸಮಾಜದ ನಿರ್ಮಾಣಕ್ಕೆ ದಾರಿಮಾಡಿಕೊಡುತ್ತದೆ. ಕಿರು ಉದ್ಯಮಗಳು ತುಂಬಾ ಚಿಕ್ಕದಾಗಿರುವುದರಿಂದ ವೈಯಕ್ತಿಕ ನಿರೀಕ್ಷಣೆ ಮತ್ತು ನಿಯಂತ್ರಣ ಸಾದ್ಯವಾಗುತ್ತದೆ. ಎಲ್ಲಾ ಹಂತಗಳಲ್ಲಿ ಒಬ್ಬನೇ ವ್ಯಕ್ತಿ ಹತೋಟಿ ಸಾಧಿಸುವುದು ಸಾಧ್ಯವಿದೆ. ಇದು ಕಿರು ಉದ್ಯಮಗಳ ಅತ್ಯಂತ ಮುಖ್ಯವಾದ ಅನುಕೂಲವಾಗಿದೆ. ತದ್ವಿರುದ್ಧವಾಗಿ ದೊಡ್ಡ ಕೈಗಾರಿಕೆಗಳಲ್ಲಿ ವೈಯುಕ್ತಿಕ ನಿರೀಕ್ಷಣೆ ಮತ್ತು ನಿಯಂತ್ರಣ ಸಾಧ್ಯವೇ ಆಗುವುದಿಲ್ಲ.

ಭಾರತದ ಆರ್ಥಿಕತೆಯಲ್ಲಿ ಕಿರು ಉದ್ಯಮಗಳಿಗೆ ವಿಪುಲವಾದ ಅವಕಾಶಗಳಿವೆ. ನಿರುದ್ಯೋಗ ನಿರ್ಮೂಲನೆಯಲ್ಲಿ ವಿವಿಧ ತೆರವಾದ ಉದ್ಯಮಿಗಳು ಆರ್ಥಿಕಾಭಿವೃದ್ಧಿಗೆ ಕೊಡುಗೆಯನ್ನು ನೀಡಿವೆ. ಈ ಉದ್ಯಮಗಳಲ್ಲಿ ಅನೇಕ ವಿಧಗಳಿವೆ ಅವುಗಳೆಂದರೆ ಬೃಹತ್ ಉದ್ಯಮಗಳಲ್ಲಿ ಸಣ್ಣ ಪ್ರಮಾಣದ ಉದ್ಯಮಗಳು, ಗೃಹ ಕೈಗಾರಿಕೆಗಳು, ಪ್ರಮಾಣದ ಕೈಗಾರಿಕೆಗಳು ಮತ್ತು ಕಿರು ಉದ್ಯಮಗಳು. ಕಿರು ಉದ್ಯಮಗಳು ಹಳ್ಳಿಗಳ ಆರ್ಥಿಕತೆಯನ್ನು ಅಭಿವೃದ್ಧಿಪಡಿಸುವಲ್ಲಿ ಸಫಲವಾಗಿದೆ. ಕಿರು ಉದ್ಯಮಗಳು ವ್ಯಾಪಾರ, ಸಾಗಾಣಿಕೆ, ಸೇವೆಗಳನ್ನು ನೀಡುವ ಉದ್ಯಮಗಳು ಮತ್ತು ಕಾಮಾಗಾರಿ ವಲಯಗಳಲ್ಲಿ ವಿಪುಲವಾದ ಅವಕಾಶಗಳನ್ನು ಹೊಂದಿವೆ. ಕಿರು ಉದ್ಯಮಗಳು ತಾರಾ ಹಿಂದೂಳಿದಿರುವ ಮತ್ತು ಅನಭಿವೃದ್ಧಿ ಹೊಂದಿರುವ ಆರ್ಥಿಕತೆಗೆ ಒಂದು ವರದಾನವಾಗಿದೆ. ಹಳ್ಳಿಗಳಲ್ಲಿಯ ಕಿರು ಉದ್ಯಮಗಳು ಉದ್ಯಮಶೀಲತೆಯನ್ನು ಮತ್ತು ಶಿಕ್ಷಿತ ನಿರುದ್ಯೋಗಿಗಳನ್ನು ಉದ್ಯೋಗಸ್ಥರನ್ನಾಗಿಸಿದೆ. ಈ ಕಿರುಉದ್ಯಮಗಳು ಇಂದು ಅದೆಷ್ಟೊ ಯುವಕ ಯುವತಿಯರಿಗೆ ಸ್ವಉದ್ಯೋಗಾವಕಾಶವನ್ನು ಒದಗಿಸಿದೆ. ಭಾರತ ಸರ್ಕಾರದ ೧೯೯೨ ರ ನೂತನ ಕೈಗಾರಿಕಾ ನೀತಿಯು ಕಿರು ಉದ್ಯಮಗಳಿಗೆ ಸಾಕಷ್ಟು ಪ್ರೋತ್ಸಾಹವನ್ನು ನೀಡಿವೆ. ಈ ಕೈಗಾರಿಕಾ ನೀತಿಯು ಪಟ್ಟಣ ಮತ್ತು ಹಳ್ಳಿಗಳನ್ನು ಕಿರು ಉದ್ಯಮಗಳನ್ನು ಆರಂಭಿತದಲ್ಲಿ ಸಾಕಷ್ಟು ಉತ್ತೇಜನವನ್ನು ನೀಡಿದೆ. ಹಳ್ಳಿಯಲ್ಲಿರುವ ಬಡ ಜನರಿಗೆ ಕಿರು ಉದ್ಯಮಗಳು ಸ್ವ ಉದ್ಯೋಗದ ಮುಖಾಂತರ ಆದಾಯದ ಮೂಲವಾಗಿವೆ. ಈ ಕಿರು ಉದ್ಯಮಗಳು ನಿರುದ್ಯೋಗವನ್ನು ತೊಡೆದು ಹಾಕುವಲ್ಲಿ ಸಾಕಷ್ಟು ಯಶಸ್ವಿಯಾಗಿವೆ. ತೀವ್ರವಾಗಿ ಬೆಳೆಯುತ್ತಿರುವ ಗ್ರಾಮೀಣ

ಆರ್ಥಿಕತೆಯ ವಾಣಿಜ್ಯೀಕರಣ, ಕೃಷಿಯ ಹಿಂದುಳಿಕೆ ಮತ್ತು ಬೆಳೆಯುತ್ತಿರುವ ಶೈಕ್ಷಣಿಕ ಅವಕಾಶಗಳು ಇಂದು ಕಿರು ಉದ್ಯಮಗಳ ಸ್ಥಾಪನೆಗೆ ಅನೇಕ ರೀತಿಯಲ್ಲಿ ದಾರಿ ಮಾಡಿಕೊಟ್ಟಿವೆ.

೨೦೦೧ರ ಗಣತಿಯ ಪ್ರಕಾರ ದೇಶದ ಒಟ್ಟು ಉದ್ಯೋಗಗಳಲ್ಲಿ ಶೇಕಡಾ ೨೫ ಭಾಗ ಕಿರು ಉದ್ಯಮಿಗಳ ಪಾಲಾಗಿದೆ. ಈ ಕಿರು ಉದ್ಯಮಗಳಲ್ಲಿ ಇಟ್ಟಿಗೆ ಮಾಡುವ ಉದ್ಯಮ, ಹಾಲಿನ ಉತ್ಪನ್ನಗಳ ಉದ್ಯಮ, ಮಕ್ಕಳ ಆಟಿಕೆಗಳ ತಯಾರಿ ಉದ್ಯಮ, ಸೀಮೆ ಸುಣ್ಣ ತಯಾರಿಕಾ ಉದ್ಯಮ, ಅಣಬೆ ತಯಾರಿ ಘಟಕಗಳು, ನಾರಿನ ಉತ್ಪಾದನೆ, ಮೇಣದ ಬತ್ತಿ ತಯಾರಿಕಾ ಉದ್ಯಮ, ಅಗರಬತ್ತಿ ಉದ್ಯಮಗಳು ಬಹುತೇಕ ಪಾಲು ಪಡೆದಿವೆ. ಈ ಕಿರು ಉದ್ಯಮಗಳಲ್ಲಿ, ಮಹಿಳೆಯ ಶೇಕಡಾವಾರು ಪಾಲು ಪುರುಷರಿಗಿಂತ ಹೆಚ್ಚಾಗಿದೆ. ಈ ಕಿರು ಉದ್ಯಮಗಳಿಗೆ ಕಿರು ಹಣಕಾಸಿನ ಮೂಲಕ ಕಿರುಸಾಲವನ್ನು ಕೂಡಾ ಸರಕಾರವು ಒದಗಿಸಿದೆ. ಈ ಕಿರುಸಾಲಗಳು ನಿರುದ್ಯೋಗಿಗಳಿಗೆ ತಮ್ಮದೇ ಸ್ವಂತ ಕಿರು ಉದ್ಯಮದ ಸ್ಥಾಪನೆಗೆ ಪ್ರೇರೇಪಣೆ ನೀಡಿದೆ. ಮಹಿಳಾ ಸ್ವಸಹಾಯ ಗುಂಪುಗಳು ಸರಕಾರದ ಮತ್ತು ಸರ್ಕಾರೇತರ ಸಂಸ್ಥೆಗಳ ಮೂಲಕ ಈ ಕಿರು ಉದ್ಯಮಗಳನ್ನು ಪೋತ್ಸಹಿಸುತ್ತಿವೆ. ಈ ಕಿರು ಉದ್ಯಮಗಳು ಸ್ಥಳೀಯವಾಗಿ ಲಭ್ಯವಿರುವ ಕಚ್ಚಾ ವಸ್ತುಗಳನ್ನು ಉಪಯೋಗಿಸಿಕೊಂಡು ಉತ್ಪಾದನೆಯನ್ನು ಕೈಗೆತ್ತಿಕೊಂಡಿದೆ.

ಪ್ರಸ್ತುತ ಅನೇಕ ಸರಕಾರೇತ ಸಂಘಸಂಸ್ಥೆಗಳು, ಹಣಕಾಸು ಸಂಸ್ಥೆಗಳು ಮಹಿಳೆಯರಿಗೆ ಕಿರು ಉದ್ಯಮಕ್ಕಾಗಿ ಸಾಲವನ್ನು ನೀಡುತ್ತಿವೆ. ಈ ಮೂಲಕ ಅನೇಕ ಸ್ತ್ರೀಯರನ್ನು ಸ್ವ ಉದ್ಯಮ ಕೈಗೊಳ್ಳವಲ್ಲಿ ಸಫಲರನ್ನಾಗಿಸಿದೆ. ಇದರ ಫಲವಾಗಿ ಅನೇಕ ಕಿರು ಉದ್ಯಮಿಗಳು ಸ್ವ ಉದ್ಯೋಗವನ್ನು ಕೈಗೊಂಡು ತಮ್ಮ ಜೀವನದಲ್ಲಿ ಸಫಲತೆಯನ್ನು ಸಾಧಿಸಿದ್ದಾರೆ.

ಕಿರು ಉದ್ಯಮಗಳ ವಿಧಗಳು

೧) ಮಾರುಕಟ್ಟೆ ಸಮಸ್ಯೆಯನ್ನು ಎದುರಿಸುತ್ತಿರುವ ಕಿರು ಉದ್ಯಮಗಳು

೨) ಮಾರುಕಟ್ಟೆ ಸಮಸ್ಯೆಯನ್ನು ಎದುರಿಸದ ಕಿರು ಉದ್ಯಮಗಳು

ಮಾರುಕಟ್ಟೆ ಸಮಸ್ಯೆಯನ್ನು ಎದುರಿಸುತ್ತಿರುವ ಕಿರು ಉದ್ಯಮಗಳು ಹೆಚ್ಚಾಗಿ ಹಳ್ಳಿಗಳಲ್ಲಿ ಅಥವಾ ಗ್ರಾಮೀಣ ಪ್ರದೇಶಗಳಲ್ಲಿ ಕಂಡುಬರುತ್ತದೆ. ಈ ಕಿರು ಉದ್ಯಮಗಳು ತಮ್ಮ ಉತ್ಪನ್ನಗಳಿಗೆ ನಿರ್ದಿಷ್ಟವಾದ ಬೇಡಿಕೆ ಮತ್ತು ಮಾರುಕಟ್ಟೆಗಳನ್ನು ಹೊಂದಿರುವುದಿಲ್ಲ ಆದ್ದರಿಂದ ಉದ್ಯಮದಲ್ಲಿ ಅನಿಶ್ಚಿತತೆಯನ್ನು ಎದುರಿಸುತ್ತದೆ.

೨) ಮಾರುಕಟ್ಟೆ ಸಮಸ್ಯೆಯನ್ನು ಎದುರಿಸದ ಕಿರು ಉದ್ಯಮಗಳು

ಈ ರೀತಿಯ ಕಿರು ಉದ್ಯಮಗಳಲ್ಲಿ ಯಾವುದೇ ಮಾರುಕಟ್ಟೆ ಸಮಸ್ಯೆಯನ್ನು ಕಿರು ಉದ್ದಿಮೆದಾರರು ಎದುರಿಸುವುದಿಲ್ಲ. ಇಲ್ಲಿ ಉತ್ಪನ್ನಗಳಿಗೆ ಸಾಕಷ್ಟು ಬೇಡಿಕೆ ಮತ್ತು ಮಾರುಕಟ್ಟೆ ಸದಾ ಲಭ್ಯವಿರುವುದರಿಂದ ಉದ್ಯಮದಲ್ಲಿ ಅನಿಶ್ಚಿತತೆ ಕಂಡು ಬರುವುದಿಲ್ಲ.

ಕಿರು ಉದ್ಯಮಿಗಳು ಉದ್ಯಮಶೀಲರಾಗಿಬೇಕು. ಕಿರು ಉದ್ಯಮಗಳಿಗೆ ಸರಕಾರವು ಅನೇಕ ರೀತಿಯ ಕಿರುಸಾಲ ಯೋಜನೆ ಮತ್ತು ಧನ ಸಹಾಯವನ್ನು ನೀಡುತ್ತದೆ. ಉದ್ಯಮಶೀಲರಿಗೆ ಅಭಿವೃದ್ಧಿ ತರಬೇತಿಗಳನ್ನು ಸರಕಾರ ಮತ್ತು ಸರಕಾರೇತರ ಸಂಘ ಸಂಸ್ಥೆಗಳು ಆಗಾಗ ಏರ್ಪಡಿಸುತ್ತಿವೆ.

೩.೯ ಕಿರು ಉದ್ಯಮಗಳ ಸಮಸ್ಯೆಗಳು

ಕಿರು ಉದ್ಯಮಗಳ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿವೆ. ಅನೇಕ ಕಿರು ಉದ್ಯಮಗಳು ವಿವಿಧ ಕಾರಣಗಳಿಂದಾಗಿ ರೋಗಗ್ರಸ್ತಗೊಂಡಿದೆ. ೨೦೦೧ರ ಮಾರ್ಚಿನ ವೇಳೆಗೆ ಸುಮಾರು ೨.೪೯ ಲಕ್ಷ ಸಣ್ಣ ಉದ್ಯಮಗಳು ರೋಗಗ್ರಸ್ತಗೊಂಡಿದ್ದವು. ಈ ಪ್ರಮಾಣ ಒಟ್ಟು ರೋಗಗ್ರಸ್ತ ಕೈಗಾರಿಕೆಗಳ ಸಂಖ್ಯೆಯಲ್ಲಿ ಶೇಕಡಾ ೯೦ಭಾಗವಾಗುತ್ತದೆ. ಈ ಅಂಕಿ ಅಂಶಗಳು ಕಿರು ಉದ್ಯಮಗಳು ಎದುರಿಸುತ್ತಿರುವ ಸಮಸ್ಯೆಗಳಿಗೆ ಕೈಗನ್ನಡಿಯಂತಿವೆ. ಈ ಉದ್ಯಮಗಳು ಎದುರಿಸುತ್ತಿರುವ ಪ್ರಮುಖ ಸಮಸ್ಯೆಗಳು ಕೆಳಗಿನಂತಿವೆ.

೧. ಹಣಕಾಸಿನ ಕೊರತೆ: ಕಿರು ಉದ್ಯಮಗಳು ಎದುರಿಸುತ್ತಿರುವ ಅನೇಕ ಸಮಸ್ಯೆಗಳಲ್ಲಿ ಹಣಕಾಸಿನ ಕೊರತೆಯು ತುಂಬಾ ಗಂಭೀರ ಸಮಸ್ಯೆಯಾಗಿದೆ. ಈ ಉದ್ಯಮಗಳಿಗೆ ಹಣಕಾಸನ್ನು ಪೂರೈಸಲು ಸಾಕಷ್ಟು ಹಣಕಾಸಿನ ಸಾಂಸ್ಥೆಗಳು ಸ್ಥಾಪನೆಯಾಗಿಲ್ಲ. ಜೊತೆಗೆ ಕಿರು ಉದ್ಯಮಗಳು ಸ್ವಂತ ಬಂಡವಾಳ ಕ್ರೋಡೀಕರಿಸುವಷ್ಟು ಶಕ್ತವಾಲಿಲ್ಲ. ಇದರಿಂದಾಗಿ ಈ ಉದ್ಯಮಗಳು ಅನಿವಾರ್ಯವಾಗಿ ಲೇವಾದೇವಿಗಾರರಿಂದ ಹಾಗೂ ಬ್ಯಾಂಕೇತರ ಹಣಕಾಸಿನ ಸಂಸ್ಥೆಗಳಿಂದ ಹೆಚ್ಚಿನ ಬಡ್ಡಿ ದರದಲ್ಲಿ ಸಾಲ ಪಡೆಯಬೇಕಾದ ಪರಿಸ್ಥಿತಿ ಏರ್ಪಟ್ಟಿದೆ. ಅದರಲ್ಲೂ ಗ್ರಾಮೀಣ ಸಣ್ಣ ಮತ್ತು ಗೃಹ ಕೈಗಾರಿಕೆಗಳು ನಗರ ಭಾಗದ ಉದ್ಯಮಕ್ಕಿಂತ ನಿಕೃಷ್ಟ ಸ್ಥಿತಿಯಲ್ಲಿವೆ.

೨. ಕಚ್ಚಾ ಸಾಮಾಗ್ರಿಗಳ ಕೊರತೆ: ಕಿರು ಉದ್ಯಮಗಳಿಗೆ ಕಚ್ಚಾ ಸಾಮಾಗ್ರಿಗಳು ಸಮರ್ಪಕ ಪ್ರಮಾಣದಲ್ಲಿ ಲಭ್ಯವಾಗುತ್ತಿಲ್ಲ ಕೆಲ ಉದ್ಯಮಗಳು ಸ್ಥಳೀಯ ಸಂಪನ್ಮೂಲಗಳ ಮೇಲೆ ಅವಲಂಬಿತವಾಗಿದ್ದು ಅಲ್ಲಿ ವ್ಯಾಪಾರಸ್ಥರಿಂದ ಶೋಷಣೆಗೆ ಒಳಗಾಗುತ್ತಿದ್ದರೆ, ಹೆಚ್ಚಿನ ಉದ್ಯಮಗಳು ತಮ್ಮ ಕಚ್ಚಾ ಸಾಮಾಗ್ರಿಗಳ ಪೂರೈಕೆಗಾಗಿ ದೊಡ್ಡ ಪ್ರಮಾಣದ ಕೈಗಾರಿಕೆಗಳನ್ನು ಮತ್ತು ವಿದೇಶೀ ಮೂಲಗಳನ್ನು ಅವಲಂಬಿಸಿವೆ.

೩. ಯಂತ್ರೋಕರಣಗಳ ಸಮಸ್ಯೆ: ಕಿರು ಉದ್ಯಮಗಳು ಎದುರಿಸುತ್ತಿರುವ ಇನ್ನೊಂದು ಪ್ರಮುಖ ಸಮಸ್ಯೆ ಎಂದರೆ ಯಂತ್ರೋಪಕರಣಗಳ ಸಮಸ್ಯೆಯಾಗಿದೆ. ಆಧುನಿಕ ಯಂತ್ರೋಪಕರಣಗಳು ತುಂಬಾ ದುಬಾರಿಯಾಗಿದ್ದು ಅವುಗಳನ್ನು ಪಡೆಯುವುದು ಕಿರು ಉದ್ಯಮಗಳಿಗೆ ಸಾಧ್ಯವಾಗುತ್ತಿಲ್ಲ ಇದರಿಂದಾಗಿ ವ್ಯಾಪಕ ಪ್ರಮಾಣದಲ್ಲಿ ಆಧುನೀಕರಣಗೊಳಿಸುವ ಅಗತ್ಯವಿದೆ.

೪. ಮಾರುಕಟ್ಟೆ ಸಮಸ್ಯೆ: ಕಿರು ಉದ್ಯಮಗಳ ಅತ್ಯಂತ ಪ್ರಮುಖ ಸಮಸ್ಯೆ ಎಂದರೆ ಮಾರುಕಟ್ಟೆ ಸಮಸ್ಯೆಯಾಗಿದೆ. ಈ ಉದ್ಯಮಗಳು ಯಾವುದೇ ರೀತಿಯ ಸಂಘಟಿತ ಮಾರುಕಟ್ಟೆ ವ್ಯವಸ್ಥೆಯನ್ನು ಹೊಂದಿಲ್ಲ. ಮಾರುಕಟ್ಟೆಯ ಅಭಾವದಿಂದಾಗಿ ಅನೇಕ ಕಿರು ಉದ್ಯಮಗಳು ಮುಚ್ಚಿಹೋಗುತ್ತಿದೆ.

೫. ತಂತ್ರಜ್ಞಾನದ ಸಮಸ್ಯೆ: ಕಿರು ಉದ್ಯಮಗಳು ಪುರಾತನವಾದ ಅತ್ಯುತ್ತಮವಾದ ತಂತ್ರಜ್ಞಾನವನ್ನು ಬಳಸುತ್ತಿವೆ. ಈ ಉದ್ಯಮಗಳು ಸಂಶೋಧನೆ ಮತ್ತು ತರಬೇತಿಯ ಸೌಲಭ್ಯಗಳನ್ನು ಹೊಂದಿಲ್ಲ. ಇದರ ಸರಕುಗಳ ಗುಣಮಟ್ಟ ಕಡಿಮೆ ಇದ್ದು ಉತ್ಪಾದನಾ ವೆಚ್ಚ ಹೆಚ್ಚಿದೆ.

೬. ಅದಕ್ಷ ಆಡಳಿತ: ಅನೇಕ ಕಿರು ಉದ್ಯಮಗಳಲ್ಲಿ ಆಡಳಿತ ನಿರ್ವಹಣೆ ದಕ್ಷವಾಗಿಲ್ಲ. ಇದರಿಂದಾಗಿ ಅವು ನಿರಂತರವಾಗಿ ನಷ್ಟಕ್ಕೊಳಗಾಗುತ್ತಿವೆ. ಯಾವುದೇ ಉದ್ಯಮದ ದಕ್ಷತೆಯನ್ನು ಹೆಚ್ಚಿಸಲು ತರಬೇತಿ ಅತ್ಯಗತ್ಯ ಅಂಶವಾಗಿದೆ. ಕಿರು ಉದ್ಯಮಗಳು ಈ ಅವಕಾಶದಿಂದ ವಂಚಿತವಾಗಿರುವುದು ಸ್ಪಷ್ಟವಾಗಿದೆ.

೭. ವಿದ್ಯುತ್ ಕೊರತೆ: ಕಿರು ಉದ್ಯಮಗಳಿಗೆ ವಿದ್ಯುತ್ ಪೂರೈಕೆ ಸಮರ್ಪಕವಾಗಿಲ್ಲ. ಆಗಾಗ್ಗೆ ಘೋಷಿಸಲಾಗುವ ವಿದ್ಯುತ್ ಕಡಿತಗಳು ಕಿರು ಉದ್ಯಮದ ಉತ್ಪಾದನೆಯ ಮೇಲೆ ಹೊರೆಯಾಗಿ ಪರಿಣಮಿಸಿದೆ.

೮. ದೊಡ್ಡ ಕೈಗಾರಿಕೆಗಳಿಂದ ಸ್ಪರ್ಧೆ: ಕಿರು ಉದ್ಯಮಗಳನ್ನು ಉತ್ಪಾದಿಸುವ ಅನೇಕ ಸರಕುಗಳನ್ನು ದೊಡ್ಡ ಕೈಗಾರಿಕೆಗಳು ಉತ್ಪಾದಿಸುತ್ತವೆ. ದೊಡ್ಡ ಕೈಗಾರಿಕೆಗಳು ಅತ್ಯಾಧುನಿಕ ತಂತ್ರಜ್ಞಾನ ಮತ್ತು ಯಂತ್ರೋಪಕರಣಗಳನ್ನು ಬಳಸಿ ಉತ್ತಮ ಗುಣಮಟ್ಟದ ಸರಕುಗಳನ್ನು ಉತ್ಪಾದಿಸುತ್ತವೆ. ಅದರೆ ಕಿರು ಉದ್ಯಮಗಳು ಹಳೆಯ ತಂತ್ರಜ್ಞಾನವನ್ನು ಬಳಸಿ ಕಡಿಮೆ ಗುಣಮಟ್ಟದ ಸರಕುಗಳನ್ನು ಉತ್ಪಾದಿಸುತ್ತಿವೆ. ಇದರಿಂದಾಗಿ ಈ ಉದ್ಯಮಗಳು ದೊಡ್ಡ ಕೈಗಾರಿಕೆಗಳು ಒಡ್ಡುವ ಪೈಪೋಟಿಯನ್ನು ಎದುರಿಸುವ ಶಕ್ತಿ ಹೊಂದಿಲ್ಲ.

೯. ಸಾರಿಗೆ ಸೌಲಭ್ಯದ ಕೊರತೆ: ಹೆಚ್ಚಿನ ಕಿರು ಉದ್ಯಮಗಳು ಗ್ರಾಮೀಣ ಮತ್ತು ಸಣ್ಣ ಪಟ್ಟಣ ಪ್ರದೇಶಗಳಲ್ಲಿ ಕೇಂದ್ರೀಕೃತಗೊಂಡಿವೆ. ಇವುಗಳು ಉತ್ಪಾದನೆ ಮಾಡುವ ಸರಕುಗಳನ್ನು ಮಾರುಕಟ್ಟೆ ಪ್ರದೇಶಕ್ಕೆ ಸಾಗಿಸಲು ಬೇಕಾದ ಉತ್ತಮ ಸಾರಿಗೆ ಸೌಲಭ್ಯಗಳಲ್ಲಿ. ಇದರಿಂದ ಸಾರಿಗೆ ವೆಚ್ಚ ಅಧಿಕವಾಗಿ ನಷ್ಟ ಅನುಭವಿಸುವಂಥಾಗಿದೆ.

೧೦. ತರಬೇತಿ ಮತ್ತು ಸಂಶೋಧನೆ ಸೌಲಭ್ಯದ ಕೊರತೆ: ಕಿರು ಉದ್ಯಮಗಳಲ್ಲಿ ತರಬೇತಿ ಮತ್ತು ಸಂಶೋಧನಾ ಸೌಲಭ್ಯಗಳು ಕೊರತೆಯಿಂದ ಕೂಡಿವೆ. ಇದರಿಂದಾಗಿ ಈ ಕೈಗಾರಿಕೆಗಳ ಆಧುನೀಕರಣ ಸಾಧ್ಯವಾಗುತ್ತಿಲ್ಲವಾದ ಕಾರಣ ಅವುಗಳ ಉತ್ಪಾದನಾ ವೆಚ್ಚ ಹೆಚ್ಚಿದೆ ಹಾಗೂ ಸರಕುಗಳ ಗುಣಮಟ್ಟ ಕಡಿಮೆ ಇದೆ.

೧೧. ಬಿಲ್ಲುಗಳ ಪಾವತಿಯ ಸಮಸ್ಯೆ: ದೇಶದಾದ್ಯಂತ ಕಿರು ಉದ್ಯಮಗಳು ಇಂದು ಎದುರಿಸುತ್ತಿರುವ ದೊಡ್ಡ ಸಮಸ್ಯೆ ಎಂದರೆ ಅವುಗಳು ಬಿಲ್ಲುಗಳ ಪಾವತಿಯ ವಿಳಂಬವಾಗಿದೆ. ಕಿರು ಉದ್ಯಮಗಳು ತಮ್ಮ ಕಚ್ಚಾ ಮಾಲುಗಳನ್ನು ನಗದು ಕೊಟ್ಟು ಕೊಂಡು ತಮ್ಮ ಸರಕುಗಳನ್ನು ಮಾತ್ರ ಸಾಲದಲ್ಲಿ ಅಥವಾ ಕಡದ ರೂಪದಲ್ಲಿ ಕೊಡಬೇಕಾಗಿ ಬಂದಿದೆ.

೧೨. ಸ್ಥಳೀಯ ತೆರಿಗೆಗಳ ಹೊರೆ: ಕಿರು ಉದ್ಯಮಗಳು ಸ್ಥಳೀಯ ತೆರಿಗೆಗಳ ಹೊರೆಯಿಂದ ತತ್ತರಿಸುತ್ತಿವೆ. ಈ ತೆರಿಗೆಗಳು ಕಿರು ಉದ್ಯಮಗಳ ಮೇಲೆ ವಿಪರೀತ ಭಾರವಾಗಿ ಪರಿಣಮಿಸಿವೆ.

೩.೧೦ ಕಿರು ಉದ್ಯಮಗಳಿಗೆ ಸರ್ಕಾರದ ನೆರವು

ಕಿರು ಉದ್ಯಮಗಳ ಸಮಸ್ಯೆಗಳ ಪರಿಹಾರಕ್ಕಾಗಿ ಸರ್ಕಾರ ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ.

೧. ಸಂಘಟನಾ ಸಹಾಯ: ಕಿರು ಉದ್ಯಮಗಳ ಸಂಘಟನಾ ವ್ಯವಸ್ಥೆಯನ್ನು ಸುಧಾರಿಸಲು ಸರ್ಕಾರ ಹಲವಾರು ಸಂಸ್ಥೆಗಳನ್ನು ಸ್ಥಾಪಿಸಿದೆ. ತಾಂತ್ರಿಕ ಮಾರಾಟ ವಿಷಯಗಳಲ್ಲಿ ಸಲಹೆ ನೀಡಲು, ಕಚ್ಚಾ ಸಾಮಾಗ್ರಿಗಳನ್ನು ಪೂರೈಸಲು ನಿಗಮಗಳನ್ನು ಸ್ಥಾಪಿಸಿದೆ.

೨. ತಾಂತ್ರಿಕ ಸಹಾಯ: ಕಿರು ಉದ್ಯಮಗಳಿಗೆ ತಾಂತ್ರಿಕ ನೆರವು ನೀಡಲು ಸರಕಾರ ಕ್ರಮಕೈಗೊಂಡಿದೆ. ಅವುಗಳಲ್ಲಿ ಮುಖ್ಯವಾದುವುಗಳೆಂದರೆ ಹೊಸ ಉತ್ಪಾದನಾ ಕ್ಷೇತ್ರದ ಶೋಧನೆ, ಉತ್ಪಾದನಾ ತಂತ್ರದ ಶೋಧನೆ, ಸಲಕರಣೆಗಳ ಪೂರೈಕೆಗೆ ನೆರವು ಇತ್ಯಾದಿ.

೩. ಹಣಕಾಸಿನ ಸಹಾಯ: ಕಿರು ಉದ್ಯಮಗಳು ಹಣಕಾಸು ಕೊರತೆಯನ್ನು ಎದುರಿಸುತ್ತಿರುವುದರಿಂದ ಅವುಗಳಿಗೆ ಹಣಕಾಸಿನ ಪೂರೈಕೆಯನ್ನು ಮಾಡಲು ಸರಕಾರ ಅವುಗಳನ್ನು ಆದ್ಯತಾ ವಲಯ ಎಂದು ಪರಿಗಣಿಸಿದೆ.

೪. ಕಚ್ಚಾ ಸಾಮಾಗ್ರಿಗಳ ಪೂರೈಕೆ: ಕೊರತೆಯಲ್ಲಿರುವ ಪ್ರಮುಖ ಕಚ್ಚ ಸಾಮಾಗ್ರಿಗಳನ್ನು ರಾಜ್ಯದ ನಿಗಮಗಳ ಮೂಲಕ ವಿತರಿಸಲು ಕ್ರಮ ಕೈಗೊಳ್ಳಲಾಗಿದೆ. ಸರ್ಕಾರಿ ವ್ಯಾಪಾರಿ ನಿಗಮ ಕೆಲವು ಪ್ರಮುಖ ಕಚ್ಚಾ ಮಾಲುಗಳನ್ನು ಆಮದು ಮಾಡಿ ವಿತರಿಸುತ್ತಿದೆ.

೫. ಮಾರುಕಟ್ಟೆ ಸಹಾಯ: ಕಿರು ಉದ್ಯಮಗಳಿಗೆ ಮಾರುಕಟ್ಟೆ ಸಹಾಯ ಒದಗಿಸಲು ಸರ್ಕಾರದ ಅನೇಕ ಕ್ರಮಗಳನ್ನು ಕೈಗೊಂಡಿದೆ. ಅವುಗಳೆಂದರೆ ಕಿರು ಉದ್ಯಮಗಳ ಕೆಲವು ಸರಕುಗಳನ್ನು ಸರ್ಕಾರವೇ ಕೊಳ್ಳುವುದು, ಸರಕುಗಳ ಮಾರಾಟಕ್ಕಾಗಿ ಸರ್ಕಾರ ಸಗಟು ಮಾರಾಟ ಕೇಂದ್ರಗಳನ್ನು ಸ್ಥಾಪಿಸಿದೆ. ಜೊತೆಗೆ ಈ ಸರಕುಗಳನ್ನು ಸಹಾಯ ಧನದೊಂದಿಗೆ ಮಾರಾಟ ಮಾಡುವ ವ್ಯವಸ್ಥೆ ಮಾಡುತ್ತಿದೆ.

೬. ಕಾರ್ಮಿಕರಿಗೆ ತರಬೇತಿ: ಕುಶಲಕರ್ಮಿಗಳು ಮತ್ತು ಕಾರ್ಮಿಕರಿಗೆ ತರಬೇತಿ ನೀಡಿ ಅವರ ನಿಪುಣತೆಯನ್ನು ಸುಧಾರಿಸಲು ಸರ್ಕಾರ ಕ್ರಮ ಕೈಗೊಂಡಿದೆ. ಅನೇಕ ಉತ್ಪಾದನಾ ಮತ್ತು ತರಬೇತಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಜಿಲ್ಲಾ ಮಟ್ಟದಲ್ಲಿ ಮತ್ತು ಬ್ಲಾಕ್ ಮಟ್ಟದಲ್ಲಿ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸಲಾಗಿದೆ.

೭. ಖಜಾನೆ ಉತ್ತೇಜಕಗಳು: ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕಿರು ಉದ್ಯಮಗಳ ಸ್ಥಾಪನೆ ಮತ್ತು ಅಭಿವೃದ್ಧಿಯನ್ನು ಪ್ರೋತ್ಸಾಹಿಸಲು ಅನೇಕ ಖಜಾನ ಉತ್ತೇಜಕಗಳನ್ನು ನೀಡುತ್ತಿವೆ. ಅವುಗಳೆಂದರೆ ೧) ಹೊಸ ಉದ್ಯಮಗಳಿಗೆ ತೆರಿಗೆ ರಜೆ ೨) ಹಿಂದುಳಿದ ಪ್ರದೇಶಗಳ ಕೈಗಾರಿಕೆಗೆ ಬಂಡವಾಳ ಸಹಾಯಧನ ೩) ಸುಂಕ ವಿನಾಯಿತಿ ೪) ಬೆಲೆ ಆದ್ಯತೆ ೫) ತೆರಿಗೆ ವಿನಾಯಿತಿ ಇತ್ಯಾದಿಗಳನ್ನು ಜಾರಿಗೆ ತರಲಾಗಿದೆ.

ಇಷ್ಟೆಲ್ಲಾ ಕ್ರಮಗಳ ನಡುವೆಯೂ ಕಿರು ಉದ್ಯಮಗಳ ಸಮಸ್ಯೆಗಳು ಇನ್ನೂ ಬಗೆ ಹರಿದಿಲ್ಲ. ಇದರಿಂದಾಗಿ ನೂರಾರು ಕಿರು ಉದ್ಯಮಗಳು ರೋಗಗ್ರಸ್ತಗೊಳ್ಳುತ್ತಿವೆ. ಚಿಕ್ಕದು ಸುಂದರವಾದುದು ಎಂಬ ಮಾತಿನಂತೆ ಕಿರು ಉದ್ಯಮಗಳು ಭಾರತದ ಹಲವಾರು ಸಮಸ್ಯೆಗಳನ್ನು ಬಗೆಹರಿಸಿ ರಾಮರಾಜ್ಯ ಸ್ಥಾಪನೆಗೆ ಸಹಾಯ ಮಾಡಬಲ್ಲವಾದ್ದರಿಂದ ಅವುಗಳನ್ನು ಅಭಿವೃದ್ಧಿಪಡಿಸುತ್ತ ಸರ್ಕಾರ ಹೆಚ್ಚಿನ ಗಮನ ಹರಿಸಬೇಕಾಗಿರುವುದು ಅಗತ್ಯವಾಗಿದೆ.

ಅಧ್ಯಾಯ – ೪

ಮಾಹಿತಿ ವಿಶ್ಲೇಷಣೆ

ಅಧ್ಯಾಯ – ೪
ಮಾಹಿತಿ ವಿಶ್ಲೇಷಣೆ

ಈ ಅಧ್ಯಾಯದಲ್ಲಿ ಉದ್ದೇಶಿಸಿದ ಸಂಶೋಧನಾ ಅಧ್ಯಯನದಂತೆ ದ.ಕ ಜಿಲ್ಲಾ ಪ್ರವಾಸೀ ಕೇಂದ್ರಗಳಲ್ಲಿಯ ಕಿರು ಉದ್ಯಮಗಳ ವಿಶ್ಲೇಷಣೆಯನ್ನು ಮಾಡಲಾಗಿದೆ. ಮುಖ್ಯವಾಗಿ ವಿವಿಧ ಪ್ರವಾಸೀ ಕೇಂದ್ರಗಳಲ್ಲಿರುವ ಕಿರು ಉದ್ಯಮಗಳ ವಿಧಗಳು, ಉದ್ಯೋಗ ಸೃಷ್ಠಿ ಆದಾಯ ಗಳಿಕೆ, ವೆಚ್ಚದ ಸ್ವರೂಪ, ಬಂಡವಾಳ ಮತ್ತು ಮೂಲ ಸೌಲಭ್ಯಗಳ ರಚನೆ, ವಾರ್ಷಿಕ ವಹಿವಾಟುಗಳ ವಿಶ್ಲೇಷಣೆಯನ್ನು ಮಾಡಲಾಗಿದೆ. ಇದರ ಜೊತೆಗೆ ವಿವಿಧ ಪ್ರವಾಸೀ ಕೇಂದ್ರಗಳಲ್ಲಿರುವ ಕಿರು ಉದ್ಯಮಗಳ ಸಮಸ್ಯೆಗಳ ಕುರಿತಾದ ಅಭಿಪ್ರಾಯವನ್ನು ಕೂಡಾ ಸಂಗ್ರಹಿಸಲಾಗಿದೆ.

ಈ ಅಧ್ಯಯನದಲ್ಲಿ ಮಾಹಿತಿಯನ್ನು ಪ್ರಶ್ನಾವಳಿ ಸಂದರ್ಶನ ಮತ್ತು ಅವಲೋಕನದ ಮೂಲಕ ವಿಶ್ಲೇಷಿಸಲಾಗಿದೆ. ಈ ಅಧ್ಯಾಯದಲ್ಲಿ ರೇಖಾ ಚಿತ್ರಗಳನ್ನು ಮತ್ತು ಕೋಷ್ಟಕಗಳನ್ನು ಅಳವಡಿಸಲಾಗಿದೆ. ಅಧ್ಯಯನದಲ್ಲಿ ದ.ಕನ್ನಡದ ಜಿಲ್ಲೆಯ ಆಯ್ದು ಪ್ರವಾಸೀ ಕೇಂದ್ರಗಳಲ್ಲಿ ಕಿರು ಉದ್ಯಮ ನಡೆಸುತ್ತಿರುವ ೧೦೦ ಮಂದಿ ಮಹಿಳೆ ಮತ್ತು ಪುರುಷರಿಂದ ಮಾಹಿತಿಯನ್ನು ಪಡೆಯಲಾಗಿದೆ.

ಪ್ರವಾಸೀ ಕೇಂದ್ರಗಳಲ್ಲಿ ಕಿರು ಉದ್ಯಮಗಳ ಕುರಿತು ಅಧ್ಯಯನ ಮಾಡಲು ಕಿರು ಉದ್ಯಮಗಳ ವರ್ಗೀಕರಣ ದ.ಕ ಜಿಲ್ಲೆಯ ಮೂರು ಪ್ರವಾಸೀ ಕೇಂದ್ರಗಳನ್ನು ಆಯ್ಕೆ ಮಾಡಲಾಗಿದೆ. ಧಾರ್ಮಿಕ ಪ್ರವಾಸೀ ಕೇಂದ್ರಗಳು (ದೇವಸ್ಥಾನಗಳು), ಪ್ರಾಕೃತಿಕ ಪ್ರವಾಸೀ ಕೇಂದ್ರಗಳು (ಸಮುದ್ರ ಪಾತಗಳು, ಉದ್ಯಾನವನಗಳು) ಹಾಗೂ ವೈದ್ಯಕೀಯ ಕೇಂದ್ರಗಳಲ್ಲಿಯ ಕಿರು ಉದ್ಯಮಗಳನ್ನು ನಡೆಸುತ್ತಿರುವ ೧೦೦ ಮಾದರಿ ಉದ್ಯಮಿಗಳನ್ನು ಸಂದರ್ಶಿಸಿ ಮಾಹಿತಿ ಸಂಗ್ರಹಿಸಲಾಯಿತು.

ಕಿರು ಉದ್ಯಮಿಗಳ ವರ್ಗೀಕರಣ


ಸಂದರ್ಶಿಸಿದ ೧೦೦ ಮಾದರಿ ಕಿರು ಉದ್ಯಮಿಗಳಲ್ಲಿ ೪೫ಕಿರು ಉದ್ಯಮಿಗಳು ಧಾರ್ಮಿಕ ಕೇಂದ್ರಗಳಲ್ಲಿ ಉದ್ಯಮ ನಡೆಸುವವರಾದರೆ, ೪೦ ಪ್ರಾಕೃತಿಕ ಪ್ರವಾಸೀ ಕೇಂದ್ರಗಳಲ್ಲಿ ಹಾಗೂ ೧೫ ಮಂದಿ ವೈದ್ಯಕೀಯ ಕೇಂದ್ರಗಳಲ್ಲಿ ಉದ್ಯಮಿಗಳಾಗಿರುತ್ತಾರೆ. ಕಿರು ಉದ್ಯಮಿಗಳಿಗೆ ಸಂಬಂಧಿಸಿ ಧಾರ್ಮಿಕ ಮತ್ತು ಪ್ರಾಕೃತಿಕ ಪ್ರವಾಸೀ ಕೇಂದ್ರಗಳು ಹೆಚ್ಚು ಪ್ರಮುಖವಾದ ಕಾರಣ ಆ ಕೇಂದ್ರಗಳಿಂದ ಹೆಚ್ಚಿನ ಕಿರು ಉದ್ಯಮಿಗಳನ್ನು ಆಯ್ಕೆ ಮಾಡಿಕೊಳ್ಳಲಾಯಿತು. ವೈದ್ಯಕೀಯ ಕೇಂದ್ರಗಳಲ್ಲಿ ಕಿರು ಉದ್ಯಮಗಳಿಗೆ ಕಡಿಮೆ ಅವಕಾಶವಿರುವುದರಿಂದ ೧೫ ಮಾದರಿ ಕಿರು ಉದ್ಯಮಗಳನ್ನು ಮಾತ್ರ ಆಯ್ಕೆ ಮಾಡಲಾಗಿದೆ.

೪.೧ ಮಾದರಿ ಕಿರು ಉದ್ಯಮಗಳ ಹಿನ್ನಲೆ

ಯಾವುದೇ ಉದ್ಯಮ ನಡೆಸಲು ಅನುಭವ ಮುಖ್ಯ. ಈ ದೆಸೆಯಿಂದಾಗಿ ಉದ್ಯಮಿಗಳ ಹಿನ್ನಲೆಯನ್ನು ವಿಶ್ಲೇಷಿಸುವುದು ಮಹತ್ವವನ್ನು ಪಡೆಯುತ್ತದೆ. ಕೆಲವರು ಔದ್ಯಮಿಕ ಕುಟುಂಬದಿಂದಲೇ ಬಂದವರಿರಬಹುದು ಇನ್ನು ಕೆಲವರು ಈಗಷ್ಟೇ ಉದ್ಯಮಿಗಳಾಗಿ ರೂಪುಗೊಂಡವರಿರಬಹುದು. ಕೆಳಗಿನ ೪.೧ ಕೋಷ್ಟಕದಲ್ಲಿ ಕಿರು ಉದ್ಯಮಿಗಳ ಹಿನ್ನಲೆಯನ್ನು ತಿಳಿಯಬಹುದು.

೪.೧ ಮಾದರಿ ಕಿರು ಉದ್ಯಮಿಗಳ ಹಿನ್ನೆಲೆ.

ಕೇಂದ್ರಗಳು	ಒಟ್ಟು ಸಂಖ್ಯೆ	ಉದ್ಯಮದ ಹಿನ್ನಲೆ ಉಳ್ಳವರು	ಶೇಕಡವಾರು	ಹೊಸದಾಗಿ ಉದ್ಯಮ ಕೈಗೊಂಡವರು	ಶೇಕಡವಾರು
ಧಾರ್ಮಿಕ	೪೫	೨೦	೪೪.೪೪%	೨೫	೫೫.೫೫
ಪ್ರಾಕೃತಿಕ	೧೦	೨೫	೬೨.೫%	೧೫	೩೭.೫
ವೈದ್ಯಕೀಯ	೧೫	೧೫	೧೦೦%	–	೦



ಈ ಮೇಲ್ಕಂಡ ಕೋಷ್ಠಕದಲ್ಲಿರುವ ಅಂಕಿ ಅಂಶಗಳ ಪ್ರಕಾರ ಧಾರ್ಮಿಕ ಪ್ರವಾಸೀ ಕೇಂದ್ರಗಳಲ್ಲಿ ಶೇಕಡಾ ೪೪.೪ ರಷ್ಟು ಉದ್ಯಮಿಗಳು ಉದ್ಯಮದ ಹಿನ್ನೆಲೆ ಉಳ್ಳವರಾಗಿದ್ದಾರೆ ಮತ್ತು ಶೇಕಡಾ ೫೫.೫೫ರಷ್ಟು ಉದ್ಯಮಿಗಳು ಹೊಸದಾಗಿ ಉದ್ಯಮ ಕೈಗೊಂಡವರಾಗಿದ್ದಾರೆ. ಅದೇ ರೀತಿ ಪ್ರಾಕೃತಿಕ ಪ್ರವಾಸೀ ಕೇಂದ್ರಗಳಲ್ಲಿ ಶೇಕಡಾ ೬೨.೫ ರಷ್ಟು ಉದ್ಯಮಿಗಳು ಉದ್ಯಮದ ಹಿನ್ನಲೆ ಉಳ್ಳವರಾಗಿದ್ದಾರೆ. ಮತ್ತು ಶೇಕಡಾ ೩೭.೫ರಷ್ಟು ಉದ್ಯಮಗಳು ಹೊಸ ಉದ್ಯಮವನ್ನು ಹೊಂದಿದವರಾಗಿದ್ದಾರೆ ಹಾಗೂ ವೈದ್ಯಕೀಯ ಪ್ರವಾಸೀ ಕೇಂದ್ರದಲ್ಲಿ ಶೇಕಡಾ ೧೦೦ರಷ್ಟು ಉದ್ಯಮಿಗಳು ಉದ್ಯಮದ ಹಿನ್ನೆಲೆ ಉಳ್ಳವರಾಗಿದ್ದಾರೆ ಮತ್ತು ವೈದ್ಯಕೀಯ ಕೇಂದ್ರಗಳಲ್ಲಿ ಹೊಸ ಉದ್ಯಮಗಳನ್ನು ಹೊಂದಿರುವವರ ಸಂಖ್ಯೆಯು ಶೂನ್ಯವಾಗಿದೆ. ಈ ಅಂಕಿ ಅಂಶಗಳಿಂದ ನಮಗೆ ತಿಳಿಯುವುದೇನೆಂದರೆ ಅತೀ ಹೆಚ್ಚು ಉದ್ಯಮಿಗಳು ಪ್ರವಾಸೀ ಕೇಂದ್ರಗಳ ಉದ್ಯಮದ ಹಿನ್ನೆಲೆಯನ್ನು ಹೊಂದಿದವರಾಗಿದ್ದಾರೆ.



೪.೨ ಕಿರು ಉದ್ಯಮಗಳ ನಮೂನೆ

ಪ್ರವಾಸೀ ಕೇಂದ್ರಗಳಲ್ಲಿ ವಿವಿಧ ರೀತಿಯ ಕಿರು ಉದ್ಯಮಗಳಿಗೆ ಅವಕಾಶವಿರುತ್ತದೆ. ಪ್ರವಾಸೀ ಕೇಂದ್ರಗಳಿಂದಾಗಿ ಪ್ರವಾಸೀ ವ್ಯವಸ್ಥೆಗಳನ್ನು ಮಾಡುವ ಅನೇಕ ಉದ್ಯಮಗಳನ್ನು ನಾವು ಕಾಣಬಹುದು. ಈ ವಿವರಗಳನ್ನು ಕೋಷ್ಠಕ ೪.೪ರಲ್ಲಿ ಗಮನಿಸಬಹುದು.

ಉದ್ಯಮಗಳು	ಪ್ರವಾಸೀ ಕೇಂದ್ರಗಳ ವರ್ಗೀಕರಣ					
	ಧಾರ್ಮಿಕ	ಶೇಕಡಾ	ಪ್ರಾಕೃತಿಕ	ಶೇಕಡಾ	ವೈದ್ಯಕೀಯ	ಶೇಕಡಾ
ಹೋಟೇಲ್‌ಗಳು	೧೦	೨೨.೨೨	೧೭	೪೨.೫	೬	೪೦
ಕ್ಯಾಂಟೀನ್‌ಗಳು	೫	೧೧.೧೧	೩	೭.೫	೩	೨೦
ಐಸ್‌ಕ್ರೀಂ ಪಾರ್ಲರ್‌ಗಳು	೨೦	೪೪.೪೪	೧೨	೩೦	೨	೧೩.೫೩
ಚಾಟ್ ಅಂಗಡಿಗಳು	೭	೧೫.೫೬	೬	೧೫	–	–
ಇತರ	೬	೬.೬೭	೨	೫	೪	೨೬.೬೭
ಒಟ್ಟು	೪೫	೧೦೦%	೪೦	೧೦೦%	೧೫	೧೦೦%

ಮೇಲಿನ ಕೋಷ್ಟಕದಿಂದ ಕೆಲವು ನಿರ್ದಿಷ್ಟವಾದ ಆರ್ಥಿಕ ಚಟುವಟಿಕೆಗಳಿಗೆ ಬೇಡಿಕೆ ಇರುವುದು ಕಂಡು ಬರುತ್ತದೆ. ಧಾರ್ಮಿಕ ಪ್ರವಾಸೀ ಕೇಂದ್ರಗಳಲ್ಲಿ ಹೋಟೇಲ್‌ಗಳು, ಜನರಲ್ ಸ್ಟೋರ್‌ಗಳು, ವಸತಿ ಗೃಹಗಳು, ಹಣ್ಣು ಕಾಯಿ ಹೂಗಳನ್ನು ಮಾರುವಂಥಹ ಅಂಗಡಿಗಳು, ಕ್ಯಾಸೆಟ್ಸ್‌ಗಳನ್ನು ಮಾರುವಂಥ ಅಂಗಡಿಗಳನ್ನು ಕಾಣಬಹುದು. ಈ ವಸ್ತುಗಳಿಗೆ ಇಲ್ಲಿ ಅತ್ಯಂತ ಹೆಚ್ಚು ಬೇಡಿಕೆ ಇರುತ್ತದೆ. ಪ್ರಾಕೃತಿಕ ಪ್ರವಾಸೀ ಕೇಂದ್ರಗಳಲ್ಲಿ ವಿಶ್ರಾಮದ ಮನೆಗಳು, ಹೋಟೇಲ್ ರಿಸಾರ್ಟ್‌ಗಳು, ಸಮುದ್ರ ತೀರದ ಆಹಾರವನ್ನು ಉಣಬಡಿಸುವಂಥಹ ಫಾಸ್ಟ್ ಫುಡ್ ಹೊಟೇಲ್‌ಗಳು, ಚಾಟ್ ಅಂಗಡಿಗಳನ್ನು ಕಾಣಬಹುದು. ವೈದ್ಯಕೀಯ ಪ್ರವಾಸೀ ಕೇಂದ್ರಗಳಲ್ಲಿ ಜನರಲ್ ಸ್ಟೋರ್‌ಗಳು, ಹಣ್ಣಿನ ರಸಗಳನ್ನು ಮಾರುವಂಥಹ ಹೊಟೇಲ್‌ಗಳನ್ನು ಕಾಣಬಹುದು. ವಿವಿಧ ರೀತಿಯ ಬೇಡಿಕೆಯಿಂದ ವಿವಿಧ ರೀತಿಯ ಕಿರು ಉದ್ಯಮಗಳು ರೂಪುಗೊಂಡಿದೆ ಎಂಬುದು ಇಲ್ಲಿ ಕಂಡು ಬರುತ್ತದೆ.

೪.೩ ಕಿರು ಉದ್ಯಮಗಳಿಂದ ಉದ್ಯೋಗ ಸೃಷ್ಟಿ

ಪ್ರವಾಸೀ ಕೇಂದ್ರಗಳಲ್ಲಿರುವ ಕಿರು ಉದ್ಯಮಗಳು ಆರ್ಥಿಕವಾಗಿ ಹಲವು ಕುಟುಂಬಗಳಿಗೆ ಅನೇಕ ರೀತಿಯಲ್ಲಿ ಸಹಾಯ ಮಾಡುತ್ತವೆ. ಮುಖ್ಯವಾಗಿ ಕಿರು ಉದ್ಯಮಗಳು ಉದ್ಯೋಗಾವಕಾಶವನ್ನು ಸೃಷ್ಟಿಸುತ್ತವೆ. ಉದ್ಯೋಗ ಸೃಷ್ಟಿಗೆ ಸಂಬಂಧಿಸಿದಂತೆ ಈ ಅಧ್ಯಯನದಲ್ಲಿ ಕಂಡು ಬಂದ ಅಂಶವನ್ನು ಕೋಷ್ಟಕ ೪.೩ರಲ್ಲಿ ಗಮನಿಸಬಹುದು.

ಕೋಷ್ಟಕ ೪.೩: ಕಿರು ಉದ್ಯಮಗಳಲ್ಲಿ ಉದ್ಯೋಗ ಸೃಷ್ಟಿ

ಕೇಂದ್ರಗಳು	ಉದ್ಯೋಗ ಸೃಷ್ಟಿ		ಒಟ್ಟು
	ಸ್ವಂತ ಉದ್ಯೋಗ	ಕೂಲಿಗಾಗಿ ಉದ್ಯೋಗ	
ಧಾರ್ಮಿಕ	೪೫	೨೫	೭೦
ಪ್ರಾಕೃತಿಕ	೪೦	೨೪	೬೫
ವೈದ್ಯಕೀಯ	೧೫	೦೪	೧೯

ಪ್ರವಾಸೀ ಕೇಂದ್ರಗಳಲ್ಲಿರುವ ಕಿರು ಉದ್ಯಮಗಳಲ್ಲಿ ಹೆಚ್ಚಾಗಿ ಅದನ್ನು ನಡೆಸುವವರೇ ಉದ್ಯೋಗಸ್ಥರಾಗಿರುತ್ತಾರೆ. ಕೆಲವು ಉದ್ಯಮಗಳಲ್ಲಿ ಮುಖ್ಯವಾಗಿ ಹೊಟೇಲ್‌ಗಳಲ್ಲಿ ದೊಡ್ಡ ಪ್ರಮಾಣದ ಜನರಲ್ ಸ್ಟೋರ್‌ಗಳಲ್ಲಿ ಕೂಲಿಗಾಗಿ ಉದ್ಯೋಗಸ್ಥರನ್ನು ನೇಮಿಸಿಕೊಂಡಿರುವುದು ಕಂಡು ಬಂದಿದೆ.

೪.೪ ಕಿರು ಉದ್ಯಮಗಳಲ್ಲಿ ಪುರುಷ ಮತ್ತು ಮಹಿಳೆಯರ ಸಂಖ್ಯೆ

ಈ ಕೋಷ್ಟಕದಲ್ಲಿ ದಕ್ಷಿಣ ಕನ್ನಡದ ವಿವಿಧ ಪ್ರವಾಸೀ ಕೇಂದ್ರಗಳಲ್ಲಿ ದುಡಿಯುತ್ತಿರುವ ಮತ್ತು ಕಿರು ಉದ್ಯಮಗಳನ್ನು ನಡೆಸುತ್ತಿರುವ ಪುರುಷ ಮತ್ತು ಮಹಿಳೆಯರ ಅಂಕಿ ಅಂಶಗಳನ್ನು ಕೊಟ್ಟಿದೆ. ವಿವಿಧ ಧಾರ್ಮಿಕ ಪ್ರಾಕೃತಿಕ ಮತ್ತು ವೈದ್ಯಕೀಯ ಪ್ರವಾಸೀ ಕೇಂದ್ರಗಳಲ್ಲಿರುವ ನೂರು ಮಾದರಿಗಳನ್ನು ಸಂಗ್ರಹಿಸಿ ವಿಶ್ಲೇಷಿಸಲಾಗಿದೆ.

ಕೋಷ್ಟಕ ೪.೪. ಕಿರು ಉದ್ಯಮಗಳಲ್ಲಿ ಪುರುಷ ಮತ್ತು ಮಹಿಳೆಯರ ಸಂಖ್ಯೆ

ಕೇಂದ್ರಗಳು	ಪುರುಷರು	ಮಹಿಳೆಯರು	ಒಟ್ಟು
ಧಾರ್ಮಿಕ	೩೮	೩೨	೭೦
ಪ್ರಾಕೃತಿಕ	೩೯	೨೬	೬೫
ವೈದ್ಯಕೀಯ	೧೫	೪	೧೯


ಪ್ರವಾಸೀ ಕೇಂದ್ರಗಳಲ್ಲಿಯ ಕಿರು ಉದ್ಯಮಗಳಲ್ಲಿ ಉದ್ಯೋಗ ನಡೆಸುತ್ತಿರುವವರಲ್ಲಿ ಪುರುಷರೇ ಹೆಚ್ಚಾಗಿರುತ್ತಾರೆ. ಆದರೆ ಧಾರ್ಮಿಕ ಪ್ರವಾಸೀ ಕೇಂದ್ರಗಳಲ್ಲಿ ಮಹಿಳೆಯರು ಹೆಚ್ಚು ಉದ್ಯೋಗದಲ್ಲಿ ಇರುವುದು ಕಂಡು ಬಂದಿದೆ ವೈದ್ಯಕೀಯ ಕಿರು ಉದ್ಯಮಗಳಲ್ಲಿ ಮಹಿಳೆಯರ ಸಂಖ್ಯೆ ಕಡಿಮೆ ಕಂಡು ಬಂದಿದೆ.

೪.೫ ಕಿರು ಉದ್ಯಮಗಳ ತಿಂಗಳ ವಹಿವಾಟು

ಮೇಲಿನ ಕೋಷ್ಟಕದ ವಿಷಯವನ್ನು ವಿಶ್ಲೇಷಿಸುವಾಗ ಋತುಮಾಸಿಕ ಏರಿಳಿತಗಳು ತಿಂಗಳ ವಹಿವಾಟಿನಲ್ಲಿ ಕಂಡು ಬರುತ್ತವೆ. ಇವು ಮುಖ್ಯವಾಗಿ ಧಾರ್ಮಿಕ ಮತ್ತು ಪ್ರಾಕೃತಿಕ ಕೇಂದ್ರಗಳಲ್ಲಿ ಹೆಚ್ಚಾಗಿ ಕಂಡು ಬರುತ್ತವೆ. ಈ ಅಧ್ಯಯನದಲ್ಲಿ ಹವಾಗುಣದ ಏರಿಳಿತದಿಂದಾಗಿ ಪ್ರಾಕೃತಿಕ ಧಾರ್ಮಿಕ ಪ್ರವಾಸೀ ಕೇಂದ್ರಗಳು ವರ್ಷವಿಡೀ ಒಂದೇ ರೀತಿಯ ವಹಿವಾಟನ್ನು ಹೊಂದಿರುವುದಿರಲ್ಲ ಎಂಬುದನ್ನು ಗಮನಿಬಹುದು. ಆದಾಗ್ಯೂ ಧಾರ್ಮಿಕ ಪ್ರವಾಸೀ ಕೇಂದ್ರಗಳಲ್ಲಿ ೩೩.೮೪% ಸರಾಸರಿ ತಿಂಗಳ ವಹಿವಾಟು, ಪ್ರಾಕೃತಿಕ ಕೇಂದ್ರಗಳಲ್ಲಿ ಶೇಕಡಾ ೩೮.೫೩ ತಿಂಗಳ ವಹಿವಾಟು ಮತ್ತು ವೈದ್ಯಕೀಯ ಕೇಂದ್ರಗಳಲ್ಲಿ ಶೇಕಡಾ ೨೭.೬೩ ವಹಿವಾಟನ್ನು ವಿಶ್ಲೇಷಿಸಲಾಗಿದೆ. ಪ್ರಾಕೃತಿಕ ಕೇಂದ್ರಗಳಲ್ಲಿ ಅತೀ ಹೆಚ್ಚು ತಿಂಗಳ ವಹಿವಾಟು ಕಂಡು ಬಂದರೆ ವೈದ್ಯಕೀಯ ಕೇಂದ್ರಗಳಲ್ಲಿ ಕಡಿಮೆ ತಿಂಗಳ ವಹಿವಾಟು ಕಂಡು ಬಂದಿದೆ.

ಪ್ರವಾಸೀ ಕೇಂದ್ರಗಳಲ್ಲಿ ಇರುವ ಕಿರು ಉದ್ಯಮಗಳ ಒಂದು ಪ್ರಮುಖ ಲಕ್ಷಣವೆಂದರೆ ಋತುಮಾನಗಳಲ್ಲಿ ಕಂಡುಬರುವ ಏರಿಳಿತಗಳು. ಕಿರು ಉದ್ಯಮಗಳ ತಿಂಗಳ ವಹಿವಾಟು ವಿವಿಧ ಚಟುವಟಿಕೆಗಳ ಮೂಲಕ ಬೇರೆ ಬೇರೆ ಪ್ರಮಾಣದಲ್ಲಿರುತ್ತದೆ. ಅಧ್ಯಯನದಲ್ಲಿ ಕಂಡು ಬಂದಂತೆ ಪ್ರವಾಸಿ ಕೇಂದ್ರಗಳಲ್ಲಿಯ ಕಿರು ಉದ್ಯಮಗಳ ತಿಂಗಳ ವಹಿವಾಟಿನ ವಿವರವನ್ನು ಕೋಷ್ಟಕ ೪.೫ರಲ್ಲಿ ಕಾಣಬಹುದು.

ಕೇಂದ್ರಗಳು	ಸರಾಸರಿ ವಹಿವಾಟು ರೂಗಳಲ್ಲಿ	ಶೇಕಡಾ
ಧಾರ್ಮಿಕ	೪೨,೦೪೦.೦೦	೩೩.೮೪%
ಪ್ರಾಕೃತಿಕ	೪೭,೮೭೫.೦೦	೩೮.೫೩%
ವೈದ್ಯಕೀಯ	೩೪,೩೩೫.೦೦	೨೭.೬೩%
ಒಟ್ಟು	೧,೨೪,೨೫೦.೦೦	೧೦೦%




ಮೇಲಿನ ಕೋಷ್ಟಕದ ವಿಷಯವನ್ನು ವಿಶ್ಲೇಷಿಸುವಾಗ ಋತುಮಾಸಿಕ ಏರಿಳಿತಗಳು ತಿಂಗಳ ವಹಿವಾಟಿನಲ್ಲಿ ಕಂಡುಬರುತ್ತದೆ. ಇವು ಮುಖ್ಯವಾಗಿ ಧಾರ್ಮಿಕ ಮತ್ತು ಪ್ರಾಕೃತಿಕ ಕೇಂದ್ರಗಳಲ್ಲಿ ಹೆಚ್ಚಾಗಿ ಕಂಡು ಬರುತ್ತದೆ. ಈ ಅಧ್ಯಯನದಲ್ಲಿ ಹವಾಗುಣದ ಏರಿಳಿತದಿಂದಾಗಿ ಪ್ರಾಕೃತಿಕ ಧಾರ್ಮಿಕ ಪ್ರವಾಸೀ ಕೇಂದ್ರಗಳು ವರ್ಷವಿಡೀ ಒಂದೇ ರೀತಿಯ ವಹಿವಾಟನ್ನು ಹೊಂದಿರುವುದಿಲ್ಲ ಎಂಬುದನ್ನು ಗಮನಿಸಬಹುದು.

೪.೬ ಕಿರು ಉದ್ಯಮಗಳ ಬಂಡವಾಳ

ಹೆಚ್ಚಿನ ಕಿರು ಉದ್ಯಮ ಚಟುವಟಿಕೆಗಳಲ್ಲಿ ಬಂಡವಾಳ ಹೂಡಿಕೆ ಪ್ರಮಾಣ ಕಡಿಮೆಯಾಗುತ್ತದೆ. ಆದಾಗ್ಯೂ ಕೆಲವು ಚಟುವಟಿಕೆಗಳಿಗೆ ಬಂಡವಾಳ ಹೂಡಿಕೆ ಅಗತ್ಯವಾಗಿರುತ್ತದೆ. ಮುಖ್ಯವಾಗಿ ಪ್ರವಾಸಿಗರಿಗೆ ವ್ಯವಸ್ಥೆಯನ್ನು ಕಲ್ಪಿಸುವುದು, ಹೊಟೇಲು ಉದ್ಯಮ ನಡೆಸುವುದು, ಕ್ರೀಂ ಪಾರ್ಲರ್‌ನಂತಹ ಕಿರು ಉದ್ಯಮಗಳನ್ನು ನಡೆಸುವುದು ಇವುಗಳಿಗೆ ಹೆಚ್ಚು ಬಂಡವಾಳ ಹೂಡಿಕೆಯ ಅಗತ್ಯತೆ ಇರುತ್ತದೆ.



ಕೇಂದ್ರಗಳು	ಸರಾಸರಿ ಬಂಡವಾಳ ಹೂಡಿಕೆ (ರೂಗಳಲ್ಲಿ)	ಶೇಕಡಾವಾರು
ಧಾರ್ಮಿಕ	೨,೮೬,೬೬೭	೪೨.೪೯%
ಪ್ರಾಕೃತಿಕ	೨,೫೫,೦೦೦	೩೭.೮೦%
ವೈದ್ಯಕೀಯ	೧,೩೩,೦೦೦	೧೯.೭೧%
ಒಟ್ಟು	**೬,೭೪,೬೬೭**	೧೦೦%



ಮೇಲ್ಕಂಡ ಕೋಷ್ಟಕದಲ್ಲಿ ಉಲ್ಲೇಖಿಸಿರುವಂತ ಪ್ರವಾಸೋಧ್ಯಮದ ಕಿರು ಉದ್ಯಮದ ಸರಾಸರಿ ಬಂಡವಾಳ ಹೂಡಿಕೆಯ ವಿವರ ನೀಡಲಾಗಿದೆ. ಈ ಅಂಕಿ ಅಂಶಗಳ ಪ್ರಕಾರ ಶೇಕಡಾ ೪೨.೪೯ ರಷ್ಟು ಬಂಡವಾಳ ಹೂಡಿಕೆಯ ಧಾರ್ಮಿಕ ಪ್ರವಾಸೋಧ್ಯಮ ಕೇಂದ್ರಗಳಲ್ಲಿ ಕಂಡುಬರುತ್ತದೆ. ಅದೇ ರೀತಿ ಶೇಕಡಾ ೩೭.೮೦ರಷ್ಟು ಬಂಡವಾಳ ಹೂಡಿಕೆಯು ಪ್ರಾಕೃತಿಕ ಪ್ರವಾಸೋದ್ಯಮದ ಕೇಂದ್ರಗಳಲ್ಲಿ ಗಮನಿಸಬಹುದು. ಹಾಗೂ ಶೇಕಡಾ ೧೯.೭೧ ರಷ್ಟು ಬಂಡವಾಳ ಹೂಡಿಕೆಯನ್ನು ವೈದ್ಯಕೀಯ ಪ್ರವಾಸೋಧ್ಯಮ ಕೇಂದ್ರಗಳಲ್ಲಿ ಗಮನಿಸಬಹುದು. ಈ ಅಂಕಿ ಅಂಶಗಳನ್ನು ಗಮನಿಸಿದಾಗ ಧಾರ್ಮಿಕ ಪ್ರವಾಸೀ ಕೇಂದ್ರಗಳಲ್ಲಿ ಅತೀ ಹೆಚ್ಚಿನ ಬಂಡವಾಳ ಹೂಡಿಕೆಯನ್ನು ವೈದ್ಯಕೀಯ ಪ್ರವಾಸೋಧ್ಯಮ ಕೇಂದ್ರಗಳಲ್ಲಿ ಅತೀ ಹೆಚ್ಚಿನ ಬಂಡವಾಳ


ಹೂಡಿಕೆಯಾಗಿರುವುದನ್ನು ನಾವು ಗಮನಿಸಬಹುದು ಹಾಗೂ ವೈದ್ಯಕೀಯ ಪ್ರವಾಸೋದ್ಯಮ ಕೇಂದ್ರಗಳಲ್ಲಿ ಅತೀ ಕಡಿಮೆ ಬಂಡವಾಳ ಹೂಡಿಕೆಯಾಗಿರುವುದನ್ನು ಗಮನಿಸಬಹುದು.

೪.೭ ಕಿರು ಉದ್ಯಮಗಳ ವೆಚ್ಚ

ಕಿರು ಉದ್ಯಮಗಳಲ್ಲಿ ಬರುವ ಮುಖ್ಯ ವೆಚ್ಚಗಳು ವಿವಿಧ ಪ್ರವಾಸೀ ಕೇಂದ್ರಗಳಲ್ಲಿ ವಿವಿಧ ನಮೂನೆಗಳಿಗೆ ಬೇರೆ ಬೇರೆಯಾಗಿರುತ್ತವೆ. ಈ ಅಧ್ಯಯನದಲ್ಲಿ ಕಂಡು ಬಂದ ಕೆಲವು ಪ್ರಮುಖ ಪ್ರವಾಸೀ ಕೇಂದ್ರಗಳ ಕಿರು ಉದ್ಯಮಗಳ ವೆಚ್ಚ ಸ್ವರೂಪವನ್ನು ಕೋಷ್ಟಕ ೪.೭ರಲ್ಲಿ ನೀಡಲಾಗಿದೆ.

ಕೋಷ್ಟಕ ೪.೯: ಮಾದರಿ ಕಿರುಉದ್ಯಮಗಳ ಸರಾಸರಿ ವೆಚ್ಚ

ಕೇಂದ್ರಗಳು	ಸರಾಸರಿ ವಾರ್ಷಿಕ ವೆಚ್ಚ ರೂಗಳಲ್ಲಿ	ಶೇಕಡಾ
ಧಾರ್ಮಿಕ	೩೧,೩೩೪.೦೦	೪೪.೬೨%
ಪ್ರಾಕೃತಿಕ	೧೭,೮೧೩.೦೦	೨೫.೩೭%
ವೈದ್ಯಕೀಯ	೨೧,೦೦೬.೦೦	೩೦.೦೧%




ಈ ಮೇಲಿನ ಅಂಕಿ ಅಂಶಗಳನ್ನು ಗಮನಿಸಿದಾಗ ವಾರ್ಷಿಕ ವೆಚ್ಚವು ಶೇ ೪೪.೬೨ರಷ್ಟಿದೆ. ಅದೇ ರೀತಿ ಪ್ರಾಕೃತಿಕ ಪ್ರವಾಸೀ ಕೇಂದ್ರಗಳ ವಾರ್ಷಿಕ ವೆಚ್ಚವು ಶೇ ೨೫.೩೭ ರಷ್ಟಿದೆ. ಹಾಗೂ ವೈದ್ಯಕೀಯ ಪ್ರವಾಸೀ ಕೇಂದ್ರಗಳ ವಾರ್ಷಿಕ ವೆಚ್ಚವು ಶೇ ೩೦.೦೧ ರಷ್ಟಿದೆ. ಅಂದರೆ ಧಾರ್ಮಿಕ ಪ್ರವಾಸೀ ಕೇಂದ್ರಗಳಲ್ಲಿ ಹೆಚ್ಚಿನ ವಾರ್ಷಿಕ ವೆಚ್ಚವನ್ನು ಕಾಣಬಹುದು.

೪.೮ ಕಿರು ಉದ್ಯಮಗಳ ಆದಾಯ

ಕಿರು ಉದ್ಯಮಗಳಲ್ಲಿ ಆದಾಯ ಕಡಿಮೆ ಮಾತ್ರವಲ್ಲದೆ ವಿವಿಧ ಋತುಗಳಲ್ಲಿ ವ್ಯತ್ಯಾಸಗೊಳ್ಳುತ್ತದೆ. ಈ ವಿವರವನ್ನು ಕೋಷ್ಟಕ ೪.೮ ರಲ್ಲಿ ಗಮನಿಸಬಹುದು.

ಕೋಷ್ಟಕ ೪.೮ ಕಿರು ಉದ್ಯಮಗಳ ವಾರ್ಷಿಕ ಆದಾಯ

ಕೇಂದ್ರಗಳು	ಸರಾಸರಿ ವಾರ್ಷಿಕ ಆದಾಯ ರೂಗಳಲ್ಲಿ	ಶೇಕಡಾವಾರು
ಧಾರ್ಮಿಕ	೬,೯೯,೪೬೭	೩೯.೨೧%
ಪ್ರಾಕೃತಿಕ	೬,೦೭,೫೦೦	೩೪.೦೬%
ವೈದ್ಯಕೀಯ	೪,೭೬,೮೦೦	೨೬.೭೩%
ಒಟ್ಟು	೧೭,೮೩,೭೬೭	೧೦೦%





ಈ ಮೇಲಿನ ಕೋಷ್ಟಕದಲ್ಲಿ ತಿಳಿಸಿರುವಂತೆ ಶೇ ೩೯.೨೧ರಷ್ಟು ಸರಸಾರಿ ವಾರ್ಷಿಕ ಆದಾಯವು ಧಾರ್ಮಿಕ ಪ್ರವಾಸೀ ಕೇಂದ್ರಗಳಲ್ಲಿ ಕಂಡುಬರುತ್ತದೆ. ಅದೇ ರೀತಿ ಶೇ ೩೪.೦೬ರಷ್ಟು ವಾರ್ಷಿಕ ಆದಾಯವು ಪ್ರಾಕೃತಿಕ ಪ್ರವಾಸೀ ಕೇಂದ್ರಗಳಲ್ಲಿ ಕಂಡುಬರುತ್ತದೆ. ಹಾಗೂ ಶೇ. ೨೬.೭೩ರಷ್ಟು ವಾರ್ಷಿಕ ಆದಾಯವು ವೈದ್ಯಕೀಯ ಪ್ರವಾಸೀ ಕೇಂದ್ರಗಳಲ್ಲಿ ಕಂಡುಬರುತ್ತದೆ. ಈ ಅಂಕಿ ಅಂಶಗಳನ್ನು ಗಮನಿಸಿದಾಗ ಅತೀ ಹೆಚ್ಚ ವಾರ್ಷಿಕ ಆದಾಯವು ಧಾರ್ಮಿಕ ಪ್ರವಾಸೀ ಕೇಂದ್ರಗಳಲ್ಲಿ ಕಂಡುಬರುತ್ತದೆ.

೪.೯ ಧಾರ್ಮಿಕ ಪ್ರವಾಸೀ ಕೇಂದ್ರಗಳಲ್ಲಿಯ ಕಿರು ಉದ್ಯಮಗಳ ಸಮಸ್ಯೆಗಳು

ಬೃಹತ್ ಉದ್ಯಮಗಳಿಗೆ ಹೋಲಿಸಿದರೆ ಕಿರು ಉದ್ಯಮಗಳು ಎದುರಿಸುವ ಸಮಸ್ಯೆಗಳು ಬೇರೆಯಾಗಿರುತ್ತದೆ. ಅದ್ಯಯನದಲ್ಲಿ ತೆಗೆದುಕೊಂಡಿರುವ ವಿವಿಧ ಧಾರ್ಮಿಕ ಪ್ರಾಕೃತಿಕ ಮತ್ತು ವೈದ್ಯಕೀಯ ಪ್ರವಾಸೀ ಕೇಂದ್ರಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಕೋಷ್ಟಕ ೪.೧೧ ರಲ್ಲಿ ಗಮನಿಸಬಹುದು. ಕಿರು ಉದ್ಯಮಿಗಳ ಸಮಸ್ಯೆಗಳ ಪ್ರಮಾಣವನ್ನು ವಿಶ್ಲೇಷಿಸಲು ಲಿಕರ್ಟ್ಸ್‌ರವರ ಐದು ಶ್ರೇಣಿಗಳ ಅಂಕೀಕರಣ ವಿಧಾನವನ್ನು ಬಳಸಲಾಯಿತು. ಇದರಂತೆ ಇದರ ಉದ್ಯಮಿಗಳ ಸಮಸ್ಯೆಯ ಪ್ರಮಾಣವನ್ನು ಐದು ಶ್ರೇಣೆಗಳಲ್ಲಿ ತಿಳಿಸಲು ಕೇಳಲಾಯಿತು. ಇದರ ವಿವರವನ್ನು ಕೋಷ್ಟಕ ೪.೯ರಲ್ಲಿ ತಿಳಿಯಬಹುದು.

ಕೋಷ್ಟಕ ೪.೯ ಧಾರ್ಮಿಕ ಕೇಂದ್ರಗಳಲ್ಲಿಯ ಕಿರುಉದ್ಯಮಗಳ ಸಮಸ್ಯೆಗಳು

ಎನ್=೪೫

ಸಮಸ್ಯೆಗಳು	ಅತ್ಯಧಿಕ	ಅಧಿಕ	ಸಾಧಾರಣ	ಸ್ವಲ್ಪಮಟ್ಟಿಗೆ	ಇಲ್ಲ	ಮೀನ್
ಋತುಮಾಸಿಕ	೨೫	೧೬	೪	–	–	೩.೪೬
ಕಾರ್ಮಿಕ	೧೬	೦೭	೩	೨	೧	೨.೦೬
ಅನಿಶ್ಚಿತತೆ	೨೮	೧೨	೧೦	–	–	೩.೭೩
ಮೂಲಭೂತ ಸಮಸ್ಯೆಗಳು	೧೦	೯	೨೫	೧	–	೭.೮
ಬಾಡಿಗೆ	೧೫	–	೦೨	–	೨೩	೧.೪
ಹಣಕಾಸು ಮತ್ತು ಮಾರುಕಟ್ಟೆ	೨೨	೦೯	೦೧	೦೮	೦೫	೧–೮

ಈ ಮೇಲಿನ ಅಂಕಿ ಅಂಶಗಳ ಪ್ರಕಾರ ಧಾರ್ಮಿಕ ಪ್ರವಾಸೀ ಕೇಂದ್ರಗಳಲ್ಲಿ ಕಂಡುಬರುವಂತಹ ಸಮಸ್ಯೆಗಳ ವಿವರಗಳನ್ನು ಕಾಣಬಹುದು. ಧಾರ್ಮಿಕ ಪ್ರವಾಸೋಧ್ಯಮ ಕೇಂದ್ರಗಳಲ್ಲಿ ವ್ಯಾಪಾರದ ಅನಿಶ್ಚಿತತೆಯ ಸಮಸ್ಯೆಯು ತೀವ್ರವಾಗಿ ಕಂಡುಬರುತ್ತದೆ. ಹಾಗೂ ಋತುಮಾಸಿಕ ವ್ಯಾಪಾರದ ಸಮಸ್ಯೆಗಳು ಧಾರ್ಮಿಕ ಕ್ಷೇತ್ರದಲ್ಲಿ ಹೆಚ್ಚಾಗಿರುವುದನ್ನು ಕಾಣಬಹುದು. ಈ ಪ್ರವಾಸೀ ಕೇಂದ್ರಗಳಲ್ಲಿ ಕಾರ್ಮಿಕರ ಸಮಸ್ಯೆಗಳು ಸದಾ ಕಂಡು ಬಂದಿರುವುದನ್ನು ಗಮನಿಸಬಹುದು.

ಕೋಷ್ಟಕ ೪.೯ (ಎ) ಪ್ರಾಕೃತಿಕ ಪ್ರವಾಸೀ ಕೇಂದ್ರಗಳಲ್ಲಿಯ ಕಿರು ಉದ್ಯಮಗಳ ಸಮಸ್ಯೆ

ಎನ್=೪೦

ಸಮಸ್ಯೆಗಳು	ಅತ್ಯಧಿಕ	ಅಧಿಕ	ಸಾಧಾರಣ	ಸ್ವಲ್ಪಮಟ್ಟಿಗೆ	ಇಲ್ಲ	ಮೀನ್
ಋತುಮಾಸಿಕ	೩೫	೫	–	–	–	೩.೮
ಕಾರ್ಮಿಕ	೨೮	೧೦	೨	–	–	೩.೬೫
ಅನಿಶ್ಚಿತತೆ	೧೨	೦೨	೧೬	೧೦	–	೨.೪
ಮೂಲಭೂತ	೨೪	೧೬	–	–	–	೩.೬೨
ಬಾಡಿಗೆ	–	–	–	೦೫	–	೦.೫
ಹಣಕಾಸು ಮಾರುಕಟ್ಟೆ	೨೨	೧೩	೦೩	೦೩	–	೨.೨೭

ಈ ಮೇಲಿನ ಅಂಕಿ ಅಂಶಗಳ ಪ್ರಕಾರ ಪ್ರಾಕೃತಿಕ ಪ್ರವಾಸೀ ಕೇಂದ್ರಗಳಲ್ಲಿ ಅನೇಕ ಸಮಸ್ಯೆಗಳು ತಲೆದೋರಿಸುವುದನ್ನು ಗಮನಿಸಬಹುದು. ಪ್ರಾಕೃತಿಕ ಪ್ರವಾಸೀ ಕೇಂದ್ರಗಳಲ್ಲಿ ಅತೀ ಹೆಚ್ಚು ಋತುಮಾಸಿಕ ವ್ಯಾಪಾರದ ಸಮಸ್ಯೆಗಳನ್ನು ಕಾಣಬಹುದು. ಅದೇ ರೀತಿ ಪ್ರವಾಸೀ ಕೇಂದ್ರಗಳಲ್ಲಿ ಅತೀ ಹೆಚ್ಚು ಮೂಲಭೂತ ಸೌಕರ್ಯಗಳ ಅಭಾವವನ್ನು ಕಾಣಬಹುದು. ಹಾಗೂ ಪ್ರಾಕೃತಿಕ ಪ್ರವಾಸೀ ಕೇಂದ್ರಗಳಲ್ಲಿ ಕಾರ್ಮಿಕರ ಸಮಸ್ಯೆಯು ಕಂಡುಬರುತ್ತದೆ.

ಕೋಷ್ಟಕ ೪.೯ (ಬಿ) ವೈದ್ಯಕೀಯ ಪ್ರವಾಸೀ ಕೇಂದ್ರಗಳಲ್ಲಿಯ ಕಿರು ಉದ್ಯಮಗಳ ಸಮಸ್ಯೆಗಳು

ಎನ್=೧೫

ಸಮಸ್ಯೆಗಳು	ಬಹಳ (೪)	ತುಂಬಾ (೩)	ಸಾಧಾರಣ (೨)	ಸ್ವಲ್ಪಮಟ್ಟಿಗೆ (೧)	ಇಲ್ಲ (೦)	ಮೀನ್
ಋತುಮಾಸಿಕ	೦೭	೦೫	೦೩	–	–	೩.೨
ಕಾರ್ಮಿಕ	೦೨	೦೩	೦೫	೦೫	–	೨.೧
ಅನಿಶ್ಚಿತತೆ	೮	೦೬	೦೧	–	–	೩.೫
ಮೂಲಭೂತ ಸೌಕರ್ಯ	೧೦	೦೨	೦೨	೦೧	–	೩.೪
ಬಾಡಿಗೆ	೦೬	೦೫	೦೪	–	–	೩.೧
ಹಣಕಾಸು ಮತ್ತು ಮಾರುಕಟ್ಟೆ	೦೫	೦೫	೦೫	–	–	೩

ಈ ಮೇಲಿನ ಅಂಕಿ ಅಂಶಗಳ ಪ್ರಕಾರ ವೈದ್ಯಕೀಯ ಪ್ರವಾಸೀ ಕೇಂದ್ರಗಳಲ್ಲಿ ಕಂಡು ಬರುವಂತಹ ಸಮಸ್ಯೆಗಳನ್ನು ಪಟ್ಟಿ ಮಾಡಲಾಗಿದೆ. ಈ ಅಂಕಿ ಅಂಶಗಳನ್ನು ಅತೀ ಹೆಚ್ಚಿನ ಪ್ರಮಾಣದಲ್ಲಿ ಅನುಭವಿಸುತ್ತಿರುವುದು ಕಂಡು ಬಂದಿದೆ. ಹಾಗೂ ಕೇಂದ್ರಗಳಲ್ಲಿ ಮೂಲಭೂತ ಸೌಕರ್ಯಗಳ ಅಭಾವಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಗುರುತಿಸಬಹುದು. ಅದೇ ರೀತಿ ಈ ಕೇಂದ್ರಗಳಲ್ಲಿ ವ್ಯಾಪಾರದಲ್ಲಿ ಋತುಮಾಸಿಕ ಸಮಸ್ಯೆಗಳು ಸಹ ಹೆಚ್ಚಾಗಿರುವುದು ಕಂಡು ಬಂದಿದೆ.

ಅಧ್ಯಾಯ – ೫

ಸಾರ ಸಲಹೆ ಸೂಚನೆಗಳು ಮತ್ತು ಸಮಾರೋಪ

ಅಧ್ಯಾಯ ೫

ಸಾರ ಸಲಹೆ ಸೂಚನೆಗಳು ಮತ್ತು ಸಮಾರೋಪ

೫.೧ ಸಾರಂಶ:

ಪ್ರವಾಸೋದ್ಯಮ ಬೃಹತ್ತಾಗಿ ಬೆಳೆಯುತ್ತಿರುವ ಉದ್ಯಮ ಇದರಿಂದ ಯಾವುದೇ ಆರ್ಥಿಕತೆಗೆ ಬಹಳ ಕೊಡುಗೆ ಇದೆ. ಹಿಂದುಳಿದ ರಾಷ್ಟ್ರಗಳು ಈ ಉದ್ಯಮದ ಸಮರ್ಪಕ ಬಳಕೆ ಮಾಡುವುದು ಬಹಳ ಅಗತ್ಯ. ಭಾರತದಂಥಹ ರಾಷ್ಟ್ರಗಳಲ್ಲಿ ಪ್ರವಾಸೋದ್ಯಮದ ಅಭಿವೃದ್ಧಿ ದೇಶದ ಆರ್ಥಿಕಾಭಿವೃದ್ಧಿಗೆ ನಾನಾ ರೀತಿಯ ಕೊಡುಗೆಯನ್ನು ಕೊಡಬಲ್ಲುದು. ಮುಖ್ಯವಾಗಿ ನಿರುದ್ಯೋಗ ಹೊಂದಿರುವ ನಮ್ಮ ದೇಶದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಅನೇಕರಿಗೆ ಉದ್ಯೋಗ ಒದಗಿಸಬಹುದು. ಈ ಕಾರಣಕ್ಕೆ ಇದರ ಅಭಿವೃದ್ಧಿ ಬಹಳ ಅಗತ್ಯ ಜೊತೆಗೆ ಚಟುವಟಿಕೆಗಳ ವಿಸ್ತರಣೆ, ಸರ್ಕಾರಕ್ಕೆ ಕಂದಾಯದ ಸಂದಾಯ, ಅಂತರ್ ರಾಷ್ಟ್ರೀಯ ವಿನಿಮಯದ ಗಳಿಕೆ ಹೆಚ್ಚಿಸಲು ಈ ಉದ್ಯಮ ಅಭಿವೃದ್ಧಿಗೊಳ್ಳಬೇಕಾಗಿದೆ. ಪ್ರವಾಸೀ ಕೇಂದ್ರಗಳಲ್ಲಿ ಪ್ರವಾಸಿಗರು ಅನೇಕ ಸೌಲಭ್ಯಗಳನ್ನು ನಿರೀಕ್ಷಿಸುತ್ತಾರೆ. ಪ್ರವಾಸಿಗರಿಗೆ ಈ ಸೌಲಭ್ಯಗಳನ್ನು ಒದಗಿಸಲು ಪ್ರವಾಸೀ ಕೇಂದ್ರಗಳಲ್ಲಿ ಕಿರು ಉದ್ಯಮಗಳು ಹುಟ್ಟುಕೊಳ್ಳುತ್ತದೆ. ಇದರಿಂದ ಪ್ರವಾಸಿಗರಿಗೆ ಅನುಕೂಲವಾಗುವುದಲ್ಲದೆ ಸ್ಥಳೀಯರಿಗೂ ಅನುಕೂಲವಾಗುತ್ತದೆ. ಕಿರು ಉದ್ಯಮಗಳಲ್ಲಿ ಸ್ಥಳೀಯರೇ ಕೆಲಸ ಮಾಡುವುದರಿಂದ ಸ್ಥಳೀಯರಿಗೆ ಉದ್ಯೋಗಾವಕಾಶ, ಆದಾಯ ಹೆಚ್ಚಿಸಿಕೊಳ್ಳಲು ಅವಕಾಶ ಸಿಗುತ್ತದೆ. ಆದರೆ ಕಿರು ಉದ್ಯಮಗಳ ಸ್ವರೂಪ ಆರ್ಥಿಕ ಲಕ್ಷಣಗಳು ನಿರ್ವಹಣಾ ವಿಧಾನ ಬೇರೆ ಬೇರೆಯಾಗಿರುತ್ತದೆ. ಆದ್ದರಿಂದ ವಿವಿಧ ಪ್ರವಾಸೀ ಕೇಂದ್ರಗಳಲ್ಲಿರುವ ಕಿರು ಉದ್ಯಮಗಳ ವಿಸ್ತೃತ ಅಧ್ಯಯನ ಅಗತ್ಯ. ಇದನ್ನು ಅರಿತುಕೊಂಡು ಈ ಸಂಶೋಧನೆಯನ್ನು ಕೈಗೆತ್ತಿಕೊಳ್ಳಲಾಯಿತು.

ದ.ಕ.ಜಿಲ್ಲಾ ಪ್ರವಾಸೀ ಕೇಂದ್ರಗಳಲ್ಲಿ ಇರುವ ಕಿರು ಉದ್ಯಮಗಳ ಅಧ್ಯಯನ ನಡೆಸಲಾಯಿತು. ಧಾರ್ಮಿಕ ಪ್ರಾಕೃತಿಕ ಮತ್ತು ವೈದ್ಯಕೀಯ ಪ್ರವಾಸೋದ್ಯಮ ಕೇಂದ್ರಗಳಲ್ಲಿರುವ ಕಿರು ಉದ್ಯಮಗಳಲ್ಲಿ ನೂರು ಮಾದರಿ ಉದ್ಯಮಗಳನ್ನು ಆಯ್ಕೆ ಮಾಡಿ ಅಧ್ಯಯನ ಮಾಡಲಾಯಿತು.

ಈ ಅಧ್ಯಯನದ ಮುಖ್ಯ ಉದ್ದೇಶಗಳೆಂದರೆ ಪ್ರವಾಸೀ ಕೇಂದ್ರಗಳಲ್ಲಿ ಕಿರು ಉದ್ಯಮ ನಡೆಸುತ್ತಿರುವ ಉದ್ಯಮಿಗಳ ಕೌಟುಂಬಿಕ ಹಿನ್ನಲೆ, ಉದ್ಯಮದ ವಿವಿಧ ನಮೂನೆಗಳು, ಉದ್ಯೋಗ

ಸೃಷ್ಠಿ, ವಾರ್ಷಿಕ ವಹಿವಾಟು ಮತ್ತು ಆದಾಯ ಬಂಡವಾಳ ಹಾಗೂ ವೆಚ್ಚಗಳ ವಿಶ್ಲೇಷಣೆಯನ್ನು ಮಾಡಲಾಯಿತು. ಇದಕ್ಕಾಗಿ ಸಂದರ್ಶಿಸಿದ ನೂರು ಕಿರು ಉದ್ಯಮಿಗಳಲ್ಲಿ ೪೫ ಧಾರ್ಮಿಕ ಕೇಂದ್ರಗಳಿಂದ ೪೦ ಪಾಕೃತ್ತಿಕ ಕೇಂದ್ರಗಳಿಂದ (ಸಮುದ್ರ ತೀರ, ಉದ್ಯಾನವನ) ೧೫ ವೈದ್ಯಕೀಯ ಕೇಂದ್ರಗಳಿಂದ ಆಯ್ಕೆ ಮಾಡಲಾಗಿದೆ.

೫.೨ ಫಲಿತಗಳು

ಈ ಅಧ್ಯಯನದಿಂದ ಕಂಡು ಬರುವ ಫಲಿತಾಂಶದ ಸಾರಾಂಶವನ್ನು ಈ ಕೆಳಗೆ ಕೊಡಲಾಗಿದೆ.

೧. ಅಧ್ಯಯನದಲ್ಲಿ ಆರಿಸಿಕೊಂಡ ಮಾದರಿ ಕಿರು ಉದ್ಯಮಿಗಳ ಹಿನ್ನೆಲೆಯನ್ನು ವಿಶ್ಲೇಷಿಸಿದಾಗ ಧಾರ್ಮಿಕ ಪ್ರವಾಸೀ ಕೇಂದ್ರಗಳಲ್ಲಿ ೪೪.೪% ರಷ್ಟು ಉದ್ಯಮಿಗಳು ಉದ್ಯಮದ ಹಿನ್ನೆಲೆ ಉಳ್ಳವರಾಗಿದ್ದಾರೆ. ಶೇ. ೫೫.೫೫ರಷ್ಟು ಉದ್ಯಮಿಗಳು ಹೊಸದಾಗಿ ಉದ್ಯಮ ಕೈಗೊಂಡವರಾಗಿರುತ್ತಾರೆ. ಪ್ರಾಕೃತಿಕ ಕೇಂದ್ರಗಳಲ್ಲಿ ಶೇಕಡಾ ೬೨.೫ ರಷ್ಟು ಉದ್ಯಮಿಗಳು ಉದ್ಯಮದ ಹಿನ್ನಲೆ ಉಳ್ಳವರಾಗಿದ್ದು, ಶೇಕಡ ೨೨.೫ರಷ್ಟು ಉದ್ಯಮಿಗಳು ಹೊಸ ಉದ್ಯಮವನ್ನು ಕೈಗೊಂಡವರಾಗಿದ್ದಾರೆ. ಅದೇ ರೀತಿ ವೈದ್ಯಕೀಯ ಪ್ರವಾಸೀ ಕೇಂದ್ರಗಳಲ್ಲಿ ಶೇ ೧೦೦ರಷ್ಟು ಉದ್ಯಮಿಗಳು ಉದ್ಯಮದ ಹಿನ್ನೆಲೆ ಉಳ್ಳವರಾಗಿದ್ದುದು ಕಂಡು ಬಂದಿದೆ.

೨. ಕಿರು ಉದ್ಯಮಗಳ ನಮೂನೆಯನ್ನು ವಿಶ್ಲೇಷಿಸಿದಾಗ ವಿವಿಧ ರೀತಿಯ ಕಿರು ಉದ್ಯಮಗಳನ್ನು ಪ್ರವಾಸೀ ಕೇಂದ್ರಗಳಲ್ಲಿ ಕಾಣಬಹುದಾಗಿದೆ. ಇವುಗಳಲ್ಲಿ ಹೊಟೇಲ್‌ಗಳನ್ನು ಧಾರ್ಮಿಕ ಪ್ರವಾಸೀ ಕೇಂದ್ರಗಳಲ್ಲಿ ೨೨.೨೨ ಶೇಕಡಾ, ಪ್ರಾಕೃತಿಕ ಕೇಂದ್ರಗಳಲ್ಲಿ ೪೨.೫ ಶೇಕಡಾ, ವೈದ್ಯಕೀಯ ಕೇಂದ್ರಗಳಲ್ಲಿ ೪೦% ಕಾಣಬಹುದು. ಕ್ಯಾಂಟೀನ್‌ಗಳನ್ನು ಧಾರ್ಮಿಕ ಕೇಂದ್ರಗಳಲ್ಲಿ ೨೦% ಕಾಣಬಹುದು. ಕ್ಯಾಂಟೀನ್‌ಗಳನ್ನು ಧಾರ್ಮಿಕ ಕೇಂದ್ರಗಳಲ್ಲಿ ೧೧.೧೧% ಪ್ರಾಕೃತಿಕ ಕೇಂದ್ರಗಳಲ್ಲಿ ೭.೫% ಮತ್ತು ವೈದ್ಯಕೀಯ ಕೇಂದ್ರಗಳಲ್ಲಿ ೨೦% ಕಾಣಬಹುದು. ಐಸ್ ಕ್ರೀಂ ಪಾರ್ಲರ್‌ಗಳನ್ನು ಧಾರ್ಮಿಕ ಕೇಂದ್ರಗಳಲ್ಲಿ ೪೪.೪೪% ಪ್ರಾಕೃತಿಕ ಕೇಂದ್ರಗಳಲ್ಲಿ ೧೨% ಮತ್ತು ವೈದ್ಯಕೀಯ ಕೇಂದ್ರಗಳಲ್ಲಿ ೧೩.೫೩% ಕಂಡು ಬಂದಿದೆ. ಜನರಲ್ ಸ್ಟೋರ್‌ಗಳು ಧಾರ್ಮಿಕ ಕೇಂದ್ರಗಳಲ್ಲಿ ೧೫.೫೬% ಪ್ರಾಕೃತಿಕ ಕೇಂದ್ರಗಳಲ್ಲಿ ೧೫% ಕಂಡುಬಂದಿದೆ. ವೈದ್ಯಕೀಯ ಕೇಂದ್ರಗಳಲ್ಲಿ ಯಾವುದೇ ತರಹದ ಜನರಲ್ ಸ್ಟೋರ್‌ಗಳು ಕಂಡು ಬಂದಿಲ್ಲ ಇತರ ಸಣ್ಣ ಪುಟ್ಟ ಉದ್ಯಮಗಳು ಧಾರ್ಮಿಕ ಕೇಂದ್ರಗಳಲ್ಲಿ ೬.೬೭, ಪ್ರಾಕೃತಿಕ ಕೇಂದ್ರಗಳಲ್ಲಿ ೫% ಪ್ರಾಕೃತಿಕ ಮತ್ತು ವೈದ್ಯಕೀಯ ಕೇಂದ್ರಗಳಲ್ಲಿ ೨೬.೬೭ ಶೇಕಡಾ ಕಂಡು ಬಂದಿರುತ್ತದೆ. ಇದರಿಂದಾಗಿ

ವಿವಿಧ ಕೇಂದ್ರಗಳಲ್ಲಿ ವಿವಿಧ ರೀತಿಯ ಕಿರು ಉದ್ಯಮಗಳನ್ನು ಪ್ರವಾಸೀ ಕೇಂದ್ರಗಳಲ್ಲಿ ಕಾಣಬಹುದಾಗಿದೆ ಎಂಬುದು ಈ ಅಧ್ಯಯನದ ಮುಖಾಂತರ ಸಾಬೀತಾಗಿದೆ.

೩. ಉದ್ಯೋಗ ಸೃಷ್ಠಿಯ ಬಗ್ಗೆ ಅಧ್ಯಯನ ನಡೆಸಿದಾಗ ಸ್ವಂತ ಉದ್ಯೋಗ ಮತ್ತು ಕೂಲಿ ಉದ್ಯೋಗಿಗಳನ್ನು ಗಣನೆಗೆ ತೆಗೆದುಕೊಳ್ಳಲಾಯಿತು. ಧಾರ್ಮಿಕ ಪ್ರವಾಸೀ ಕೇಂದ್ರಗಳಲ್ಲಿ ೪೫೩ಜನರು ಸ್ವಂತ ಉದ್ಯೋಗ ಮತ್ತು ೨೫ ಜನರು ಕೂಲಿಗಾಗಿ ಉದ್ಯೋಗದಲ್ಲಿರುವುದು ಕಂಡುಬಂದಿದೆ. ಅದೇ ರೀತಿ ಪ್ರಾಕೃತಿಕ ಕೇಂದ್ರಗಳಲ್ಲಿ ೪೦ ಮಂದಿ ಸ್ವಂತ ಉದ್ಯೋಗಿಗಳು ಮತ್ತು ೨೪ ಮಂದಿ ಕೂಲಿ ಉದ್ಯೋಗಿಗಳಿದ್ದಾರೆ. ವೈದ್ಯಕೀಯ ಪ್ರವಾಸೀ ಕೇಂದ್ರಗಳಲ್ಲಿ ೧೫ಮಂದಿ ಸ್ವಂತ ಉದ್ಯೋಗಿಗಳಾಗಿ ಮತ್ತು ೪ ಮಂದಿ ಕೂಲಿಗಾಗಿ ಉದ್ಯೋಗ ನಡೆಸುತ್ತಿರುವುದು ಕಂಡು ಬಂದಿದೆ.

೪. ಕಿರು ಉದ್ಯಮಗಳಲ್ಲಿರುವ ಪುರುಷ ಮತ್ತು ಮಹಿಳೆಯರ ಸಂಖ್ಯೆಯನ್ನು ವಿಶ್ಲೇಷಿಸಿದಾಗ ಧಾರ್ಮಿಕ ಕೇಂದ್ರಗಳಲ್ಲಿ ೩೮ಮಂದಿ ಪುರುಷರು ಮತ್ತು ೩೨ಮಂದಿ ಮಹಿಳೆಯರು, ವೈದ್ಯಕೀಯ ಕೇಂದ್ರಗಳಲ್ಲಿ ೧೫ಮಂದಿ ಪುರುಷರು ಮತ್ತು ೪ಮಂದಿ ಮಹಿಳೆಯರು ಉದ್ಯೋಗದಲ್ಲಿ ಇರುವುದು ಅಧ್ಯಯನದಿಂದ ಕಂಡುಬಂದಿದೆ.

೫. ತಿಂಗಳ ವಹಿವಾಟನ್ನು ವಿಶ್ಲೇಷಿಸಿದಾಗ ಧಾರ್ಮಿಕ ಕೇಂದ್ರಗಳಲ್ಲಿ ೩೩.೮೪% ಸರಾಸರಿ ವಹಿವಾಟು, ಪ್ರಾಕೃತಿಕ ಕೇಂದ್ರಗಳಲ್ಲಿ ೩೮.೫೩% ಸರಾಸರಿ ವಹಿವಾಟು ಮತ್ತು ವೈದ್ಯಕೀಯ ಕೇಂದ್ರಗಳಲ್ಲಿ ೨೭.೬೩% ಸರಾಸರಿ ವಹಿವಾಟು ಮತ್ತು ವೈದ್ಯಕೀಯ ಕೇಂದ್ರಗಳಲ್ಲಿ ೨೭.೬೩% ಸರಾಸರಿ ವಹಿವಾಟನ್ನು ಅಂದಾಜಿಸಲಾಗಿದೆ. ಪ್ರಾಕೃತಿಕ ಕೇಂದ್ರಗಳಲ್ಲಿ ಹೆಚ್ಚು ವಹಿವಾಟು ಕಂಡು ಬರುತ್ತದೆ.

೬. ಬಂಡವಾಳ ಹೂಡಿಕೆಯ ವಿಶ್ಲೇಷಣೆ ಮಾಡಿದಾಗ ಧಾರ್ಮಿಕ ಕೇಂದ್ರಗಳಲ್ಲಿ ಬಂಡವಾಳದ ಪ್ರಮಾಣ ೪೨.೪೯%; ಪ್ರಾಕೃತಿಕ ಕೇಂದ್ರಗಳಲ್ಲಿ ೩೭.೮೦% ಮತ್ತು ವೈದ್ಯಕೀಯ ಕೇಂದ್ರಗಳಲ್ಲಿ ೧೯.೭೧% ಬಂಡವಾಳ ಪ್ರಮಾಣ ಕಂಡು ಬಂದಿದೆ. ಧಾರ್ಮಿಕ ಕೇಂದ್ರಗಳಲ್ಲಿ ಹೆಚ್ಚು ಪ್ರಮಾಣದ ಬಂಡವಾಳ ಹೂಡಿಕೆಯನ್ನು ಕಾಣಬಹುದು.

೭. ಕಿರು ಉದ್ಯಮಗಳ ವೆಚ್ಚಗಳ ಬಗ್ಗೆ ಅಧ್ಯಯನ ನಡೆಸಿದಾಗ ಧಾರ್ಮಿಕ ಕೇಂದ್ರಗಳಲ್ಲಿ ೪೪.೬೨%, ಪ್ರಾಕೃತಿಕ ಕೇಂದ್ರಗಳಲ್ಲಿ ೨೫.೩೭% ವೈದ್ಯಕೀಯ ಕೇಂದ್ರಗಳಲ್ಲಿ ೩೦.೦೧% ಸರಾಸರಿ ವೆಚ್ಚ ಪ್ರಮಾಣ ಕಂಡು ಬಂದಿರುತ್ತದೆ. ಧಾರ್ಮಿಕ ಕೇಂದ್ರಗಳಲ್ಲಿ ವೆಚ್ಚ ಪ್ರಮಾಣ ಅಧಿಕವಾಗಿರುವುದು ಕಂಡು ಬರುತ್ತದೆ.

೮. ಕಿರು ಉದ್ಯಮಗಳ ಆದಾಯದ ಬಗ್ಗೆ ವಿಶ್ಲೇಷಿಸಿದಾಗ ಧಾರ್ಮಿಕ ಪ್ರವಾಸೀ ಕೇಂದ್ರಗಳಲ್ಲಿ ೩೯.೨೧%, ಪ್ರಾಕೃತಿಕ ಪ್ರವಾಸೀ ಕೇಂದ್ರಗಳಲ್ಲಿ ೩೪.೦೬%, ವೈದ್ಯಕೀಯ ಕೇಂದ್ರಗಳಲ್ಲಿ ೨೬.೭೩% ವಾರ್ಷಿಕ ಆದಾಯ ಕಂಡು ಬಂದಿದೆ. ಧಾರ್ಮಿಕ ಪ್ರವಾಸೀ ಕೇಂದ್ರಗಳಲ್ಲಿ ಹೆಚ್ಚು ವಾರ್ಷಿಕ ಆದಾಯ ಕಂಡು ಬಂದಿದೆ.

೯. ಈ ಎಲ್ಲಾ ಪ್ರವಾಸೀ ಕೇಂದ್ರಗಳಲ್ಲಿಯ ಸಮಸ್ಯೆಗಳನ್ನು ವಿಶ್ಲೇಷಿಸಿದಾಗ ಧಾರ್ಮಿಕ ಕೇಂದ್ರಗಳಲ್ಲಿ ಉದ್ಯಮಗಳಲ್ಲಿ ಋತುಮಾಸಿಕ ಸಮಸ್ಯೆಗಳನ್ನು ಅತೀ ಹೆಚ್ಚಾಗಿ ಕಂಡು ಬಂದರೆ, ಪ್ರಾಕೃತಿಕ ಪ್ರವಾಸೀ ಕೇಂದ್ರಗಳಲ್ಲಿಯೂ ಋತುಮಾಸಿಕ ಸಮಸ್ಯೆಗಳನ್ನು ಅತ್ಯಧಿಕವಾಗಿ ಕಂಡು ಬಂದಿದೆ. ವೈದ್ಯಕೀಯ ಪ್ರವಾಸೀ ಕೇಂದ್ರಗಳಲ್ಲಿ ಅನಿಶ್ಚಿತತೆಯ ಸಮಸ್ಯೆಯ ಅತ್ಯಧಿಕವಾಗಿದೆ ಎಂದು ಅಧ್ಯಯನದ ಮುಖಾಂತರ ಕಂಡು ಬಂದಿರುತ್ತದೆ.

೧೦. ವಿವಿಧ ಪ್ರವಾಸೀ ಕೇಂದ್ರಗಳಲ್ಲಿ ಬೇರೆ ಬೇರೆ ರೀತಿಯ ಕಿರು ಉದ್ಯಮಗಳಿಗೆ ಅವಕಾಶ ಇದೆ. ಎಂದು ಈ ಅಧ್ಯಯನದಿಂದ ಕಂಡು ಬಂದಿರುತ್ತದೆ.

೧೧. ಧಾರ್ಮಿಕ ಕೇಂದ್ರಗಳಲ್ಲಿ ಮುಖ್ಯವಾಗಿ ಕಂಡು ಬರುವ ಕಿರು ಉದ್ಯಮಗಳೆಂದರೆ ಹಣ್ಣು ಕಾಯಿ, ಪೋಟೊ ಕ್ಯಾಸೆಟ್‌ಗಳ ಅಂಗಡಿಗಳು ಮತ್ತು ಹೊಟೇಲ್‌ಗಳು ಆಗಿರುತ್ತದೆ.

೧೨. ಸಮುದ್ರತೀರ ಮತ್ತು ಉದ್ಯಾನವನಗಳು ಕಂಡು ಬರುವ ಪ್ರಮುಖ ಕಿರು ಉದ್ಯಮಗಳೆಂದರೆ ತಳ್ಳಿಗಾಡಿಗಳಲ್ಲಿ ವಿವಿಧ ರೀತಿಯ ವ್ಯಾಪಾರ, ಫಾಸ್ಟ್ ಪುಡ್ ರೆಸ್ಟೋರೆಂಟ್‌ಗಳು, ಐಸ್‌ಕ್ರೀಂ ಗಾಡಿಗಳಾಗಿರುತ್ತವೆ.

೧೩. ವೈದ್ಯಕೀಯ ಕೇಂದ್ರಗಳಲ್ಲಿ ಮುಖ್ಯವಾಗಿ ಕಂಡು ಬರುವ ಕಿರು ಉದ್ಯಮಗಳೆಂದರೆ ಎಳನೀರು ಮತ್ತು ಹಣ್ಣು ಹಂಪಲುಗಳ ಅಂಗಡಿಗಳು ಮತ್ತು ಹೊಟೇಲ್‌ಗಳು ಆಗಿರುತ್ತದೆ.

೧೪. ಈ ಪ್ರದೇಶಗಳ ಪ್ರವಾಸೋದ್ಯಮಕ್ಕೆ ಹೊಂದಿಕೊಂಡು ಬೆಳೆಯುತ್ತಿರುವ ಇದೊಂದು ಪ್ರಮುಖ ಚಟುವಟಿಕೆ ಎಂದರೆ ಪ್ರವಾಸಿಗರಿಗೆ ಪ್ರಯಾಣದ ವ್ಯವಸ್ಥೆ ಮಾಡುವ ಸಾರಿಗೆ ಸಂಸ್ಥೆಗಳು. ಈ ಕಿರು ಉದ್ಯಮಗಳಲ್ಲಿ ಅನೇಕರು ಉದ್ಯೋಗವನ್ನು ಪಡೆದಿರುತ್ತಾರೆ.

೧೫. ಪ್ರವಾಸೀ ಕೇಂದ್ರಗಳಲ್ಲಿರುವ ಕಿರು ಉದ್ಯಮಗಳಲ್ಲಿ ಹೆಚ್ಚಾಗಿ ಮನೆಯುವರೇ ದುಡಿಯುತ್ತಾರೆ. ಇತರರಿಗೆ ಉದ್ಯೋಗ ಅವಕಾಶದ ಸೃಷ್ಟಿ ಕಡಿಮೆ ತೋರಿಬಂದಿದೆ.

೫.೩ ಸಲಹೆ ಸೂಚನೆಗಳು

ಪ್ರವಾಸೀ ಕೇಂದ್ರಗಳಲ್ಲಿ ಕಿರು ಉದ್ಯಮದ ಅಭಿವೃದ್ಧಿಗೆ ಈ ಕೆಳಗಿನ ಸಲಹೆಗಳನ್ನು ನೀಡಲಾಗಿದೆ.

- ಕಿರು ಉದ್ಯಮಗಳಿಗೆ ಪ್ರವಾಸೀ ಕೇಂದ್ರಗಳಲ್ಲಿ ಅಭಿವೃದ್ಧಿ ಹೊಂದಲು ಬೇಕಾದ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು.
- ಕಿರು ಉದ್ಯಮಗಳಿಗೆ ಹಣಕಾಸು ವ್ಯವಸ್ಥೆಯನ್ನು ಬ್ಯಾಂಕ್‌ಗಳು ಒದಗಿಸಬೇಕು ಇದರಿಂದ ಹೂಡಿಕೆ ಪ್ರಮಾಣ ಹೆಚ್ಚಾಗಿ ಅಭಿವೃದ್ಧಿಯ ಸಾಧ್ಯತೆಗಳಿರುತ್ತದೆ.
- ನಿರ್ದಿಷ್ಟ ಪ್ರವಾಸೀ ಕೇಂದ್ರಗಳಲ್ಲಿ ಸೂಕ್ತ ಹಾಗೂ ಸರಿಹೊಂದುವ ಉದ್ಯಮಗಳನ್ನು ಮಾತ್ರ ಪ್ರೋತ್ಸಾಹಿಸಬೇಕು.
- ಪ್ರವಾಸೀ ಕೇಂದ್ರಗಳಲ್ಲಿರುವ ಕಿರು ಉದ್ಯಮಗಳು ಸಂಘಟನೆಗೊಳ್ಳಬೇಕು.
- ವ್ಯಾಪಾರದಲ್ಲಿ ಬರುವ ಋತುಮಾಸಿಕ ವೈಪರಿತ್ಯಗಳನ್ನು ಸರಿಹೊಂದಿಸಲು ಕ್ರಮ ಕೈಗೊಳ್ಳಬೇಕು.
- ಕಿರು ಉದ್ಯಮಗಳು ಪ್ರವಾಸಿಗರಿಗೂ ಉಪಯುಕ್ತ ಸೌಲಭ್ಯವಾಗಿರುವುದರಿಂದ ಇವುಗಳ ಅಭಿವೃದ್ಧಿ ಪ್ರವಾಸಿಗರ ದೃಷ್ಟಿಯಿಂದಲೂ ಅಗತ್ಯವಾಗಿದೆ.
- ಪ್ರವಾಸೀ ಕೇಂದ್ರಗಳಲ್ಲಿ ಕಿರುಉದ್ಯಮಿಗಳಿಗೆ ಬೇಕಾದ ಕಟ್ಟಡ ನಿರ್ಮಾಣ, ವಿದ್ಯುತ್ ಪೂರೈಕೆ ನೀರಿನ ವ್ಯವಸ್ಥೆಗಳನ್ನು ಒದಗಿಸುವಲ್ಲಿ ಸರ್ಕಾರ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು.
- ಹೊಟೇಲ್ ಉದ್ಯಮದಲ್ಲಿ ಹೂಡಿಕೆ ಮತ್ತು ಹಳೆಯ ಹವೇಲಿಗಳನ್ನು ಮತ್ತು ಕೋಟೆಗಳನ್ನು ನವೀಕರಿಸಬೇಕು.
- ಹೊಟೇಲು ಮತ್ತು ಉಪಹಾರ ಗೃಹಗಳಲ್ಲಿ ಸ್ವಚ್ಛವಾದ ಮತ್ತು ನೈರ್ಮಲ್ಯವಾದ ಆಹಾರದ ಲಭ್ಯತೆಯಿರಬೇಕು. ವ್ಯಾಪಾರದ ಉದ್ದೇಶದಿಂದ ಮತ್ತು ವಿಹಾರಕ್ಕಾಗಿ ಬರುವವರಿಗೆ ಮನೋರಂಜನೆ ಒದಗಿಸುವ ಸೌಲಭ್ಯಗಳು ಇರಬೇಕು.
- ಹೆದ್ದಾರಿಗಳ ಬದಿಯಲ್ಲಿ ಡ್ರೈವ್ ಥ್ರೂ ಉಪಹಾರ ಗೃಹಗಳನ್ನು ತೆರೆಯಬೇಕು.

ಕಿರು ಉದ್ಯಮಗಳ ಅಭಿವೃದ್ಧಿಗೆ ಪ್ರವಾಸೋದ್ಯಮದ ಅಭಿವೃದ್ಧಿಯಾಗಬೇಕು. ಪ್ರವಾಸೋದ್ಯಮದ ಅಭಿವೃದ್ಧಿಗೆ ಈ ಕೆಳಗಿನ ಸಲಹೆಗಳನ್ನು ನೀಡಲಾಗಿದೆ.

- ತಜ್ಞರು ಹಾಗೂ ಸ್ಥಳೀಯ ಜನರ ಸಹಕಾರದಿಂದ ಯೋಜಿತ ರೀತಿಯಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಬೇಕು.
- ಪ್ರವಾಸೀ ಆಕರ್ಷಣೆಗಳನ್ನು ಅರಿತುಕೊಂಡು ಅದಕ್ಕೆ ತಕ್ಕ ಸೌಲಭ್ಯಗಳನ್ನು ಒದಗಿಸಬೇಕು.
- ಪ್ರಸ್ತುತ ಪ್ರವಾಸೀ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಬೇಕು.
- ಉದ್ಯಮಗಳು, ಕೈಗಾರಿಕೆಗಳು ಮತ್ತು ನಗರ ಪ್ರದೇಶಗಳ ಬಳಿ ವಿಹಾರಾತ್ಮಕ ಚಟುವಟಿಕೆಗಳಿಗೆ ಅವಕಾಶ ಒದಗಿಸಬೇಕು.
- ಖಾಸಗಿ ವಲಯಕ್ಕೆ ಪ್ರವಾಸೋದ್ಯಮದ ಅಭಿವೃದ್ಧಿಯಲ್ಲಿ ಭಾಗವಹಿಸಲು ಅವಕಾಶ ನೀಡಬೇಕು.
- ರಾಜ್ಯ ಸರಕಾರಗಳು ಉದ್ದೇಶಿತ ಪ್ರವಾಸೋದ್ಯಮ ಯೋಜನೆಗಳನ್ನು ಕಾರ್ಯ ರೂಪಕ್ಕೆ ಇಳಿಸಲು ಸಹಕಾರ ನೀಡಬೇಕು.

೫.೪ ಮುಂದಿನ ಅಧ್ಯಯನಕ್ಕೆ ದಿಕ್ಸೂಚಿ

ಪ್ರವಾಸೋದ್ಯಮ ಕೇಂದ್ರಗಳಲ್ಲಿರುವ ಕಿರು ಉದ್ಯಮಗಳ ಕುರಿತು ಅಧ್ಯಯನ ಮಾಡುವುದು ಪ್ರವಾಸೋದ್ಯಮದ ಅಭಿವೃದ್ಧಿ ದೃಷ್ಟಿಯಿಂದ ಅನುಕೂಲವಾಗಿರುತ್ತದೆ. ಈ ಅಧ್ಯಯನ ಮಾಡಲಾಗಿದೆ. ಇದರ ಕುರಿತು ಸಮಗ್ರ ಅಧ್ಯಯನದ ಅಗತ್ಯವಿದೆ. ಕಿರು ಉದ್ಯಮಿಗಳ ಅಧ್ಯಯನ್ನವನ್ನು ಯಾತ್ರಿಕರ ದೃಷ್ಟಿಕೋನದಿಂದಲೂ ಮಾಡಬೇಕು. ಆದ್ದರಿಂದ ಪ್ರವಾಸಿಗರ ದೃಷ್ಟಿಕೋನದಿಂದ ಈ ಕಿರು ಉದ್ಯಮಿಗಳ ಅಧ್ಯಯನ ಮಾಡುವುದು ತುಂಬಾ ಅಗತ್ಯವಿದೆ.

ಕಿರು ಉದ್ಯಮದ ಕಡೆಯಿಂದಲೂ ಅಧ್ಯಯನ ಮಾಡುವಾಗ ಉದ್ಯಮ ನಿರ್ವಹಣೆಯ ಸಿದ್ಧಾಂತಗಳಡಿಯಲ್ಲಿ ಸಂಶೋಧನೆ ಮಾಡುವುದರಿಂದ ಈ ಉದ್ಯಮಗಳ ಸಮಗ್ರ ಅಧ್ಯಯನ ನಡೆಸಿದಂತೆ ಆಗುತ್ತದೆ. ಈ ಅಧ್ಯಯನದಲ್ಲಿ ಕೆಲವು ಅಂಶಗಳನ್ನು ಮಾತ್ರ ಪರಿಗಣಿಸಲಾಗಿತ್ತು. ಉದ್ಯಮಗಳ ವಾಣಿಜ್ಯ ಅಂಶಗಳು, ಹಣಕಾಸಿನ ಅಂಶಗಳು, ಮಾರುಕಟ್ಟೆ ಅಂಶಗಳು, ಅಪಾಯ ನಿರ್ವಹಣೆಯ ಅಂಶಗಳನ್ನು ಕೂಲಂಕುಷವಾಗಿ ಸಂಶೋಧನೆ ನಡೆಸಬೇಕಾಗಿದೆ. ಈ ಪ್ರಕಾರ

ಪ್ರವಾಸೋದ್ಯಮ ಕೇಂದ್ರದ ಕಿರು ಉದ್ಯಮಗಳ ಸಮಗ್ರ ಅಧ್ಯಯನವನ್ನು ನಾನಾ ದೃಷ್ಟಿಕೋನದಿಂದ ಮಾಡಬಹುದಾಗಿದೆ.

೫.೫ ಸಮಾರೋಪ

ಪ್ರವಾಸೋಧ್ಯಮ ಪ್ರಮುಖವಾಗಿ ಬೆಳೆಯುತ್ತಿರುವ ಸೇವಾ ಕ್ಷೇತ್ರವಾಗಿದೆ. ಈ ಕೇಂದ್ರಗಳಲ್ಲಿ ಅನೇಕ ಕಿರು ಉದ್ಯಮಗಳು ಬೆಳೆಯುತ್ತಿವೆ. ಪ್ರವಾಸೀ ಕೇಂದ್ರಗಳು ಉದ್ಯೋಗಕ್ಕೆ ಅವಕಾಶ ಮಾಡಿಕೊಡುವ ಚಟುವಟಿಕೆಗಳೂ ಆಗಿವೆ. ಆದ್ದುದರಿಂದ ಇವುಗಳ ಅಭಿವೃದ್ಧಿ ದೇಶದ ಅಭಿವೃದ್ಧಿಯನ್ನು ಸೂಚಿಸುತ್ತಿವೆ. ಈ ದೃಷ್ಟಿಯಿಂದ ಮಾಡಿದ ಈ ಅಧ್ಯಯನದಲ್ಲಿ ಕಂಡು ಬಂದಂತೆ ವಿವಿಧ ಪ್ರವಾಸೀ ಕೇಂದ್ರಗಳಲ್ಲಿ ಬೇರೆ ಬೇರೆ ಕಿರು ಉದ್ಯಮಗಳಿಗೆ ಅವಕಾಶವಿದೆ. ಅದೇ ರೀತಿ ಈ ಉದ್ಯಮಗಳ ಸಮಸ್ಯೆಗಳೂ ಅನೇಕವಿದೆ ಇದರ ಪರಿಹಾರಕ್ಕೆ ಸೂಕ್ತ ಕ್ರಮಗಳನ್ನು ಕೈಗೊಳ್ಳುವುದು. ಅಗತ್ಯ ಇದರಂತೆ ಈ ಉದ್ಯಮಗಳು ಸಂಘಟಿತವಾಗಬೇಕು. ಬ್ಯಾಂಕ್‌ಗಳು, ಸ್ಥಳೀಯ ಸಂಸ್ಥೆಗಳು, ಸರಕಾರದಿಂದ ಈ ಉದ್ಯಮಕ್ಕೆ ಬೇಕಾದ ಸೂಕ್ತ ಸಹಾಯಗಳು ದೊರಕಬೇಕು.

ಮಾರುಕಟ್ಟೆ ದೃಷ್ಟಿಯಿಂದ ನೋಡಿದಾಗ ಈ ಉದ್ಯಮಗಳಿಗೆ ಬೇಡಿಕೆಯ ಬೆಂಬಲವಿದೆ. ಪ್ರವಾಸಿಗರು ಕಿರು ಉದ್ಯಮಗಳ ಸೇವೆಯನ್ನು ಧನಾತ್ಮಕವಾಗಿ ಪ್ರೋತ್ಸಾಹಿಸುತ್ತಾರೆ. ಯಾಕೆಂದರೆ ಈ ಉದ್ಯಮಗಳ ಸೇವೆ ಪ್ರವಾಸೀ ಕೇಂದ್ರಗಳಲ್ಲಿ ಅಗತ್ಯವಾಗಿರುತ್ತದೆ. ಆದ್ದರಿಂದ ನಿರ್ದಿಷ್ಟ ಕೇಂದ್ರಗಳಲ್ಲಿ ಅಗತ್ಯವಿರುವ ಕಿರು ಉದ್ಯಮಗಳನ್ನು ಪೋತ್ಸಾಹಿಸಿ ಪ್ರವಾಸಿಗರಿಗೆ ಅನುಕೂಲ ಮಾಡಿಕೊಡಬೇಕು ಇದರಿಂದಾಗಿ ಪ್ರವಾಸೀ ಕೇಂದ್ರಗಳ ಬೆಳವಣಿಗೆಯು ಸಾಧ್ಯ ಹಾಗೂ ಇವುಗಳ ಬೆಳವಣಿಗೆಯಿಂದ ದೇಶದ ಆರ್ಥಿಕಾಭಿವೃದ್ಧಿಯಲ್ಲಿ ಯಾವುದೇ ಸಂಶಯವಿಲ್ಲ ಎಂದು ಖಚಿತವಾಗಿ ಹೇಳಬಹುದು.


ಅನುಬಂಧ - ೧

ಕರ್ನಾಟಕದ ನಕ್ಷೆ



ಅನುಬಂಧ - ೨

ದಕ್ಷಿಣ ಕನ್ನಡದ ನಕ್ಷೆ



ಅನುಬಂಧ - ೩

ಪ್ರವಾಸೀ ಕೇಂದ್ರಗಳಲ್ಲಿ ಕಿರು ಉದ್ಯಮಗಳ ಅಭಿವೃದ್ಧಿ ಒಂದು ಅಧ್ಯಯನ

ಪ್ರಶ್ನಾವಳಿ

೧. ಸಾಮಾನ್ಯ ಮಾಹಿತಿ

೨. ಕೌಟುಂಬಿಕ ಮಾಹಿತಿ

೩. ಕಿರು ಉದ್ಯಮದ ಮಾಹಿತಿ

೧. ಸಾಮಾನ್ಯ ಮಾಹಿತಿ

೧.೧ ಹೆಸರು :

೧.೨ ವಿಳಾಸ :

೧.೩ ವಯಸ್ಸು :

೧.೪ ಲಿಂಗ :

೨. ಕುಟುಂಬ ಮಾಹಿತಿ

೨.೧ ಕುಟುಂಬ ಜನಸಂಖ್ಯೆ

ಪುರುಷ	ಮಹಿಳೆ	ಮಕ್ಕಳು	ಒಟ್ಟು ಸಂಖ್ಯೆ

೨.೨ ಕುಟುಂಬ ಮೂಲವೃತ್ತಿ ಅಥವಾ ಸಾಂಪ್ರಾದಾಯಿಕ ವೃತ್ತಿ ಏನು?

೨.೩ ಕುಟುಂಬ ಸದಸ್ಯರಲ್ಲಿ ಯಾರಾದರೂ ಕಿರು ಉದ್ಯಮ ನಡೆಸುತ್ತಿದ್ದಾರಾ?

೩. ಕಿರು ಉದ್ಯಮದ ಮಾಹಿತಿ

೩.೧ ಪ್ರವಾಸೋದ್ಯಮ ಕೇಂದ್ರ

೩.೨ ಉದ್ಯಮದ ಹೆಸರು

೩.೩ ಎಷ್ಟು ವರ್ಷದಿಂದ ಈ ಉದ್ಯಮ ನಡೆಸುತ್ತಿದ್ದೀರೀ?

೩.೪ ದಿನದ ಎಷ್ಟು ಗಂಟೆ ಕೆಲಸ ಮಾಡುತ್ತೀರಾ?

೩.೫ ಯಾವ ಋತುವಿನಲ್ಲಿ ಬಿಡುವು?

೩.೬ ಎಷ್ಟು ಜನ ಈ ಉದ್ಯೋಗದಲ್ಲಿದ್ದಾರೆ?

ಮನೆಯವರು

ಇತರ ಕೆಲಸಗಾರರು

೩.೭ ಇತರ ಕೆಲಸಗಾರರ ದಿನವಹಿ/ವಾರದ / ತಿಂಗಳ ಸಂಬಳ

೩.೮ ಇದರ ಜೊತೆಗೆ ಬೇರೆ ಉದ್ಯೋಗ ಮಾಡುತ್ತೀರಾ?

೩.೯ ಒಂದು ತಿಂಗಳಿನಲ್ಲಿ ಅಂದಾಜು ವಹಿವಾಟು ಎಷ್ಟು?

ಜನವರಿ	ಫ್ರೆಬವರಿ	ಮಾರ್ಚ್	ಎಪ್ರಿಲ್	ಮೇ	ಜೂನ್	ಜುಲೈ	ಅಗಸ್ಟ್	ಸೆಪ್ಟೆಂಬರ್	ಅಕ್ಟೋಬರ್	ನವೆಂಬರ್	ಡಿಸೆಂಬರ್

೩.೧೦ ಆದಾಯ? ಋತುವಿನಲ್ಲಿ ______ ವಾರ್ಷಿಕ ________

೩.೧೧ ವಾರ್ಷಿಕವಾಗಿ ಎಷ್ಟು ಬಂಡವಾಳ ಹೂಡುತ್ತೀರಾ? _______

೩.೧೨ ವರ್ಷ ಅಥವಾ ತಿಂಗಳಿಗೆ ತಗಲುವ ವೆಚ್ಚ _________ ಲಾಭ ________

ವೆಚ್ಚಗಳ ವರ್ಗೀಕರಣ

ಬಾಡಿಗೆ

ವಿದ್ಯುತ್

ಕೆಲಸಗಾರರ ಸಂಬಳ

ಸುಂಕ

ಸಾಗಾಣಿಕೆ

ಇತರೆ

೩.೧೩ ಈ ಉದ್ಯಮದ ಮುಖ್ಯ ಸಮಸ್ಯೆಗಳೇನು?

೩.೧೩ ೧.

೨.

೩.

೪.

೫.

೩.೧೪

	ಸಮಸ್ಯೆಗಳು				
೧.	ಋತುಮಾಸಿಕ				
೨.	ಕಾರ್ಮಿಕ				
೩.	ಅನಿಶ್ಚಿತತೆ				
೪.	ಮೂಲಭೂತ				
೫.	ಬಾಡಿಗೆ				
೬.	ಹಣಕಾಸು ಮತ್ತು ಮಾರುಕಟ್ಟೆ				
೭.	ಇತರ ಸಮಸ್ಯೆಗಳು				

೩.೧೫ ಪ್ರಸಕ್ತ ಕೈಗೊಂಡಿರುವ ಉದ್ಯಮವನ್ನು ಬದಲಾಯಿಸುವ ಇರಾದೆ ಇದೆಯೋ/ಇಲ್ಲವೋ

ಇದ್ದರೆ ಕಾರಣ ತಿಳಿಸಿ?

ಇಲ್ಲದಿದ್ದರೆ ಕಾರಣ ತಿಳಿಸಿ?

೩.೧೬ ಈ ಉದ್ಯಮದಲ್ಲಿ ಯಾವ ವಸ್ತುಗಳಿಗೆ ಹೆಚ್ಚು ಬೇಡಿಕೆ ಇದೆ?

೩.೧೭ ಈ ಉದ್ಯಮದಲ್ಲಿ ತೊಡಗಿಸಿದ ಹಣಕಾಸಿನ ಮೂಲ

ಸ್ವಂತ

ಬ್ಯಾಂಕ್ ಸಾಲ

ಇತರ ಮೂಲಗಳು

೩.೧೮ ಉದ್ಯೋಗ ಕೈಗೊಳ್ಳುವ ಮೊದಲು ಆರ್ಥಿಕ ಪರಿಸ್ಥಿತಿ

೩.೧೯ ಉದ್ಯೋಗ ಕೈಗೊಂಡ ನಂತರ ಆರ್ಥಿಕ ಪರಿಸ್ಥಿತಿ

೨.೨೦ ಉದ್ಯಮವು ಲಾಭದಾಯಕವಾಗಿದೆ: ಅ. ಬಹಳ ಸಾಧಾರಣ

೩.೨೧ ಪ್ರವಾಸೀ ಕೇಂದ್ರಗಳಲ್ಲಿ ವ್ಯಾಪಾರದ ಅಭಿವೃದ್ಧಿಗೆ ಸಲಹೆಗಳನ್ನು ಸೂಚಿಸಿ

೧.

೨.

೩.

೪.

೫.

೬.

೭.

೮.

೯.

ಪರಾಮರ್ಶನ ಗ್ರಂಥಗಳು

೧. ನಾರ್ಬರ್ಟ್ ವ್ಯಾನ್ ಕೋವ್ – "ದಿ ಇಕ್‌ನಾಮಿಕ್ಸ್ ಆಫ್ ಟೂರಿಸಂ ಡೆಸ್ಟಿನೇಶನ್ಸ್" ಪಬ್ಲಿಕ್‌ಡ್ ಇನ್ ೨೦೦೫ ಬಟ್‌ರ್ ವರ್ತ್ ಹ್ಯಾನಿಮನ್ ಪಬ್ಲಿಶರ್ಸ್

೨. ಸೋನಾಲಿ ಕುಲಕರ್ಣಿ – "ಮೆಡಿಕಲ್ ಟ್ಯೂರಿಸಂ ಇನ್ ಇಂಡಿಯಾ" ಪಬ್ಲಿಶ್‌ಡ್ ಇನ್ ೨೦೦೮– ಬುಕ್ ಎನ್‌ಕ್ಲೇವ್ ಪಬ್ಲಿಶರ್ಸ್

೩. ಎಂ.ಎಲ್.ನರಸಯ್ಯ – "ಗ್ಲೋಬಲೈಯೇಶನ್ ಆ್ಯಂಡ್ ಸಸ್ಟೈನೇಬಲ್ ಟ್ಯೂರಿಸಂ ಡೆವಲಪ್ ಮೆಂಟ್ "ಪಬ್ಲಿಶ್‌ಡ್ ಇನ್ ೨೦೦೪ ಡಿಸ್‌ಕವರಿ ಪಬ್ಲಿಶಿಂಗ್ ಹೌಸ್

೪. ವಿಶ್ವನಾಥ್ ಘೋಶ್ – ಟೂರಿಸಂ ಆ್ಯಂಡ್ ಟ್ರಾವೆಲ್ ಮೆನೇಜ್‌ಮೆಂಟ್ ಸೆಕೆಂಡ್ ರಿವೈಸ್‌ಡ್ ಎಡಿಷನ್ ೨೦೦೦ ರಿಪ್ರಿಂಟ್‌ಡ್ ಇನ್ ೨೦೦೩ ಪಬ್ಲಿಶ್‌ಡ್ ಬೈ ವಿಕಾಸ್ ಪಬ್ಲಿಶಿಂಗ್ ಹೌಸ್ ಪ್ರೈವೇಟ್ ಲಿಮಿಟೆಡ್

೫. ೧ಎ.ಕೆ. ಭಾಟಿಯಾ – ಟೂರಿಸಂ ಡೆವೆಲಪ್‌ಮೆಂಟ್ ಪ್ರಿನ್ಸಿಪಲ್ಸ್ ಆ್ಯಂಡ್ ಪ್ರಾಕ್ಟೀಸಸ್ ಎ ಪ್ರಿಂಟೆಡ್ ಇನ್ ೨೦೦೩ ಸ್ಟರ್‌ಲಿಂಗ್ ಪಬ್ಲಿಪರ್ಸ್ ಪ್ರೈವೇಟ್ ಲಿಮಿಟೆಡ್

೬. ರೋಮಿಲಾ ಚಾವ್ಲಾ – "ಲಾ ಆ್ಯಂಡ್ ಟ್ಯೂರಿಸಂ ಡೆವಲಪ್‌ಮೆಂಟ್" ಸೋನಾಲಿ ಪಬ್ಲಿಕೇಶನ್ಸ್ ನ್ಯೂಡೆಲ್ಲಿ

೭. ಚಂದ್ರಪೂಜಾರಿ ಎಂ – ಸಂಶೋಧನೆ ಏನು? ಏಕೆ? ಹೇಗೆ? ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ ೨೦೦೯

೮. ಶಿಶಿಲ ಪ್ರಭಾಕರ – ಅಭಿವೃದ್ಧಿ ಅರ್ಥಶಾಸ್ತ್ರ, ಕಲಾಪ್ರಕಾಶನ, ಬೆಂಗಳೂರು ೨೦೦೫

೯. ಎಂ.ಎಲ್.ಜಿಂಗನ್ – "ದ ಇಕಾನಾಮಿಕ್ಸ್ ಆಫ್ ಡೆವಲಪ್‌ಮೆಂಟ್ ಆ್ಯಂಡ್ ಪ್ಲಾನಿಂಗ್; ವಾಣಿ ಎಡ್ಯುಕೇಶನಲ್ ಬುಕ್ಸ್

೧೦. ಡಾ. ಪ್ರಭಾಕರ್ ಶಿಶಿಲ– ಅರ್ಥ ವಿಜ್ಞಾನದ ಮೂಲ ತತ್ವಗಳು ಮಂಗಳ ಪ್ರಕಾಶನ ೨೦೦೦

೧೧. ಡಾ॥ ಜಯಕುಮಾರ್ ಶೆಟ್ಟಿ ಆ್ಯಂಡ್ ಡಾ॥ ಜಯವಂತ ನಾಯಕ್" ಇಕ್‌ನಾಮಿಕ್ಸ್ ಆಫ್ ಡೆವಲಪ್‌ಮೆಂಟ್" ಮಂಗಳ ಪಬ್ಲಿಕೇಶನ್ಸ್ ೨೦೦೮

೧೨. ಬೆಂಜಮಿನ್ ಹಿಗ್ಗಿನ್ಸ್ – "ಇಕ್‌ನಾಮಿಕ್ ಡೆವಲಪ್‌ಮೆಂಟ್" ಸೆಂಟ್ರಲ್ ಬುಕ್ ಡಿಪೋಅಲಹಾಬಾದ್ ೧೯೮೨

೧೩. ಒಡೆಯರ್ ಹೆಗ್ಗಡೆ - ಅಭಿವೃದ್ಧಿ ದೇಶಗಳ ಆಧುನಿಕ ಆರ್ಥಿಕಾಭಿವೃದ್ಧಿ ಪದ್ಮ ಪ್ರಕಾಶನ ಬೆಂಗಳೂರು ೧೯೮೬

೧೪. ಕೆ.ಡಿ. ಬಸವ – "ಆಧುನಿಕ ಭಾರತದ ಆರ್ಥಿಕ ಅಭಿವೃದ್ಧಿ" ವಿದ್ಯಾವಾಹಿನಿ ಪ್ರಕಾಶನ ಹುಬ್ಬಳ್ಳಿ.

೧೫. ಎಚ್ಚಾರ್ಕೆ – ಆರ್ಥಿಕ ಸಿದ್ದಾಂತ

೧೬. ನರಸಿಂಹ ಮೂರ್ತಿ – ಆರ್ಥಿಕ ಬೆಳವಣಿಗೆಯ ಸಿದ್ಧಾಂತಗಳು ಪದ್ಮ ಪ್ರಕಾಶನ ಬೆಂಗಳೂರು ೧೯೮೨

೧೭. ಶ್ರೀಪತಿ ಕಲ್ಲೂರಾಯ, ಜಯವಂತ ನಾಯಕ್, ಶರ್ವೀನಾ ಮೆಹ್ತಾಬ್ – "ಇಕ್‌ನಾಮಿಕ್ ಡೆವಲಪ್‌ಮೆಂಟ್ ಆಫ್ ಇಂಡಿಯಾ" ೨೦೦೫ ಮಂಗಳಾ ಪಬ್ಲಿಕೇಶನ್ಸ್

೧೮. ಎಚ್ಚಾರ್ಕೆ – "ಅಭಿವೃದ್ಧಿ ಅರ್ಥಶಾಸ್ತ್ರ" ಫಸ್ಸ್ ಎಡಿಷನ್ ೨೦೦೮ ಪಬ್ಲಿಪಕ್ಸ್ ಸಪ್ನಾ ಬುಕ್ ಹೌಸ್ ಪ್ರೈವೇಟ್ ಲಿಮಿಟೆಡ್ ಬೆಂಗಳೂರು.

೧೯. ತ್ರಿಲೋಕಸಿಂಗ್ ಪಾರ್‌ಮಾರ್ – ಮೇನೇಜ್‌ಮೆಂಟ್ ಆ್ಯಂಡ್ ಎಡ್‌ಮಿನಿಸ್ಟ್ರೇಷನ್ ಆಫ್ ಟೂರಿಸಂ" ಪಸ್ಟ್ ಎಡಿಷನ್ – ೨೦೦೮, ಪಬ್ಲಿಪಕ್ಸ್ – ಸೈಬರ್ ಟೆಕ್ ಪಬ್ಲಿಕೇಶನ್ಸ್.